# ಪ್ರಸಾದ

ದ್ವೈಮಾಸಿಕ

ಸಂಪುಟ 32 ಸಂಚಿಕೆ 5 ಸೆಪ್ಟೆಂಬರ್-ಅಕ್ಟೋಬರ್ 2017




ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು



ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೆಯ ಜಯಂತಿ ಸಂದರ್ಭದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ರಾಜೇಂದ್ರ ಶ್ರೀಗಳವರ ಪುತ್ಥಳಿ ನಿರ್ಮಾಣ ಶಿಲಾನ್ಯಾಸವನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ನೆರವೇರಿಸಿದರು. ಚಿತ್ರದಲ್ಲಿ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀ ಎಚ್.ಪಿ. ಮಂಜುನಾಥ್, ಶ್ರೀ ಆದಿಚುಂಚನಗಿರಿ ಶ್ರೀಗಳು, ಶ್ರೀ ಸಿದ್ದರಾಮಯ್ಯನವರು, ಪೂಜ್ಯ ಜಗದ್ಗುರುಗಳು, ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಎಂ.ಕೆ. ಸೋಮಶೇಖರ್ ಮತ್ತಿತರರು (29.8.2017)

# ಪ್ರಸಾದ

**ಸಂಪುಟ 32 :  ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್ 2017**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರ ಮಠ

ಶ್ರೀ ಎಸ್.ಪಿ. ಮಂಜುನಾಥ್

ಶ್ರೀ ಎಸ್. ನಂಜುಂಡಯ್ಯ

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 9

ಧರ್ಮ ಮತ್ತು ಪ್ರೀತಿ 11
**ಡಾ. ವಿಜಯಕುಮಾರ ಮಹಾನುಭಾವಿಗಳು**

"ಇಷ್ಟಲಿಂಗನಿಷ್ಠ" ಅಮುಗಿದೇವ 19
**ಎಚ್.ಸಿ. ರಜತ್**

ಅಲ್ಲಮನೆಂಬ ಜ್ಞಾನಜಂಗಮ 26
**ಪ್ರೊ. ಸಿ.ಪಿ. ಸಿದ್ಧಾಶ್ರಮ**

ಶ್ರೀ ಗೌರೀಶಂಕರ ಮಹಾಸ್ವಾಮಿ ವಿರಚಿತ
ಬಸವಾನಂದಲಹರೀ - ಅನುವಾದ ಮತ್ತು ವಿವರಣೆ 42
**ವಿದ್ವಾನ್ ಎಚ್.ವಿ. ನಾಗರಾಜರಾವ್**

ವಾರ್ತಾವಿಹಾರ 53

ಕೃತಿ-ಸ್ವೀಕೃತಿ 63


ಮುಖಪುಟ ಚಿತ್ರ

ಶ್ರೀ ಸುತ್ತೂರು ಶಾಖಾ ಮಠದಲ್ಲಿ ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೆಯ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಆದಿಚುಂಚನಗಿರಿ ಜಗದ್ಗುರುಗಳು, ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಕೆ. ವೆಂಕಟೇಶ್, ಶ್ರೀ ಎಚ್.ಪಿ. ಮಂಜುನಾಥ, ಶ್ರೀ ಆರ್. ನರೇಂದ್ರ, ಶ್ರೀ ಕಳಲೆ ಎನ್. ಕೇಶವಮೂರ್ತಿ (29.8.2017)

blank

# ಸಂಪಾದಕೀಯ

ದಿನಾಂಕ 22.10.2017 ಭಾನುವಾರದಂದು ಎಪ್ಪತ್ತು ವರ್ಷಗಳು 'ತುಂಬಿತು' (ಇದು 'ಕಳೆಯಿತು' ಎನ್ನುವುದರ ಸಾಂಸ್ಕೃತಿಕ ಪರಿಭಾಷೆ) ಎನ್ನುವ ಕಾರಣಕ್ಕಾಗಿ ವಿದ್ಯಾರ್ಥಿಮಿತ್ರರು, ಅಭಿಮಾನಿಗಳು ಸೇರಿ ಮೈಸೂರಿನ ಕಲಾಮಂದಿರದಲ್ಲಿ ನನಗೆ ಒಂದು ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ನನ್ನ ಬದುಕು-ಬರಹವನ್ನು ಕುರಿತು ಎಂದಿನಂತೆ ಒಂದಿಷ್ಟು ಪ್ರೀತಿಯ ಮಾತುಗಳನ್ನು ಆಡುವುದರ ಜೊತೆಗೆ ಒಂದು ಸಂವಾದ ಕಾರ್ಯಕ್ರಮವನ್ನೂ ಆಯೋಜಿಸಲಾಗಿತ್ತು. ಈ ಸಂವಾದ ಕಾರ್ಯಕ್ರಮ ಮುಗಿದ ನಂತರ ಪ್ರಶ್ನೋತ್ತರದಲ್ಲಿ ಭಾಗವಹಿಸಿದ್ದ ಮಿತ್ರರೊಬ್ಬರು ಬಂದು, "ಸರ್, ನನ್ನದೊಂದು ಪ್ರಶ್ನೆಯಿತ್ತು, ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬಾರದು ಎಂದು ವೇದಿಕೆಯ ಮೇಲೆ ಕೇಳಲಿಲ್ಲ. ಅದೇನೆಂದರೆ ಈಗ ಸಮಾಜದಲ್ಲಿ ಗೊಂದಲಕ್ಕೆ ಕಾರಣವಾಗಿರುವ ವೀರಶೈವ, ಲಿಂಗಾಯತ ಧರ್ಮಸಂಬಂಧಿಯಾದ ಚರ್ಚೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಇದರಲ್ಲಿ ನೀವು ಯಾವುದರ ಪರ?" ಎಂದರು. ಈ ಪ್ರಶ್ನೆಯನ್ನು ನಾನು ವೇದಿಕೆಯ ಮೇಲೆಯೇ ನಿರೀಕ್ಷಿಸಿದ್ದೆ. ನನ್ನ ಉತ್ತರವೂ ನನ್ನೊಳಗೆ ಆಗಲೇ ಸ್ಪಷ್ಟ ರೂಪವನ್ನು ಪಡೆದಿತ್ತು.

ಅಂದಿನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದವರು ಸಾಹಿತಿ ಚಂದ್ರಶೇಖರ ಪಾಟೀಲ್. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಎಡ, ಬಲ ಪಂಥಗಳ ಬಗ್ಗೆ ಮಾತನಾಡಿ ತಾನು ಎಡಪಂಥೀಯ ಎಂದು ಘೋಷಣೆ ಮಾಡುತ್ತಾ (ಇದು ಅವರ ಯಾವತ್ತೂ ನಿಲುವು) "ಬಹು ದೊಡ್ಡ ಪ್ರಗತಿಗಾಮಿಯಾದ ಬಸವಣ್ಣನನ್ನು ಒಪ್ಪುವವರೆಲ್ಲರೂ ಎಡಪಂಥೀಯರೇ. ಅವನನ್ನು ಒಪ್ಪದವರು ಬಲಪಂಥೀಯರು, ಅರ್ಥಾತ್ ಸಂಪ್ರದಾಯವಾದಿಗಳು. ಈ ದೃಷ್ಟಿಯಿಂದ ಮಲೆಯೂರರೂ ಎಡಪಂಥೀಯರೇ ಆಗಿದ್ದಾರೆ. ಇದನ್ನು ಹೇಳಿಕೊಳ್ಳೋಕೆ ಅವರು ಸಂಕೋಚಪಡಬೇಕಿಲ್ಲ" ಎಂದರು.

ನನಗೇಕೋ ಈ ಎಡಪಂಥ, ಬಲಪಂಥ ಎನ್ನುವ ಪರಿಭಾಷೆಗಳೇ ಒಗ್ಗುವುದಿಲ್ಲ. 'ಎಡ' ಎನ್ನುವುದು ಅತಿಯಾಗಿ 'ಎಡವಟ್ಟು' ಆಗಿ ಸಾಮಾಜಿಕವಾದ ಗೊಂದಲಗಳಿಗೆ ಕಾರಣವಾಗುತ್ತದೆ. ಇದಕ್ಕಿಂತ 'ಪ್ರಗತಿಶೀಲ' ಎನ್ನುವ ಪದ ಹೆಚ್ಚು ಅರ್ಥಪೂರ್ಣವಾದದ್ದು ಎನಿಸುತ್ತದೆ. ಇಲ್ಲಿ ಪ್ರಗತಿಯೂ ಇದೆ 'ಶೀಲ'ವೂ ಇದೆ. ಶೀಲ ಅರ್ಥಾತ್

'ಚಾರಿತ್ರ್ಯ' ವಿಲ್ಲದ ಯಾವುದೇ 'ಗತಿ'ಯನ್ನು ಪ್ರಗತಿ ಎಂದು ಕರೆಯಲಾಗುವುದಿಲ್ಲ. ಅಂತಹ ಪಂಥಗಳು ಬಾಹ್ಯದಲ್ಲಿ ಮಾತ್ರ ಎಷ್ಟೇ ವಿಜೃಂಭಿಸಿದರೂ, ಆಂತರಿಕವಾಗಿ ಟೊಳ್ಳಾಗಿರುತ್ತವೆ. ಪೂರ್ಣದೃಷ್ಟಿಯಿಲ್ಲದ, ಆಂಶಿಕ ಸಮಸ್ಯೆಗಳ ಮೇಲೆ ಮಾತ್ರ ಕೇಂದ್ರೀಕೃತವಾದ ಯಾವುದೇ ಚಳವಳಿ (ಆಂದೋಲನ), ಆ ಸಮಸ್ಯೆಗೆ ಒಂದು ಪರಿಹಾರ ಸಿಕ್ಕಿದ ಕೆಲ ದಿನಗಳಲ್ಲಿಯೇ ಸ್ಥಗಿತವಾಗುತ್ತದೆ. ಈ ದೃಷ್ಟಿಯಿಂದ ಶರಣರು ಮಾಡಿದ ಕ್ರಾಂತಿ ಮಾತ್ರ 'ಸಂಪೂರ್ಣ ಕ್ರಾಂತಿ' ಎನ್ನುವುದಕ್ಕೆ ಅರ್ಹವಾಗಿದೆ. ಈ ಹಿನ್ನೆಲೆಯಲ್ಲಿ ನಾನು ನನ್ನ ಸ್ನೇಹಿತರಿಗೆ ಹೇಳಿದೆ, ನಾನು ಎಡವೂ ಅಲ್ಲ, ಬಲವೂ ಅಲ್ಲ, 'ಮಧ್ಯಪಂಥೀಯ' ಎಂದು. ಮಧ್ಯಪಂಥೀಯ ಎಂದಾಕ್ಷಣ ಯಾವುದರ ಬಗ್ಗೆಯೂ ಬದ್ಧತೆ ಇಲ್ಲದವರು ಎನ್ನುವ ನೇತ್ಯಾತ್ಮಕತೆ ಅಲ್ಲ. ಅದನ್ನೊಂದು ಸಮನ್ವಯ ಸಿದ್ಧಾಂತ ಎಂದು ಪರಿಭಾವಿಸ ಬೇಕು; ಅದರಲ್ಲೂ ಧರ್ಮ ಸಂಬಂಧಿಯಾದ ಚಿಂತನೆಗಳಲ್ಲಿ ಸಮನ್ವಯತೆಯ ಅನಿವಾರ್ಯತೆ ಇರುತ್ತದೆ. ಆಡಳಿತದಲ್ಲಿ ಒಂದು ಹೊಸ ಕಾನೂನು ರೂಪಿತವಾದ ತಕ್ಷಣ ನಾವು ಬಹುಬೇಗ ಅದಕ್ಕೆ ತಕ್ಕಂತೆ ನಮ್ಮ ವ್ಯವಹಾರದ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತೇವೆ. ಸಂಚಾರನಿಯಮಗಳಿಗೆ ತಕ್ಕಂತೆ ನಮ್ಮ ಚಲನೆಯ ಸ್ವರೂಪ ಬದಲಾಗುತ್ತದೆ. ವೈದ್ಯರ ಮಾರ್ಗದರ್ಶನಕ್ಕೆ ತಕ್ಕಂತೆ ನಮ್ಮ ಆಹಾರಕ್ರಮ ತಕ್ಷಣ ಬದಲಾಗುತ್ತದೆ. ಆದರೆ ಧರ್ಮಸಂಬಂಧಿಯಾದ ವಿಷಯಗಳು ಹಾಗಲ್ಲ. ಅದು ನಮ್ಮ ಬದುಕಿನ ಬಾಹ್ಯ ಕ್ರಮ ಮಾತ್ರವಾಗಿರದೆ, ಎಷ್ಟೋ ಕಾಲಮಾನದಿಂದ ನಮ್ಮ ಭಾವಕೋಶದಲ್ಲಿ ಗಟ್ಟಿಯಾಗಿ ಬೇರು ಬಿಟ್ಟಿರುವ ಬದುಕಿನ ಅವಿಭಾಜ್ಯ ಅಂಶವೂ ಆಗಿರುತ್ತದೆ. ಅದನ್ನು ಹೊರಹಾಕಲು ಎಷ್ಟೇ ಪ್ರಯತ್ನಿಸಿದರೂ ಸುಪ್ತಪ್ರಜ್ಞೆಯಲ್ಲಿ ಉಳಿದಿರಬಹುದಾದ ಒಂದು ಸಣ್ಣ ಮೊಳಕೆ ಚಿಗುರೊಡೆದು ಹೆಮ್ಮರವಾಗುತ್ತದೆ. ಆದ್ದರಿಂದ ಧರ್ಮಸಂಬಂಧಿಯಾದ ವಿಷಯಗಳೊಡನೆ ವ್ಯವಹರಿಸುವಾಗ ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ವ್ಯಷ್ಟಿ ಹಾಗೂ ಸಮಷ್ಟಿಯ ಬಗೆಗಿನ ಮನಃಶಾಸ್ತ್ರದ (Individual and Mass Psychology ನಿಚ್ಚಳ ಅರಿವು ಇರಬೇಕಾಗುತ್ತದೆ. ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ರೋಗಿ ತನ್ನ ಪತ್ನಿಯೋ, ಪುತ್ರನೋ ಆಗಿದ್ದರೂ, ವೈದ್ಯನಾದವನು ಅದು ನನ್ನದು ತನ್ನದು ಎನ್ನುವ ಪ್ರೀತಿ ಅಥವಾ, ಮೋಹಕ್ಕೆ ಒಳಗಾದರೆ, ಒಂದು ಪಕ್ಷ ರೋಗಿ ತನ್ನ ಶತ್ರುವಾಗಿದ್ದು ಅಲ್ಲಿ ದ್ವೇಷಕ್ಕೆ ಒಳಗಾದರೆ 'ಚಿಕಿತ್ಸೆ' ಅಪಾಯಕಾರಿಯೇ ಆಗುತ್ತದೆ. ರೋಗಿಯ ನೋವು ಮಾತ್ರ ವೈದ್ಯನ ಸಂವೇದನೆಗೆ ಕಾರಣವಾಗಬೇಕೆ ಹೊರತು ಬೇರಾವ ವೈಯಕ್ತಿಕ ಅಂಶಗಳೂ ಅಲ್ಲಿ ಇರಬಾರದು. ಈ ಮಾತುಗಳನ್ನು ಬರೆಯಬೇಕಾಗಿ ಬಂದ ಕಾರಣವಿಷ್ಟೇ:

ಕೆಲವು ದಿನಗಳಿಂದ ಧರ್ಮದ ಸ್ಥಾನಮಾನವನ್ನು ಕೇಳುವ ಹಿನ್ನೆಲೆಯಲ್ಲಿ ಅದು ವೀರಶೈವ ಆಗಬೇಕೋ, ಲಿಂಗಾಯತ ಎಂದು ಆಗಬೇಕೋ ಎನ್ನುವ ಚರ್ಚೆ(?) ಸಮಾಜಬಾಂಧವರ ಗೊಂದಲಕ್ಕೆ ಕಾರಣವಾಗಿದೆ. ಈ ಪದಗಳ ಬಳಕೆಗೆ ಚರ್ಚೆಯ

ಸ್ವರೂಪವನ್ನು ಮೊದಲಿಗೆ ಕೊಟ್ಟವರು ನಾಡಿನ ಬಹು ಶ್ರೇಷ್ಠ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಹಾಗೂ ಡಾ. ಎಂ. ಚಿದಾನಂದಮೂರ್ತಿಯವರು. ಬಸವಾದಿ ಪ್ರಮಥರ ಚಳವಳಿಯನ್ನು ಒಪ್ಪಿಕೊಂಡು ಏಕದೇವೋಪಾಸನೆಯ ಹಿನ್ನೆಲೆಯಲ್ಲಿ ಇಷ್ಟಲಿಂಗದೀಕ್ಷೆಯನ್ನು ಪಡೆದವರಿಗೆ 'ಲಿಂಗಾಯತ' ಎನ್ನುವ ಪದಪ್ರಯೋಗ ಸೂಕ್ತವಾದರೆ; ಶೈವದ ಒಂದು ಪ್ರಭೇದವಾಗಿ 'ಒಂದಿಷ್ಟು' ಪೂರ್ವದಿಂದಲೇ ಬಂದಿದ್ದವರಿಗೆ ವೀರಶೈವ ಎನ್ನುವುದು ಒಪ್ಪುತ್ತದೆ ಎಂದು ಅವರು ಹೇಳಿದರು.

ಈ ವಿದ್ವಾಂಸರ ಮಾತುಗಳು ಕೇವಲ ಸಂಶೋಧನೆಯ ಹಿನ್ನೆಲೆಯಲ್ಲಿ, ಪದಪ್ರಯೋಗಗಳನ್ನು ಸ್ಪಷ್ಟಪಡಿಸುವುದಕ್ಕೆ ಹೇಳಿದುವೇ ಹೊರತು, ಇನ್ನಾವುದೇ ಸಾಮಾಜಿಕ ಸಮಸ್ಯೆಯನ್ನು ಹುಟ್ಟುಹಾಕುವುದಾಗಿರಲಿಲ್ಲ. ಯಾವುದೇ ಸಂಶೋಧನೆಗಳು ನಡೆಯಬೇಕಾದುದೇ ಹೀಗೆ. ಒಂದು 'ಗಮ್ಯ'ವನ್ನು ತಲುಪುವ ಉದ್ದೇಶದಿಂದ ವಿದ್ವಾಂಸರು ಬೇರೆ ಬೇರೆ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಇಂತಹ ಚರ್ಚೆಗಳನ್ನು ಹುಟ್ಟುಹಾಕುತ್ತಾರೆ. ಕೆಲವೊಮ್ಮೆ ಬೌದ್ಧಿಕ ಪರಿಕಲ್ಪನೆಗಳನ್ನೂ (Hypothesis) ಮಾಡುತ್ತಾರೆ. ಇಲ್ಲಿ ಸರಿತಪ್ಪಿನ ಪ್ರಶ್ನೆ ಬರುವುದಿಲ್ಲ. ಸಂಶೋಧಕನ ಮನೋಧರ್ಮಕ್ಕೆ ತಕ್ಕ ಹಾಗೆ, ಅಥವಾ ಅವನು ಹುಟ್ಟಿ ಬೆಳೆದ ಸಮುದಾಯದ ಒಂದು ಭಾಗವಾಗಿ ಕೆಲವು ಹೇಳಿಕೆಗಳೂ ಹೊರಹೊಮ್ಮಬಹುದು (ಉದಾಹರಣೆಗೆ ಡಾ. ಚಿದಾನಂದಮೂರ್ತಿಯವರು ಜಂಗಮರಾಗಿರುವುದರಿಂದ ಅವರು ವೀರಶೈವದ ಪರವಾಗಿದ್ದಾರೆ ಎನ್ನುವವರು ಇದ್ದಾರೆ. ಆದರೆ ಅದೇ ಚಿದಾನಂದಮೂರ್ತಿಯವರು ತಮ್ಮ ಒಂದು ಕೃತಿಗೆ 'ಲಿಂಗಾಯತ: ಕೆಲವು ಅಧ್ಯಯನಗಳು' ಎಂದು ಹೆಸರಿಟ್ಟಿದ್ದಾರೆ ಎನ್ನುವುದನ್ನು ಮರೆಯಬಾರದು). ಅದೇನೇ ಇರಲಿ, ಭಾವೋದ್ರೇಕವನ್ನು ಕೆರಳಿಸುವ, 'ಸಮೂಹಸನ್ನಿ'ಗೆ ಕಾರಣವಾಗುವ, ಕೆಲವೊಮ್ಮೆ ರಾಜಕೀಯ, ಹಾಗೆಯೇ ಪ್ರಾದೇಶಿಕ ಹಿನ್ನೆಲೆಯನ್ನು ಹೊಂದಿರಬಹುದಾದ ಇಂತಹ ಗಂಭೀರ ಅಂಶಗಳನ್ನು ವಿವೇಚನಾಯುತವಾಗಿ ಚರ್ಚಿಸಿ ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕಾದವರು ಯಾರು? ಅವರ ಅರ್ಹತೆಗಳೇನು? ಅವರ ಕಾರ್ಯಸೂಚಿ ಕೆಲವೊಮ್ಮೆ ಮತ್ತಾರದೋ 'ಗುಪ್ತ ಕಾರ್ಯಸೂಚಿ'ಯೂ ಆಗಿರಬಹುದೆ? ಮುಂತಾದ ಅಂಶಗಳು ಇಲ್ಲಿ ಮುಖ್ಯವಾಗುತ್ತವೆ. ವಿದ್ವಾಂಸರು, ಕಾನೂನುತಜ್ಞರು, ಪಾಂಡಿತ್ಯವುಳ್ಳ ಧರ್ಮಗುರುಗಳು, ಸಮಾಜಸೇವಕರು, ಬೇರೆ ಬೇರೆ ಕ್ಷೇತ್ರದಲ್ಲಿರುವ ಸಮಾಜದ ಬುದ್ಧಿಜೀವಿಗಳು, ರಾಜಕೀಯ ಮುತ್ಸದ್ದಿಗಳು- ಇವರೆಲ್ಲರೂ ಕುಳಿತು ಇದರ ಸಾಧಕ ಬಾಧಕಗಳನ್ನು ಒಂದು ಆಪ್ತ ಆವರಣದಲ್ಲಿ (Closed door) ಅನೇಕ ಹಂತಗಳಲ್ಲಿ ಮೊದಲು ಚರ್ಚಿಸಿ, ಅದಕ್ಕೊಂದು ಕನಿಷ್ಠ ಸ್ವರೂಪದ ಪರಿಹಾರ ಸಿಕ್ಕುವ ಸೂಚನೆ ಕಂಡುಬಂದಾಗ ಪ್ರಜ್ಞಾವಂತ ನಾಗರಿಕರ ಗಮನಕ್ಕೆ ತಂದು ಆ ಅಭಿಪ್ರಾಯವನ್ನು ಸಮಾಜದ ಮುಂದಿಡಬೇಕು. ಆದರೆ ಇದುವರೆವಿಗೆ ನಡೆದ ಹೆಚ್ಚಿನ ಕ್ರಿಯೆ-ಪ್ರತಿಕ್ರಿಯೆಗಳು ಇದಕ್ಕೆ ಸಂಪೂರ್ಣ ಭಿನ್ನವಾದದ್ದು, ಪರಸ್ಪರ

ಕೆಸರೆರಚಾಟದ್ದು! ಆರೋಪ-ಪ್ರತ್ಯಾರೋಪದ್ದು. ತಮ್ಮದೇ ಸತ್ಯ, ಅದೇ ಸರಿ ಎನ್ನುವ 'ಸ್ವಕೇಂದ್ರಿತ ಅಹಂ'ನ ಪ್ರದರ್ಶನ ಮಾತ್ರ. ಅಲ್ಲಲ್ಲಿ ಕೆಲವರು ಎತ್ತಿದ ವಾಸ್ತವ ಸತ್ಯದ ಧ್ವನಿಗಳಿಗೆ ಸಮಾಧಾನದಿಂದ ಕೇಳುವ ಕಿವಿಗಳೇ ಸಿಕ್ಕಲಿಲ್ಲ. ನಮ್ಮ ಗುರುಪೀಠ, ವಿರಕ್ತಪೀಠಗಳು ಸಮಾಜದ ಎರಡು ಕಣ್ಣುಗಳು. ನಮ್ಮಲ್ಲಿನ ಗುರುಪೀಠಗಳು ಪರಂಪರಾಗತ ಧಾರ್ಮಿಕ ಚೌಕಟ್ಟಿನಲ್ಲಿ ಸಮಾಜವನ್ನು ಮುನ್ನಡೆಸಿಕೊಂಡು ಬಂದಿದ್ದರೆ, ವಿರಕ್ತ ಮುಂತಾದ ಅನೇಕ ಪೀಠಗಳು ಬಸವಾದಿ ಶರಣರ ತತ್ವಸಿದ್ಧಾಂತಗಳಿಂದ ಪ್ರೇರಿತರಾಗಿ ಅದಕ್ಕೊಂದು ಸಮಾಜಮುಖಿ ಆಯಾಮವನ್ನು ತಂದುಕೊಟ್ಟು, ಎಲ್ಲರನ್ನೂ "ಇವ ನಮ್ಮವ ಇವ ನಮ್ಮವ, ಇವ ನಮ್ಮವ" ಎನ್ನುವ ಮೂಲಕ ಒಂದು ಸಾಮಾಜಿಕ ಘನತೆಯನ್ನು ಎತ್ತಿ ಹಿಡಿದಿದ್ದಾರೆ. ನಮಗಿರುವ ಎರಡು ಕಣ್ಣುಗಳಲ್ಲಿ ಯಾವ ಕಣ್ಣು ಶ್ರೇಷ್ಠ? ಸಂತಾನೋತ್ಪತ್ತಿಗೆ ತಂದೆ ಮುಖ್ಯವೋ? ತಾಯಿ ಮುಖ್ಯವೋ? ಯಾರು ಶ್ರೇಷ್ಠ? ಯಾರು ಕನಿಷ್ಠ? ಇಂಥ ಪ್ರಶ್ನೆಯಲ್ಲಿಯೇ ಅದಕ್ಕೆ ಉತ್ತರವೂ ಅಡಗಿದೆ.

ಪಂಚಪೀಠ ಪರಂಪರೆಗೆ ಸೇರಿದ ಅನೇಕ ಮಠಗಳಲ್ಲಿ ಬಸವಾದಿ ಶರಣರ ಪರಿಕಲ್ಪನೆಯ ಬಹು ದೊಡ್ಡ ಸಮಾಜಸೇವಾ ಕಾರ್ಯಗಳು ನಡೆಯುತ್ತಿವೆ; ವಿರಕ್ತ ಪರಂಪರೆಯವರು ಎಂದು ಹೇಳಿಕೊಳ್ಳುವ ಕೆಲವು ಮಠಗಳಲ್ಲಿ ಸಾಂಪ್ರದಾಯಿಕವಾದ ಪೂಜೆ; ಧಾರ್ಮಿಕ ವಿಧಿವಿಧಾನಗಳು, ತಾಂತ್ರಿಕಾಚರಣೆಗಳೂ (?) ನಡೆಯುತ್ತಿವೆ. ಇವುಗಳ ಭಕ್ತರೂ ಹಾಗೆಯೇ ಇದ್ದಾರೆ. ಗುರುವರ್ಗದ ಮಠದ ಭಕ್ತರ ಮನೆಗೆ, ವಿರಕ್ತ ಪರಂಪರೆಗೆ ಸೇರಿದ ಮಠದ ಭಕ್ತರ ಮಗಳು ಸೊಸೆಯಾಗಿ ಬಂದಿರುತ್ತಾಳೆ. ಇಲ್ಲಿ ಗಂಡ ವೀರಶೈವ, ಹೆಂಡತಿ ಲಿಂಗಾಯತರವಳು, ಮಕ್ಕಳು? ನಮ್ಮಲ್ಲಿ ಈಗಾಗಲೇ ಇಂಥ ಸಾಂಸಾರಿಕ ಸಂಬಂಧಗಳು ಹಾಲುಜೇನಿನಂತೆ ಒಂದರೊಳಗೊಂದು ಬೆರೆತುಹೋಗಿವೆ. ಅವುಗಳನ್ನು ಯಾವುದೇ ಹಿನ್ನೆಲೆಯಲ್ಲಿ ಬೇರ್ಪಡಿಸಲು ಹೊರಟಾಗ ಅದು ಧರ್ಮದೊಳಗೆ ಸಾಂಸಾರಿಕ ಬಿಕ್ಕಟ್ಟುಗಳಿಗೆ, ಅಶಾಂತಿಗೆ ಆಹ್ವಾನ ಕೊಟ್ಟಂತಾಗುತ್ತದೆ. ಎರಡು ನದಿಗಳು ಸಂಗಮಿಸುವಾಗ ಒಂದಿಷ್ಟು ದೂರ ಬೇರೆಬೇರೆಯಾಗಿಯೇ ಹರಿಯುವುದು ಸಹಜ. ಮುಂದೆ ಅವೆರಡೂ ಒಂದೇ ಆಗುವಂತೆ, ಇಂದಿನ ಸಮಾಜದಲ್ಲಿ ವೀರಶೈವ, ಲಿಂಗಾಯತ ಈ ಎರಡೂ ಬೇರ್ಪಡಿಸಲಾಗದಷ್ಟು ಬೆರೆತು ಸಮಾಜ 'ಸ್ವಸ್ಥ'ವಾಗಿ ಬದುಕುತ್ತಿದೆ. ಸರ್ಕಾರದ ಸವಲತ್ತು ಪಡೆಯುವುದಷ್ಟೇ ನಮ್ಮ ಉದ್ದೇಶವಾದರೆ, 'ಬೇಡುವವರಿಲ್ಲದೆ ಬಡವನಾದೆನಯ್ಯ' ಎಂಬ ಪರಂಪರೆಯಿಂದ ಬಂದವರು 'ಸರ್ಕಾರವನ್ನು ಬೇಡುವುದಕ್ಕಾಗಿಯೇ' ಸಮಾಜದಲ್ಲಿ ಗೊಂದಲವುಂಟುಮಾಡುವುದು ಎಷ್ಟು ಸರಿ? ಪಕ್ಷ, ಪಂಥ, ಪಂಗಡ ಇವೆಲ್ಲಕ್ಕಿಂತಲೂ ಸಮುದಾಯ ದೊಡ್ಡದು ಎನ್ನುವುದು ಇಲ್ಲಿ ಮುಖ್ಯ. ಇದಕ್ಕೆ ಧರ್ಮದ ಸ್ಥಾನಮಾನ ಸಿಗಲಿ ಬಿಡಲಿ, ಹೆಸರು ಯಾವುದಾದರೂ ಇರಲಿ. ತೀರ್ಮಾನ ಏನೇ ಆಗಿರಲಿ, ಸಮಾಜ ಮಾತ್ರ ವಿಘಟನೆಯಾಗದಿರಲಿ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಸಂಚಲನಗಳು ಎಂಥೆಂಥದೋ ರೂಪಗಳನ್ನು ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಜಾತಿ, ಧರ್ಮ, ವರ್ಗ ಹೀಗೆ ಇದು ವ್ಯಷ್ಟಿ ಮಟ್ಟದ ಸಮಸ್ಯೆಯಿಂದ ಹಿಡಿದು ಸಮಷ್ಟಿ ಮಟ್ಟದ ತನಕ ವ್ಯಾಪಿಸಿದೆ. ಶತಮಾನ, ಸಹಸ್ರಮಾನಗಳ ಕಾಲ ಸುಪ್ತವಾಗಿದ್ದ ಅನೇಕ ಭಾವಗತ, ಬುದ್ಧಿಗತ ಅಂಶಗಳು ಈಗ ಒಂದೊಂದಾಗಿ ಮೇಲೇಳತೊಡಗಿವೆ. ಇದು ಮನುಕುಲದ ಚರಿತ್ರೆಯಲ್ಲಿ ನಿರಂತರವಾಗಿ ನಡೆಯುತ್ತಾ ಬಂದಿರುವ ಪ್ರಕ್ರಿಯೆಯಾಗಿದ್ದು ಸ್ವಾಗತಾರ್ಹವಾದುದೆ. ಆದರೆ ಇದು ಹೇಗೆ ಆಗಬೇಕು, ಯಾವುದಕ್ಕಾಗಿ ಆಗಬೇಕು, ಇದರ ಧ್ಯೇಯೋದ್ದೇಶಗಳೇನು, ಇದು ಪ್ರತಿಗಾಮಿಯೋ ಅಥವಾ ಪ್ರಗತಿಗಾಮಿಯೋ, ವ್ಯಷ್ಟಿಕೇಂದ್ರಿತವೆ, ಸಮಷ್ಟಿಕೇಂದ್ರಿತವೇ, ಅಲ್ಪಾವಧಿ ಫಲಾಪೇಕ್ಷೆಯೇ, ದೂರಗಾಮಿಯಾದುದೇ ಮುಂತಾದ ಅಂಶಗಳನ್ನು ಇದಕ್ಕೆ ಸಂಬಂಧಪಡುವ ಸಮೂಹ ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಇದು ಮಾನವವರ್ಗಕ್ಕೆ ಮಾತ್ರವಲ್ಲ ಸಕಲ ಜೀವಜಾಲಗಳಿಗೂ ವಿಸ್ತರಿಸುವಂತಿದ್ದರೆ ಅಂತಹ ಸಂಚಲನದ ಸ್ವರೂಪ ಹೇಗಿರಬೇಕು ಎಂಬುದೂ ಮುಖ್ಯವಾಗುತ್ತದೆ. ಯಾವುದೇ ಪ್ರಗತಿಗಾಮಿ ಪ್ರಕ್ರಿಯೆಯು ಭೂಮಿಯ ಅಂತರ್ಜಲ ಸಣ್ಣ ಸಣ್ಣ ಬುಗ್ಗೆಗಳಾಗಿ ಹೊರಚಿಮ್ಮಿ, ಝರಿಯಾಗಿ, ತೊರೆಯಾಗಿ, ನದಿಯಾಗಿ ಆಳ ಅಗಲಗಳನ್ನು ಪಡೆದುಕೊಂಡು ಸಮುದ್ರಗಾಮಿಯಾಗುವಂತೆ ಇರಬೇಕಾಗುತ್ತದೆ. ಆಗ ಅದಕ್ಕೊಂದು ಗಟ್ಟಿತನ ಪ್ರಾಪ್ತವಾಗುತ್ತದೆ. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವ ಮಾನಸಿಕ ಸ್ಥಿತಿ ನಿರ್ಮಾಣವಾಗಿ ಅಲ್ಲಿ ಒಂದು ವಿಶಿಷ್ಟ ಆವರಣ ಸೃಷ್ಟಿಯಾಗುತ್ತದೆ. ಇಕ್ಕಟ್ಟು ಬಿಕ್ಕಟ್ಟು ಭೂವಿನ್ಯಾಸಗಳನ್ನು ದಾಟಿ ಬಂದು, ಸಮತಟ್ಟು ನೆಲದಲ್ಲಿ ನಿಧಾನಗತಿಯಲ್ಲಿ ಹರಿಯುವ ನದಿಯ ನೀರು ಶುದ್ಧವಾಗಿ ಕುಡಿಯಲು ಯೋಗ್ಯವಾಗುವಂತೆ, ಸಾಮಾಜಿಕ ಸ್ಥಿತ್ಯಂತರಗಳಿಂದ ಉಂಟಾಗುವ ವ್ಯವಸ್ಥೆಯನ್ನು ಸಮಾಜ ಸರಳವಾಗಿ ಸ್ವೀಕರಿಸಿ ತನ್ನದನ್ನಾಗಿ ಮಾಡಿಕೊಂಡು ಮುನ್ನಡೆಯುತ್ತದೆ. ಅಲ್ಲಿ ಯಾವುದೇ ಗೊಂದಲವೂ ಇರುವುದಿಲ್ಲ. ಬಹಳ ದಿನ ಹಸಿದವನಿಗೆ ಹನಿಹನಿ ನೀರು, ಅನಂತರ ಹಣ್ಣಿನ ರಸ, ಅನಂತರ ಇಷ್ಟಿಷ್ಟೇ ಗಟ್ಟಿ ಆಹಾರವನ್ನು ಕೊಟ್ಟು ಸಾಮಾನ್ಯ ಸ್ಥಿತಿಗೆ ತರುವ ಪರಿ ಇದು. ತುಂಬಾ ಹಸಿದಿದ್ದಾನೆ ಎಂದು, ಆತುರದಿಂದ ಅವನ ಹೊಟ್ಟೆ ತುಂಬಿಸಿದರೆ ಅದು ಅವನಿಗೆ ಪರಿಣಾಮದಲ್ಲಿ ಮಾರಕವೇ ಆಗುತ್ತದೆ. ಸಾಮಾಜಿಕ ಸಂಚಲನದ ಸ್ವರೂಪ ಹೀಗೆಯೇ ಹಂತಹಂತವಾಗಿ ಶೋಧಿತವಾಗಿ, ಕ್ರಿಯಾಶೀಲಗೊಂಡು ಗಟ್ಟಿಗೊಳ್ಳಬೇಕು. ಇಲ್ಲದಿದ್ದರೆ ಸಮಾಜ ಅನಾವಶ್ಯಕ ಗೊಂದಲಕ್ಕೀಡಾಗಿ

ಛಿದ್ರಗೊಳ್ಳುತ್ತದೆ. ಅದು ಹಾಗಾಗದಿರಬೇಕಾದರೆ ಯಾವುದೇ ಸಾಮಾಜಿಕ ಚಳವಳಿಗೆ ಅದನ್ನು ಮುನ್ನಡೆಸುವ ಸಮರ್ಥ ನೇತಾರನ ಮಾರ್ಗದರ್ಶನ ಬೇಕಾಗುತ್ತದೆ. ಯೋಜಕರಿಲ್ಲದ ಚಳವಳಿಯು ಸುನಾಮಿಯಂತೆ ಅಪ್ಪಳಿಸಿ ಎಲ್ಲರನ್ನೂ ಎಲ್ಲವನ್ನೂ ಬುಡಮೇಲು ಮಾಡುತ್ತದೆ. ಸದೃಢ ವ್ಯವಸ್ಥೆಯೊಂದು ಹಾಗಾಗದಿರಬೇಕಾದರೆ ಸಮಾಜಕ್ಕೆ ಸಮರ್ಥ ನೇತಾರನ ಮಾರ್ಗದರ್ಶನ ಅಗತ್ಯ.

ಅಲ್ಪಜ್ಞಾನದ ವಿವೇಕವಿಲ್ಲದ ಜನ ತಾವು ದೊಡ್ಡ ಪಂಡಿತರೆಂದು ಬೀಗುತ್ತಾರೆ. ಮುಗ್ಧ ಜನ ಅವರನ್ನು ಅನುಸರಿಸುತ್ತಾರೆ. ಕುರುಡನೊಬ್ಬ ಮತ್ತೊಬ್ಬ ಕುರುಡನನ್ನು ಗುರಿ ಮುಟ್ಟಿಸಲು ಪ್ರಯತ್ನಿಸಿದಂತೆ ಈ ಸ್ಥಿತಿ. ಇಬ್ಬರೂ ಪತನ ಹೊಂದುವುದು ಶತಸ್ಸಿದ್ಧ.

ಜಗತ್ತಿನ ಇಂದಿನ ಚಳುವಳಿಗಳು ನಡೆಯುತ್ತಿರುವ ಸ್ವರೂಪವನ್ನು ಗಮನಿಸಿದರೆ, ಅವುಗಳಲ್ಲಿ ಬಹುಪಾಲು, ನಿರ್ದಿಷ್ಟ ಕಾರ್ಯಸೂಚಿಯಿಲ್ಲದ, ದೂರಗಾಮಿ ಫಲಾಫಲಗಳನ್ನು ಗಮನಿಸದೆ, ಸ್ವಕೇಂದ್ರಿತ ವಿಕೃತ ಚಿಂತನೆಗಳ ವ್ಯಕ್ತರೂಪವೇ ಆಗಿರುವುದು ಕಂಡುಬರುತ್ತದೆ. ಬಸವಣ್ಣನವರು, ಮಾರ್ಟಿನ್ ಲೂಥರ್ ಕಿಂಗ್, ಗಾಂಧೀಜಿ, ಹಾಗೆಯೇ ಇತ್ತೀಚಿನ ಜಯಪ್ರಕಾಶ್ ನಾರಾಯಣ್ ಇವರುಗಳ ನೇತೃತ್ವದ ಚಳುವಳಿ ಎಷ್ಟು ಆರೋಗ್ಯಕರವಾಗಿತ್ತು, ಏನೆಲ್ಲಾ ಆಯಾಮಗಳನ್ನು ಒಳಗೊಂಡಿತ್ತು ಎನ್ನುವುದನ್ನು ಮನನ ಮಾಡಿದರೆ ಅವರ ನಾಯಕತ್ವದ ಎತ್ತರ ಬಿತ್ತರಗಳು ಅಚ್ಚರಿಯನ್ನುಂಟುಮಾಡುತ್ತವೆ. ಬಸವಣ್ಣನವರು ಎಷ್ಟೇ ದೊಡ್ಡವರಾಗಿದ್ದರೂ, ಎಂತಹ ಸಂಕೀರ್ಣ ಸಾಮಾಜಿಕ ಪರಿಸ್ಥಿತಿಯಲ್ಲಿಯೂ ಚಳುವಳಿಯನ್ನು ಮುನ್ನಡೆಸುವ ಸಾಮರ್ಥ್ಯವನ್ನು ಹೊಂದಿದ್ದರೂ, ಅನುಭವ ಮಂಟಪದಲ್ಲಿ ತಮ್ಮ ಅಭಿಪ್ರಾಯವನ್ನು ಎಲ್ಲರ ಮುಂದೆ ಪ್ರಾಂಜಲವಾಗಿ ತೆರೆದಿಡುತ್ತಿದ್ದರು. ಅಲ್ಲಿ ಮಹಾನ್ ದಾರ್ಶನಿಕ ಅಲ್ಲಮನಿಂದ ಹಿಡಿದು ಮಡಿವಾಳ ಮಾಚಯ್ಯರಂತಹ ಸಾಮಾನ್ಯರೆಲ್ಲರ ಅಭಿಪ್ರಾಯವನ್ನು ಪಡೆಯುವ 'ಸದುವಿನಯ'ವನ್ನು ಹೊಂದಿರುತ್ತಿದ್ದರು. ಆ ಕಾರಣಕ್ಕಾಗಿಯೇ ಅವರು ಕಲ್ಯಾಣ ರಾಜ್ಯವನ್ನು ಕಟ್ಟಲು ಸಾಧ್ಯವಾಯಿತು.

ಒಂದು ಸಾಮಾಜಿಕ ಚಳುವಳಿಯ ನೇತಾರರಾಗುವವರು ಸಮಾಜದ ಎತ್ತರದ ಸ್ತರದ ವ್ಯಕ್ತಿಗಳಿಂದ ಹಿಡಿದು ಕೊಟ್ಟಕೊನೆಯ ವ್ಯಕ್ತಿಯ ಅಭಿಪ್ರಾಯವನ್ನು ಸ್ವೀಕರಿಸಿ, ಸಾಮಾಜಿಕ ಜವಾಬ್ದಾರಿಯ ಹಿನ್ನೆಲೆಯಲ್ಲಿ ಕ್ರಿಯಾಶೀಲರಾಗಬೇಕಾಗುತ್ತದೆ. ಬಸವಣ್ಣನವರ ಜೀವನಕ್ರಮವೇ ಇದಕ್ಕೆ ಜೀವಂತ ಉದಾಹರಣೆ. ಹಾಗೆಯೇ ಸಾಮಾಜಿಕರೂ ಯಾರನ್ನು ತಮ್ಮ ನಾಯಕನನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಪ್ರಜ್ಞಾವಂತಿಕೆಯನ್ನು ಮೆರೆಯಬೇಕು.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಧರ್ಮ ಮತ್ತು ಪ್ರೀತಿ

**ಡಾ. ವಿಜಯಕುಮಾರ ಮಹಾನುಭಾವಿಗಳು**

"ಎಲ್ಲರನ್ನೂ ಪ್ರೀತಿಸು ಎಂತಹವರನ್ನೂ ಪ್ರೀತಿಸು" ಇದು ಧರ್ಮದ ಜನಪ್ರಿಯ ಘೋಷ ವಾಕ್ಯ. ಇದು ಕೇವಲ ಹೇಳುವುದಕ್ಕೆ ಸೀಮಿತ. ಇದು ವಾಸ್ತವದಲ್ಲಿ ಸುಳ್ಳು ಎಂದು ಹೇಳುವಂತಾಗಿದೆ. ಧರ್ಮ ಮತ್ತು ಪ್ರೀತಿ ಒಂದೆಡೆ ಇರುವುದು ಸಾಧ್ಯವೆ? ಎನ್ನುವ ಪ್ರಶ್ನೆ ಇಂದು ಎದುರಾಗಿದೆ. ಒಡಿಸ್ಸಾದಲ್ಲಿ ಕ್ರೈಸ್ತಧರ್ಮದ ಪಾದ್ರಿ ಗ್ರಹಾಂ ಸ್ಟೇನ್ಸ್ ಕುಷ್ಠರೋಗಿಗಳ ಸೇವೆಯಲ್ಲಿ ಪತ್ನಿ ಮಕ್ಕಳೊಂದಿಗೆ ಸಕ್ರಿಯರಾಗಿದ್ದರು. ದುಷ್ಕರ್ಮಿಗಳು ಈತನೊಂದಿಗೆ ಈತನ ಮಗನನ್ನು ಸುಟ್ಟುಹಾಕಿದರು. ಅಪರಾಧಿಗಳನ್ನು ಹಿಡಿಯಲಾಯಿತು; ಆದರೆ ಆ ಪಾದ್ರಿಯ ಮಡದಿಯರು ನಾನು ಅವರನ್ನು ಕ್ಷಮಿಸಿದ್ದೇನೆ, ಅವರಿಗೆ ಶಿಕ್ಷೆಯ ಅಗತ್ಯವಿಲ್ಲ ಎಂದರು. ಘೋರವಾದ ದುಃಖದ ಸಂದರ್ಭದಲ್ಲಿಯೂ ಹೃದಯವಂತಿಕೆಯನ್ನು ಮೆರೆದರು. ಗಂಡ ಹಾಗೂ ಮಗನನ್ನು ಕಳೆದುಕೊಂಡು ಏಕಾಂಗಿಯಾದರೂ ನಾನು ಕುಷ್ಠರೋಗಿಗಳ ಸೇವೆಯಲ್ಲಿ ಭಾರತದಲ್ಲಿಯೇ ಇರುತ್ತೇನೆ ಎಂದರು. ಈ ಕ್ರೈಸ್ತಪಾದ್ರಿಯ ಮಡದಿಯರ ಈ ಸೇವೆಯ ಮನೋಧರ್ಮವು ನಮಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯನ್ನು ನೆನಪಿಗೆ ತರುತ್ತದೆ. ಇಲ್ಲಿ ಧರ್ಮ ಎಲ್ಲ ಅರ್ಥದಲ್ಲಿ ತನ್ನ ಪ್ರೀತಿ, ಕರುಣೆಯನ್ನು ಮೆರೆದಿದೆ.

ಬೆಂಗಳೂರಿನ ಮಲ್ಲೇಶ್ವರಂ ಕಾಯಿಪಲ್ಲೆ ಮಾರುಕಟ್ಟೆಯಲ್ಲಿ ಕಾಯಿಪಲ್ಲೆ ಮಾರುವ ಮಹೇಶ್ವರಿ ಮಾಹಾತಾಯಿ ಮಹಾತ್ಯಾಗಿಯಾದ ಸುದ್ದಿಯನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಆ ತಾಯಿ ಆರು ತಿಂಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದಾಳೆ; ಇದ್ದ ಒಬ್ಬನೇ ಮಗನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಬೇಕೆಂದು ಓದಿಸುತ್ತಿದ್ದಳು. ಆದರೆ ಮಗನು ಹೊಸ ವರ್ಷಾಚರಣೆಗಾಗಿ ಗೆಳೆಯರ ಜೊತೆ ಹೋಗಿ ಕುಡಿದು ಮಧ್ಯರಾತ್ರಿ ದ್ವಿಚಕ್ರವಾಹನದಲ್ಲಿ ವೇಗವಾಗಿ ಹಿಂದಿರುಗುವಾಗ ರಸ್ತೆಹಂಪ್ ಕಾರಣವಾಗಿ ಅಪಘಾತಕ್ಕೊಳಗಾದ. ಅಸುನೀಗಿದ. ಇದ್ದ ಒಬ್ಬ ಮಗನನ್ನೆ ಕಳೆದುಕೊಂಡ ಆ ಮಹಾತಾಯಿ ಅಪಾರ ದುಃಖಕ್ಕೊಳಗಾದಳು. ಈ ದುಃಖದಲ್ಲಿಯೂ ಸತ್ತ ತನ್ನ ಮಗನ

---

**ಡಾ. ವಿಜಯಕುಮಾರ ಮಹಾನುಭಾವಿಗಳು,** ಪರಮಗುರು ಪ್ರಭುದೇವ ಧರ್ಮಪೀಠ, ಜೋಗಜಲಪಾತ ಮಠ, ಮಾವಿನಗುಂಡಿ, ಅಂಚೆ, ಸಿದ್ದಾಪುರ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ

ದೇಹವನ್ನು ದಾನ ಮಾಡಿ, ಆರು ಜನರ ಪ್ರಾಣ ಉಳಿಸಿದ್ದಾಳೆ. ಎಂತಹ ಅಮೋಘ ತ್ಯಾಗ. ತನ್ನ ದುಃಖ ಎಲ್ಲೆ ಮೀರಿದ್ದರೂ ಆ ದುಃಖದಲ್ಲಿಯೂ ಸತ್ತ ಮಗನ ದೇಹ ದಾನದ ತ್ಯಾಗದಿಂದಾಗಿ ನಮ್ಮ ವೈದ್ಯರು ಹೃದಯ, ಮೂತ್ರಪಿಂಡ, ಪಿತ್ತಜನಕಾಂಗ, ಕಣ್ಣುಗಳನ್ನು ಪಡೆದು ಆರು ಜನರ ಜೀವದಾನ ಮಾಡಿದ್ದಾರೆ. ಎಂತಹ ಅಮೋಘ ತ್ಯಾಗ. ಯುವಕರಿಗೆ, ಜನತೆಗೆ ಜೀವನ ಮೌಲ್ಯಗಳ ಪಾಠ ಇದು. ಮಗನನ್ನು ಕಳೆದುಕೊಂಡರೂ ನಿರಾಶಳಾಗದ ತಾಯಿ. ಮಣ್ಣು ಸೇರಿಯೋ ಅಥವಾ ಸುಟ್ಟು ಕರಕಲಾಗುವುದೋ ಏನೋ ಆಗುತ್ತಿದ್ದ ಆ ದೇಹವನ್ನು ದಾನ ಮಾಡಿ ಆರು ಜನರ ಪ್ರಾಣ ಉಳಿಸಬಹುದು ಎಂಬುದನ್ನು ಆ ತಾಯಿ ಮತ್ತು ಪರಿಣತ ವೈದ್ಯರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಪೊಲೀಸರಿಂದ ಹಿಡಿದು ಅನೇಕರ ಸಹಕಾರವೂ ದೊರೆತು ಯಶಸ್ವಿ ಚಿಕಿತ್ಸೆ ನೀಡಿದ್ದಾರೆ. ಎಲ್ಲರೂ ಅಭಿನಂದನೆಗೆ ಪಾತ್ರರು. ನಮ್ಮ ವೈದ್ಯ ವಿಜ್ಞಾನ ಎಷ್ಟು ಉನ್ನತ ಸಾಧನೆ ಮಾಡಿದೆ. ನಿಜಕ್ಕೂ ಇಂತಹ ಸುದ್ದಿಯನ್ನು ಓದಲು ಬಹಳ ಸಂತೋಷವಾಗುತ್ತದೆ. ಇಂದು ಎಲ್ಲಿ ನೋಡಿದಡಲ್ಲಿ ಉಗ್ರಗಾಮಿಗಳ ಅಬ್ಬರ, ಭ್ರಷ್ಟಾಚಾರದ ತಾಂಡವ, ಒಂದು ಕಡೆ ಬೆಲೆ ಏರಿಕೆ, ನಿರುದ್ಯೋಗ, ಯುವಪೀಳಿಗೆಗೆ ಮಾರ್ಗದರ್ಶನ ಇಲ್ಲ, ಕನಸುಗಳಿಲ್ಲ, ಮೌಲ್ಯಗಳಿಲ್ಲ. ಇಂತಹ ಹೊತ್ತಿನಲ್ಲಿ ಯಾವುದು ಮೌಲ್ಯ, ಯಾವುದು ಧರ್ಮ? ದೇಹ ತ್ಯಾಗ ಮಾಡಿದ ಬಾಲಾಜಿ ಸತ್ತ ಯಾಕೆ? ಕುಡಿತದ ಹೊಸ ವರ್ಷಾಚರಣೆಯ ಮೋಹಕ್ಕೆ ವಶನಾಗಿ ಸಂಯಮ, ವಿವೇಕ ಕಳೆದುಕೊಂಡ ಕಾರಣವಾಗಿ ಅಪಘಾತಕ್ಕೀಡಾಗಿ ಸತ್ತ. ಇದು ಬೇಜವಾಬ್ದಾರಿಯಿಂದ ಕುಡಿದು ವಾಹನ ಓಡಿಸುವ ಯುವಕರಿಗೆ ಒಂದು ಪಾಠ. ತನ್ನ ಮಗನ ದೇಹದಾನದಿಂದ ಇನ್ನೊಬ್ಬರ ಪ್ರಾಣ ಉಳಿಯುತ್ತದೆ ಎಂದು ತನ್ನ ದುಃಖದಲ್ಲಿಯೂ ದೇಹದಾನ ಮಾಡಿದ್ದು ಧರ್ಮ. ಇನ್ನೊಬ್ಬರು ಬದುಕಲಿ ಎನ್ನುವುದು ಜೀವನಪ್ರೀತಿ, ಪರರ ಪ್ರಾಣದ ಬಗೆಗೆ ಈ ಕಾಳಜಿಯನ್ನು ತೋರುವುದೇ ಧರ್ಮ. ಗುಂಡಿಕ್ಕುವುದು, ಹತ್ಯೆ ಮಾಡುವುದು ಧರ್ಮವಲ್ಲ.

ಅಯ್ಯಾ ಮನುಷ್ಯನೇ ನೀನು ಗರಿಕೆ ಹುಲ್ಲಾಗುವೆಯೋ? ಸೊಳ್ಳೆಯಾಗುವೆಯೋ? ಮನುಷ್ಯನ ಆಯುಷ್ಯದಲ್ಲಿ ಸೊಳ್ಳೆಗೇನು ಬೆಲೆ ಇದೆ. ಗರಿಕೆ ಹುಲ್ಲಿಗೇನು ಬೆಲೆ ಇದೆ. ಸೊಳ್ಳೆ ಮನುಷ್ಯನಿಗೆ ಉಪದ್ರವಕಾರಿ. ಗರಿಕೆ ರೈತನಿಗೆ ಉಪದ್ರವಕಾರಿ, ದನಗಳಿಗೆ, ಆಯುರ್ವೇದ ಚಿಕಿತ್ಸೆಗೆ, ಸಕ್ಕರೆ ಕಾಯಿಲೆಗೆ ಇದು ಗುಣಕಾರಿಯಾಗಿದೆ. ಮನುಷ್ಯ ಸೊಳ್ಳೆಯಂತೆ ಉಪದ್ರವಕಾರಿಯಾಗಿರಬೇಕೋ ಆರೋಗ್ಯಕ್ಕೆ ಬರುವ ಗರಿಕೆ ಹುಲ್ಲಿನಂತೆ ಉಪಯೋಗಿಯಾಗಿ ಬದುಕಬೇಕೋ? ಎಂಬುದನ್ನು ನಾವು ನಮಗೆ ಪ್ರಶ್ನೆ ಹಾಕಿಕೊಳ್ಳ ಬೇಕಾಗಿದೆ. ಸೊಳ್ಳೆಯಂತಹ ಉಪದ್ರವಕಾರಿಯನ್ನು ನಿರ್ಮೂಲನ ಮಾಡಲು ಪ್ರಪಂಚದ ರೋಟರಿ ಸಂಸ್ಥೆ 15,000 ಕೋಟಿ ರೂಪಾಯಿಗಳನ್ನು ತೊಡಗಿಸಿತು. ಸೊಳ್ಳೆಯಿಂದ

ಬರುವ ಅನಾರೋಗ್ಯವನ್ನು ನಿರ್ಮೂಲನ ಮಾಡಲು ಪ್ರಪಂಚದ ಎಲ್ಲ ದೇಶಗಳು ಲೆಕ್ಕವಿಲ್ಲದಷ್ಟು ಕೋಟಿ ಕೋಟಿ ಹಣವನ್ನು ತೊಡಗಿಸುತ್ತಲೆ ಬಂದಿವೆ. ಆದರೂ ಸೊಳ್ಳೆಯಿಂದ ಮನುಷ್ಯನಿಗೆ ಬರುವ ರೋಗಗಳು ಇನ್ನೂ ನಿರ್ಮೂಲನೆಯಾಗಿಲ್ಲ. ಸೊಳ್ಳೆಗಳನ್ನೂ ನಿರ್ಮೂಲನ ಮಾಡಲಾಗಿಲ್ಲ. ಹಾಗೆ ಲೋಕದಲ್ಲಿ ವಿಚ್ಛಿದ್ರಕಾರಕ ಶಕ್ತಿಗಳು ಉಗ್ರಗಾಮಿ ಚಟುವಟಿಕೆಯನ್ನು ಉಪದ್ರವಕಾರಿಯಾಗಿ ಎಲ್ಲ ದೇಶಗಳಲ್ಲಿ ನಡೆಸಿವೆ. ಇವರಿಗೆ ಪ್ರೋತ್ಸಾಹ ನೀಡುವವರೂ ಇದ್ದಾರೆ. ಲೋಕದಲ್ಲಿ ದ್ವೇಷ ಮಾಡಿಕೊಂಡು ಬದುಕುವುದರಲ್ಲಿ ಏನು ಚೆಂದವಿದೆ? ಪ್ರೀತಿಯಲ್ಲಿ ಇರುವ ಸುಖ ದ್ವೇಷದಲ್ಲಿ ಇದೆಯೆ? ಪ್ರೀತಿಯು ಕೊಡುವ ಆನಂದವನ್ನು ದ್ವೇಷ ಕೊಡಬಲ್ಲುದೆ? ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದವರು ಧರ್ಮದ ಹೆಸರಿನಲ್ಲಿ ಜಗತ್ತನ್ನೆ ವಿಪ್ಲವ ಮಾಡುವುದೇನು ಚೆಂದವಿದೆ. ಗರಿಕೆ ಹುಲ್ಲು ಭೂಮಿಯು ವಿಕಾಸವಾದಾಗಿ ನಿಂದಲೂ ಉಳಿದು ಬೆಳೆದು ಬಂದಿದೆ. ರೈತರು ಗರಿಕೆ ಹುಲ್ಲು ಬೆಳೆಗೆ ಆತಂಕಕಾರಿ ಎಂದು ಹೊಲವನ್ನು ಹಸನಮಾಡಿ ಕಳೆ, ಕಸ ತೆಗೆಯುತ್ತಾರೆ. ಅದೇ ಗರಿಕೆ ಹುಲ್ಲನ್ನು ಹೂತೋಟಗಳಲ್ಲಿ ಅಂದಚೆಂದಗಳಿಗಾಗಿ ಬೆಳೆಸುತ್ತ ಬಂದಿರುವುದನ್ನು ಕಾಣುತ್ತೇವೆ. ಸಹಜವಾಗಿ ಬೆಳೆಯುವ ಗರಿಕೆ ಹುಲ್ಲು ಆರೋಗ್ಯಕ್ಕೆ ಔಷಧಿಗೆ ಉಪಯೋಗಕ್ಕೆ ಬರುತ್ತದೆ. ಆನೆಗೆ, ದನಗಳಿಗೆ, ಕುರಿಗಳಿಗೆ, ಆಡು, ಎಮ್ಮೆಗಳಿಗೆ, ಬೆಕ್ಕಿಗೆ, ಕೆಲವು ಸಲ ನಾಯಿಗೂ ಗರಿಕೆ ಹುಲ್ಲು ಬಹಳ ಪ್ರಿಯವಾದ ಆಹಾರವಾಗಿದೆ. ಮನುಷ್ಯನು ಲೋಕಕ್ಕೆ, ಜನರಿಗೆ ಉಪಯೋಗಿಯಾಗದೆ ಇದ್ದರೂ ಈ ಗರಿಕೆ ಹುಲ್ಲಿನಷ್ಟಾದರೂ ಸಮಾಜಕ್ಕೆ, ನಾಡಿಗೆ ಉಪಯೋಗಕಾರಿಯಾಗಿ ಬದುಕುವುದನ್ನು ಕಲಿಯಬೇಕಾಗಿದೆ. ಗರಿಕೆ ಹುಲ್ಲಿನ ಹಸಿರು, ಅದರ ಹಿತವಾದ ಮೃದುಸ್ಪರ್ಶವು ಆಹ್ಲಾದಕಾರಿಯಾದುದು. ಆ ಗರಿಕೆ ಹುಲ್ಲಿನ ಮೇಲೆ ಬರಿಗಾಲಲ್ಲಿ ನಡೆಯುವ ಹಿತವಾದ ಅರಳೆಯಂತಹ ಸ್ಪರ್ಶ, ಉಲ್ಲಾಸ ಹೇಳಲಸದಳ ಆ ಗರಿಕೆ ಹುಲ್ಲಿನ ಹಸಿರನ್ನು ಉದ್ಯಾನದಲ್ಲಿ ಮನೆಯ ಮುಂದಿನ ತೋಟದಲ್ಲಿ ಬೆಳೆಸಿರುವುದನ್ನು ನೋಡಲು ಎರಡು ಕಣ್ಣುಗಳು ಸಾಲವು. ಕಣ್ಣಿಗೆ ಅಷ್ಟು ಹಿತ ಸಂತೋಷವನ್ನು ಕೊಡುತ್ತದೆ. ನಮ್ಮ ಬದುಕು ಹೆರರಿಗೆ ಈ ಗರಿಕೆ ಹುಲ್ಲಿನಷ್ಟು ಸಂತೋಷವನ್ನು ಕೊಡಲಾಗದಿದ್ದರೂ ತನ್ನಷ್ಟಕ್ಕೆ ತಾನು ಹಿತವಾಗಿ ಚೆಂದವಾಗಿ ಬದುಕಲು ಬರುವುದಲ್ಲವೆ? ಗರಿಕೆ ಹುಲ್ಲನ್ನು ನೋಡಿದಾಗಲೆಲ್ಲ ಅದರ ಉಳಿವು ಮತ್ತು ಬೆಳೆದುಬಂದ ಪಯಣವನ್ನು ನೋಡಿದರೆ ವಿಸ್ಮಯವಾಗುತ್ತದೆ. ಗರಿಕೆ ಹುಲ್ಲಿನ ಮೇಲೆ ಪ್ರೀತಿ ಹೆಚ್ಚುತ್ತದೆ.

ಭಾರತೀಯರಾದ ನಾವು ಒಂದು ಕ್ಷಣ ಭಾರತ ಬಿಟ್ಟು ಪ್ರಪಂಚದ ಇನ್ನೊಂದು ದೇಶದಲ್ಲಿ ಇದ್ದೇವೆ ಎಂದು ತಿಳಿಯೋಣ. ಅಲ್ಲಿ ಇನ್ನೊಬ್ಬರು ನಮ್ಮ ಬದುಕುವ ಹಕ್ಕನ್ನು ಕಿತ್ತುಕೊಳ್ಳಲು ಬಂದರೆ ನಮ್ಮ ಸ್ವಾತಂತ್ರ್ಯವನ್ನು ಕಸಿಯಲು ಬಂದರೆ ನಮಗೆ

ಹೇಗಾಗುತ್ತದೆ. ಅಲ್ಲಿ ನಮ್ಮನ್ನು ಜನಾಂಗೀಯ ದ್ವೇಷದಿಂದ ನೋಡಿದರೆ ನಮಗೆ ಹೇಗಾಗು ತ್ತದೆ. ನಾವು ಕೇವಲ ಭಾರತ ದೇಶವಾಸಿಗಳಾಗಿಯೇ ಇರಲು ಬಯಸುತ್ತೇವೆಯೇ? ನಮಗೆ ಹೊರದೇಶಗಳಿಗೆ ಹೋಗಲು ಆಗುವುದಿಲ್ಲ. ನಮ್ಮ ಮಿತ್ರರು, ಗೆಳೆಯರು, ಬಂಧುಗಳು, ಈ ದೇಶದ ಪ್ರಜೆಗಳು ನೆರೆಯ ದೇಶದಲ್ಲಿ ಹೋಗಿ ಬದುಕುತ್ತಿದ್ದಾರೆ. ಅವರು ಅಲ್ಲಿ ನೆಮ್ಮದಿಯಾಗಿ ಬದುಕುವುದು ಬೇಡವೆ? ನಮ್ಮ ಮನಸ್ಸನ್ನು ನಾವು ಏಕೆ ಸಣ್ಣದು ಮಾಡಿಕೊಳ್ಳುತ್ತೇವೆ. ನಾವೊಬ್ಬರೆ ಈ ಪ್ರಪಂಚದಲ್ಲಿ ಬದುಕಬೇಕು. ಇನ್ನೊಬ್ಬರು ಇಲ್ಲಿ ಬದುಕಲು ಬಿಡುವುದಿಲ್ಲ ಎನ್ನಲು ನಾವು ಯಾರು? ನಮ್ಮ ರೈತರು ಬೆಳೆದ ಕಬ್ಬು ಸಕ್ಕರೆಯಾಗಿ ಹೊರ ದೇಶಕ್ಕೆ ಹೋದರೆ ಒಳ್ಳೆಯ ಮಾರುಕಟ್ಟೆ ದರ ಸಿಕ್ಕರೆ ರೈತರಿಗೆ ಲಾಭವಲ್ಲವೆ? ನಮ್ಮ ರೈತರು ಅನೇಕ ಬೆಳೆಗಳನ್ನು, ಹೂ, ಹಣ್ಣು, ಧಾನ್ಯಗಳನ್ನು ಹೊರ ದೇಶಕ್ಕೆ ಕಳುಹಿಸಿ ಲಾಭ ಮಾಡಿಕೊಂಡು ಬದುಕುತ್ತಿದ್ದಾರೆ. ನಮಗೆ ಡೀಸೆಲ್, ಪೆಟ್ರೋಲ್ ಬೇಕು. ಹೊಸ ಹೊಸ ತಂತ್ರಜ್ಞಾನ ಬೇಕು. ಅವನ್ನು ಹೊರದೇಶದಿಂದ ಪಡೆಯಬೇಕು ಎಂದ ಮೇಲೆ ನೆರೆಹೊರೆಯವರ ಜೊತೆ ಅನ್ಯೋನ್ಯ ಇದ್ದರೆ ತಾನೆ ನಾವೂ ಸುಖವಾಗಿ ಬಾಳುವುದು. ಇಷ್ಟೇ ಯಾಕೆ ಇಂದು ನಾವು ಉಪಯೋಗಿಸುತ್ತಿರುವ ಎಲ್ಲ ಮೊಬೈಲ್‌ಗಳು ಹೊರ ದೇಶದಲ್ಲಿಯೇ ತಯಾರಾದವುಗಳು. ನಮಗೆ ಒಂದು ಮೊಬೈಲ್ ಕಂಡುಹಿಡಿಯಲು ಆಗಿಲ್ಲ. ಮೊಬೈಲ್ ಇಲ್ಲದೆ ಇಂದು ನಾವು ಬದುಕಲು ಸಾಧ್ಯವೇ ಇಲ್ಲ ಎನ್ನುವ ಹಂತಕ್ಕೆ ಬಂದು ನಿಂತಿಲ್ಲವೆ? ಈ ತಂತ್ರಜ್ಞಾನ, ಅನುಕೂಲಗಳು ಬೇಕು. ಇನ್ನೊಬ್ಬರ ವಿಚಾರ, ಉಪಸ್ಥಿತಿ ಬೇಡ ಎಂದರೆ ಹೇಗೆ? ಇಂತಹ ಕುಬ್ಜ ವಿಚಾರಧಾರೆಗಳನ್ನು 1900ರ ಕಾಲದಲ್ಲಿ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಎದುರಿಸಿದರು. ಫಸ್ಟ್‌ಕ್ಲಾಸ್ ಟಿಕೆಟ್ ಇದ್ದರೂ ಅವರನ್ನು ರೈಲಿನಿಂದ ಹೊರದಬ್ಬಲಾಯಿತು. ಇಂದು ನಮ್ಮನ್ನು, ನಿಮ್ಮನ್ನು ಯಾರಾದರೂ ಹೊರದಬ್ಬಿದರೆ ನಮಗೆ ಏನನ್ನಿಸುತ್ತದೆ. ಅಲ್ಪ ಭಾವನೆಗಳನ್ನು ಬಿಟ್ಟುಬಿಡಬೇಕು. ಧರ್ಮದ ಹೆಸರಿನಲ್ಲಿ ಸಣ್ಣತನಗಳನ್ನು ಬೆಳೆಸಿಕೊಳ್ಳಬಾರದು.

ನಮ್ಮ ನೆರೆಯ ಹೊಲದವನು ಬೇಲಿ ದಾಟಿಸಿ ದನಗಳನ್ನು ಬಿಟ್ಟು ಬೆಳೆ ಮೇಯಿಸಿದರೆ ನಮಗೆ ದುಃಖವಾಗುವುದಿಲ್ಲವೆ? ಕೋಪ ಬರುವುದಿಲ್ಲವೆ? ಅವರು ಹಾಗೆ ಮಾಡಬಾರದು. ನಮ್ಮ ಬೆಳೆ ಬೆಳೆಯಲು ಬಿಡಬೇಕು. ನಾವು ಬದುಕಲು ಬಿಡಬೇಕು. ಸಾಮರಸ್ಯ ನಮಗೆ ಅನಿವಾರ್ಯ. ಹಾರ್ಮೋನಿಯಂನಲ್ಲಿ ಏಳು ಸ್ವರ ಹೊರಡಿಸಲಾಗುತ್ತದೆ. ಭಿನ್ನ ಭಿನ್ನ ಸ್ವರಗಳಿದ್ದರೂ ಅವನ್ನು ಮೇಳನಗೊಳಿಸಿ ಹಾಡಿದಾಗ ಗಾಯನ ಚೆಂದ, ಹಿತ, ಸೊಗಸು. ಹಾಗೆ ನಾವು ಈ ಊರಿನ, ಈ ನಾಡಿನ ಈ ದೇಶದ, ಈ ಪ್ರಪಂಚದ ಎಲ್ಲರೊಂದಿಗೆ ಸಮರಸದಲ್ಲಿ ಬೆರೆಯುವುದೇ ಧರ್ಮ. ದೇಶ ಎಲ್ಲ ಪ್ರಜೆಗಳದು. ಗಾಳಿ ನಾನೊಬ್ಬನೆ ಕುಡಿಯುತ್ತೇನೆ ಎನ್ನಲು ಬರದು. ಅದು ಆಗುವುದೂ

ಇಲ್ಲ. ಹಾಗೇನಾದರೂ ಆಗುವುದಿದ್ದರೆ ಗಾಳಿಗೂ ಬೇಲಿ ಹಾಕಿಕೊಂಡು ಬಿಡುತ್ತಿದ್ದೆವೇನೋ? ಈ ಜಗತ್ತಿನಲ್ಲಿ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎಲ್ಲರಿಗೆ ಇದೆ. ಇಲ್ಲಿ ಎಲ್ಲರಿಗೂ ಬದುಕುವ ಹಕ್ಕಿದೆ. ಅದನ್ನು ಆ ಆ ನೆಲದ ಕಾನೂನಿಗನುಸಾರ ವಾಗಿ ಬದುಕುವುದೇ ಧರ್ಮ.

ಕರ್ನಾಟಕದ ಇತಿಹಾಸದಲ್ಲಿ ಅನೇಕ ಮಹಾತ್ಮರು ಆಗಿಹೋಗಿದ್ದಾರೆ. ಎಲ್ಲರಿಗೂ ಬದುಕುವ ಹಕ್ಕಿದೆ. ಅವರು ನಮಗೆ ಸಾಮರಸ್ಯದಿಂದ ಬದುಕುವುದನ್ನು ತಿಳಿಸಿದ್ದಾರೆ. ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಕಳಚುರ್ಯರು, ಹೊಯ್ಸಳರು, ವಿಜಯನಗರದ ಅರಸರು ಹೀಗೆ ಎಲ್ಲ ರಾಜ, ಮಹಾರಾಜರು ಸಾಮರಸ್ಯ ತತ್ವವನ್ನೆ ಹೇಳಿದ್ದಾರೆ. ಒಬ್ಬ ರಾಜನು ಎಲ್ಲ ಧರ್ಮವನ್ನು ಗೌರವಿಸಿ ನಡೆದುಕೊಳ್ಳುವುದನ್ನು ಕಂಡಿದ್ದೇವೆ. ಯಾವುದೇ ಧರ್ಮ ಇರಲಿ ಅದು ಇನ್ನೊಂದು ಧರ್ಮವನ್ನು ಸಹಿಸಿಕೊಳ್ಳಬೇಕು.

ಧರ್ಮವು ತನ್ನ ತತ್ವಗಳನ್ನು ಬಹಳ ಸುಂದರವಾಗಿ ಇಷ್ಟುದ್ದ ಹೇಳುತ್ತದೆ. ಅಲ್ಲಿ ಇನ್ನೊಂದು ಧರ್ಮ ಬಂತು ಎಂದ ಕೂಡಲೆ ಬಂದೂಕು, ಖಡ್ಗ, ಬಿಲ್ಲು, ಬಾಣ, ಶಸ್ತ್ರಗಳನ್ನು ಕೈಗೆ ಹಿಡಿದುಕೊಳ್ಳುತ್ತದೆ. ಅಂದರೆ ಧರ್ಮವು ಮನುಷ್ಯನ ಕೈಯ ದಾಳವಾಗಿದೆ ಎಂದರ್ಥ. ಧರ್ಮವನ್ನು ಮನುಷ್ಯನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾನೆ. ಧರ್ಮದ ಹೆಸರಿನಲ್ಲಿ ಸೋಗುಹಾಕಿಕೊಂಡು ಪುರುಷ ತನ್ನ ಸ್ವಾರ್ಥವನ್ನು ನೆರವೇರಿಸಿಕೊಳ್ಳುತ್ತಿರು ತ್ತಾನೆ. ನಿಜದಲ್ಲಿ ಧರ್ಮವು ಏನೂ ಅಲ್ಲ. ಅದು ಒಂದು ಸಿದ್ಧಾಂತದ ಗ್ರಂಥ. ಅದನ್ನು ಯಾರು ಹೇಗೆ ರಚನೆ ಮಾಡುತ್ತಾರೋ ಅದರಂತೆ ಅದು ರಚನೆಯಾಗುತ್ತದೆ. ಆಚರಣೆಗೆ ತೆರೆದುಕೊಳ್ಳುತ್ತದೆ. ಉದಾಹರಣೆಗೆ ರಾಷ್ಟ್ರಧ್ವಜವನ್ನು ಒಬ್ಬನು ಅಗೌರವಿಸುತ್ತಾನೆ. ಅದಕ್ಕೆ ಅವನು ಪ್ರಾಣವನ್ನೆ ತೆಗೆಯಬೇಕು ಎಂದು ವಾದಿಸಲಾಗುತ್ತದೆ. ವಿಷಯ ಗಂಭೀರಕ್ಕೆ ಹೋದಾಗ ಪ್ರಧಾನಿ ನೆಹರು ಅವರು ಮಧ್ಯ ಪ್ರವೇಶಿಸಿ ಒಬ್ಬ ಮನುಷ್ಯನ ಪ್ರಾಣವು ಅಷ್ಟೊಂದು ಅಗ್ಗವೇನು? ನಿಜ ಧ್ವಜಕ್ಕೆ ಅಗೌರವವಾಗಿದೆ. ಅದಕ್ಕೆ ಆತನಿಗೆ ಇನ್ನೊಮ್ಮೆ ಹೀಗೆ. ಮಾಡದಂತೆ ಎಚ್ಚರಿಕೆ ಕಲಿಸಬೇಕು. ರಾಷ್ಟ್ರಧ್ವಜ ಒಂದು ಬಟ್ಟೆ ಅದಕ್ಕೆ ನಾವು ಧ್ವಜದ ಮಾನ್ಯತೆ ಕೊಟ್ಟಿದ್ದೇವೆ ಅಷ್ಟೇ. ಅದಕ್ಕಾಗಿ ಆತನ ಪ್ರಾಣ ತೆಗೆಯಬೇಕಿಲ್ಲ ಎಂದು ತಡೆದರು. ಮೌಲ್ಯವನ್ನು ಗೌರವಿಸಿ ನಡೆದುಕೊಳ್ಳುವುದನ್ನು ಎಲ್ಲರಿಗೂ ಕಲಿಸಬೇಕು ಎಂದು ಶಿಕ್ಷೆಯನ್ನು ಅತಿ ಕಡಿಮೆಗೊಳಿಸಲಾಯಿತು. ಹಾಗೆ ಧರ್ಮವನ್ನು ಹೃದಯವಂತಿಕೆಯಿದ್ದವರು ಚೆನ್ನಾಗಿ ಆಚರಿಸುತ್ತಾರೆ. ಹೃದಯವಂತಿಕೆ ಇಲ್ಲದವರು ಧರ್ಮದ ಹೆಸರಿನಲ್ಲಿ ಕೇಡಿಗೆ ಮುಂದಾಗುತ್ತಾರೆ. ಅದು ಆಗಬಾರದು.

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ

ದಯವೇ ಧರ್ಮದ ಮೂಲವಯ್ಯ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ

ಧರ್ಮದ ತಳಹದಿ ದಯೆ. ಮನುಷ್ಯರಲ್ಲಿ ಮಾತ್ರವಲ್ಲ ಎಲ್ಲ ಪ್ರಾಣಿಗಳಲ್ಲಿಯೂ ದಯವಿರಬೇಕು. ಇದೇ ಕೂಡಲಸಂಗಮದೇವರ ನಿರೂಪ. ದಯೆ, ಕರುಣೆ, ಪ್ರೀತಿ, ಅನುಕಂಪ, ಸಮಾನತಾ ತತ್ವದಿಂದ ಬಾಳುವುದೇ ಧರ್ಮ. ಜೀವ ದಯೆ, ಅಹಿಂಸಾ ಪರಮೋ ಧರ್ಮಃ ಧರ್ಮದ ಉನ್ನತ ತತ್ವವಾಗಿದೆ. ಇಲ್ಲಿ ಒಂದು ಕತೆ ಹೇಳಿ ಈ ಲೇಖನ ಮುಗಿಸುತ್ತೇನೆ. ಹತ್ತು ವರ್ಷದ ಒಬ್ಬ ಶಾಲಾ ಬಾಲಕನು ಒಂದು ದೊಡ್ಡ ಸರ್ಕಲ್‌ನಲ್ಲಿ ಎರಡು ದಾರಿಯನ್ನು ದಾಟಬೇಕಾಗಿತ್ತು. ವಿಪರೀತ ವಾಹನಗಳು ಎದೆಯ ಮೇಲೇರಿ ಬರುವಂತೆ ವೇಗವಾಗಿ ಬರುತ್ತಿವೆ. ಶಾಲೆಗೆ ಹೋಗಬೇಕಿದ್ದರೆ ದಾರಿಯನ್ನು ದಾಟಲೇ ಬೇಕು. ಆಗ ಅವನು ಒಂದು ಉಪಾಯ ಮಾಡಿದ. ರಸ್ತೆ ದಾಟುತ್ತಿದ್ದ ಒಬ್ಬ ವ್ಯಕ್ತಿಯ ಕೈ ಹಿಡಿದು ನನಗೆ ಭಯವಾಗುತ್ತದೆ. ನಿಮ್ಮ ಜೊತೆ ನನ್ನನ್ನೂ ಆ ಕಡೆ ರಸ್ತೆ ದಾಟಿಸಿರಿ ಎಂದನು. ಅವರು ಅವನ ಕೈ ಹಿಡಿದು ಕರೆದುಕೊಂಡು ಆ ಬದಿಗೆ ಹೋದರು. ಇನ್ನೊಂದು ದಾರಿಯನ್ನೂ ದಾಟಬೇಕಿತ್ತು. ರೀ ನನಗೆ ಭಯವಾಗುತ್ತದೆ ಆ ಕಡೆಗೂ ನನ್ನನ್ನು ದಾಟಿಸಿರಿ ಎಂದ. ಇವರು ನಕ್ಕು ಅವನನ್ನು ಆ ಬದಿಗೂ ದಾಟಿಸಿ ಹೋದರು. ಆ ಶಾಲಾ ಬಾಲಕನು ದಾರಿ ಹಿಡಿದು ಹೊರಟಾಗ ಒಬ್ಬ ಕುರುಡರು ಎದುರಿಗೆ ಯಾರಿದ್ದೀರಿ ನನ್ನನ್ನು ಆ ಕಡೆಗೆ ರಸ್ತೆ ದಾಟಿಸಿರಿ ಎಂದು ಕೇಳಿದರು. ಇವನು ಬನ್ನಿ ಎಂದು ಅವರ ಕೈಹಿಡಿದು ಆ ಕಡೆಗೆ ದಾಟಿಸಿದ. ಅವರು ಮುಂದೆ ಹೋದರು. ಇವನು ಇನ್ನೊಬ್ಬ ರಸ್ತೆ ದಾಟುವವರ ಕೈಹಿಡಿದು ತಾನು ಯಾವ ಕಡೆಗೆ ಹೋಗಬೇಕಿತ್ತು ಆ ಕಡೆಗೆ ದಾಟಿದ. ಈ ಬಾಲಕ ತನಗೆ ತಾನು ರಸ್ತೆಯನ್ನು ದಾಟಲಾರ ಇನ್ನೊಬ್ಬರ ನೆರವು ಅವನಿಗೆ ಬೇಕು. ಇಂತಹ ಬಾಲಕ ತನಗೆ ಸಹಾಯ ಕೇಳಿದವರಿಗೆ ತಾನೂ ಅವರ ಕೈಹಿಡಿದು ರಸ್ತೆ ದಾಟಿಸುತ್ತಾನೆ. ತನಗೆ ಧೈರ್ಯವಿಲ್ಲ. ಆದರೆ ಇನ್ನೊಬ್ಬರಿಗೆ ಸಹಾಯ ಮಾಡಲು ಅವನಿಗೆ ಧೈರ್ಯ ಇದೆ. ಒಳ್ಳೆಯ ಕೆಲಸಗಳನ್ನು ಮಾಡಲು ಧೈರ್ಯ ಅವನಿಗೆ ಬಂತು. ಹಾಗೆ ನಾವು ಜೀವನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲು ಧೈರ್ಯವಹಿಸಬೇಕು. ಇದು ಧರ್ಮ. ನಾವು ಒಬ್ಬರಿಗೆ ನೆರವು ನೀಡಿದರೆ ಧರ್ಮ ನಮಗೆ ನೆರವು ನೀಡುತ್ತದೆ. ಇದರಿಂದ ನಾವು ಕಳೆದುಕೊಳ್ಳುವುದು ಏನೂ ಇಲ್ಲ. ನಾವು ಸಾರ್ಥಕತೆಯನ್ನು ಪಡೆಯುವೆವು ಇದೇ ಧರ್ಮ.

ಪ್ರೀತಿಸುವುದು ಹೇಳಿದಷ್ಟು ಸುಲಭವಲ್ಲ. ಪ್ರೀತಿಯ ವ್ಯಾಖ್ಯೆ ಏನು? ಯಾವುದು ಪ್ರೀತಿ. ತಾಯಿ ತನ್ನ ಮಗುವನ್ನು ಪ್ರೀತಿಸುವುದು ಸಹಜ ಪ್ರೀತಿ. ತನ್ನ ಮಗುವಿಗೆ ಹಾಲು, ತುಪ್ಪ, ಹಣ್ಣು ತಿನಿಸುವುದು ಪ್ರೀತಿ. ಅದೇ ರೀತಿ ನೆರೆಮನೆಯ ಮಗುವಿಗೆ ಈ ತಾಯಿ ಉಣಿಸಬಲ್ಲಳಾದರೆ ಅದು ನಿಜವಾದ ಪ್ರೀತಿ. ಚಳಿಗೆ ರಗ್ಗು, ಹೊದಿಕೆಯನ್ನು ತನ್ನ ಮಗುವಿಗೆ ಹೊದಿಸಿ ಜೋಪಾನ ಮಾಡಿದರೆ ಅದು ಸರಿಯಾದ ಅಕ್ಕರೆ, ಪ್ರೀತಿ.

ಅದರಂತೆ ಬೀದಿಯಲ್ಲಿ ಇರುವ ಮಗುವಿಗೆ ಒಂದು ತುತ್ತು ಅನ್ನ, ಒದು ಹೊದಿಕೆ ಹೊದಿಸಬಲ್ಲಳಾದರೆ ಅದು ಅತ್ಯುನ್ನತ ಪ್ರೀತಿ.

ಮನುಷ್ಯ ತನ್ನ ನಾಡನ್ನು ಪ್ರೀತಿಸುವುದು ಒಂದು ಮೌಲ್ಯ. ದೇಶಭಕ್ತಿ, ನೆಲ, ಜಲ, ಭಾಷೆ ಇವನ್ನು ನಮ್ಮದು ಎಂದು ಪ್ರೀತಿಸುತ್ತೇವೆ. ಈಗ ನವಲಗುಂದ, ನರಗುಂದದ ತುಮಕೂರು ಜಿಲ್ಲೆ, ಚಿಕ್ಕಬಳ್ಳಾಪುರ ಭಾಗದ ಜನರಿಗೆ ಕುಡಿಯಲು ನೀರಿಲ್ಲ, ಅವರಿಗೆ ನೀರು ಕೊಡಬೇಕು. ದಕ್ಷಿಣ ಕನ್ನಡದ ಜನರೂ ಕನ್ನಡಿಗರೆ, ಆದರೂ ಅವರು ತಮ್ಮ ಭಾಗದಲ್ಲಿ ಹರಿಯುವ ಹೊಳೆಯ ನೀರನ್ನು, ಸಮುದ್ರಕ್ಕೆ ಹೋಗಿ ಬೀಳುವ ಹೆಚ್ಚಿನ ನೀರನ್ನು ಕೊಡಲು ಸಿದ್ಧರಿಲ್ಲ. ತುಮಕೂರು, ಚಿಕ್ಕಬಳ್ಳಾಪುರ ಜನರಿಗೆ ಕೊಡಿರಿ ಎಂದರೆ ಅವರು ಕೊಡಲು ಸಿದ್ಧರಿಲ್ಲ. ಚಳವಳಿ, ರಸ್ತೆಬಂದ್ ಮಾಡುತ್ತಾರೆ. ಚಿಕ್ಕಬಳ್ಳಾಪುರ, ತುಮಕೂರಿನ ಜನರು ಚೀನಾ, ಪಾಕಿಸ್ತಾನದ ಜನರೇನು? ಕನ್ನಡಿಗರು ಕನ್ನಡಿಗರಿಗೆ ಕೊಡಲು ಸಿದ್ಧರಿಲ್ಲ ಎಂದ ಮೇಲೆ ನಾವು ಎಂತಹ ಕನ್ನಡಿಗರು. ನವಲಗುಂದ, ನರಗುಂದ ಜನರಿಗೆ ಕುಡಿಯಲು ನೀರಿಲ್ಲ ಚಳವಳಿ ಹಲವು ತಿಂಗಳಿನಿಂದ ನಡೆಸಿದ್ದಾರೆ. ಅವರಿಗೆ ಗೋವಾದ ಜನರು ನೀರು ಕೊಡಬೇಕು. ಕರ್ನಾಟಕದ ಜನರೇ ಕನ್ನಡಿಗರಿಗೆ ನೀರು ಕೊಡದಿರುವಾಗ ಇನ್ನು ಗೋವಾದ ಜನರು ಮಹದಾಯಿ ನೀರನ್ನು ಕನ್ನಡಿಗರಿಗೆ ಕೊಡುತ್ತಾರೆಯೆ? ಖಂಡಿತ ಇಲ್ಲ. ಕನ್ನಡಿಗರೇನು ಚೀನಾದವರಲ್ಲ, ಪಾಕಿಸ್ತಾನದವರಲ್ಲ. ಕುಡಿಯಲು ನೀರು ಕೇಳಿದರೆ ಕೊಡಲ್ಲ. ನೀರು ಸಮುದ್ರಕ್ಕೆ ಹೋಗಿ ಬಿದ್ದರೆ ಬೀಳಲಿ. ಹೀಗೆ ಮನುಷ್ಯರು ಸ್ವಾರ್ಥಿಗಳಿರುವಾಗ ಪ್ರೀತಿ ಎಲ್ಲಿ ಸಾಧ್ಯ?

ಎಲ್ಲರನ್ನೂ ಪ್ರೀತಿಸು, ಎಂತಹವರನ್ನೂ ಪ್ರೀತಿಸು. ಇದು ಕೇವಲ ಬುರುಡೆ. ಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಎಷ್ಟೆಲ್ಲ ಹೋರಾಟ ಮಾಡಿದರು. ಮಟಮಟ ಮಧ್ಯಾಹ್ನವೆ ಎಲ್ಲರ ಎದುರೆ ಗಾಂಧೀಜಿಯವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಪ್ರೀತಿ ಎಲ್ಲಿ ಸಾಧ್ಯ? ಸಹಿಷ್ಣುತೆ ಇಂದು ನಿನ್ನೆಯದಲ್ಲ ಮೊದಲಿನಿಂದಲೂ ಇಲ್ಲ. ಮನುಷ್ಯರ ಮನಸ್ಸುಗಳಿಗೆ ತುಕ್ಕು ಹಿಡಿದಿದೆ. ಗೆದ್ದಲು ಹಿಡಿದಿದೆ. ಅಲ್ಲಿ ರಾಗ, ಭಾವಗಳು ಹದ್ದುಮೀರಿ ಕುಣಿಯುತ್ತವೆ. ನಾವು ಚಿಕ್ಕಚಿಕ್ಕದಾಗಿ ವಿಚಾರ ಮಾಡಿದಾಗ ನಮಗೆ ಇತರರ ವಿಚಾರಗಳು ಕುರೂಪವಾಗಿ ಕಾಣಿಸಿಕೊಳ್ಳುತ್ತವೆ. ನಮ್ಮ ಮನಸ್ಸು, ಹೃದಯವು ಶುದ್ಧನೀರು, ಗಾಳಿಯಂತಾಗಬೇಕು. ಹೂ ಪರಿಮಳದಂತಾಗಬೇಕು, ಶುದ್ಧ ಹವಾ ಸೇವನೆ ಎಲ್ಲರ ಆರೋಗ್ಯಕ್ಕೆ ಹಿತ, ಶುದ್ಧ ಕುಡಿಯುವ ನೀರು ಎಲ್ಲರಿಗೂ ಹಿತ, ಹಾಗೆ ಶುದ್ಧ ವಿಚಾರಗಳನ್ನು ನಾವು ಪ್ರಯತ್ನ ಮಾಡಿ ಬೆಳೆಸಿಕೊಳ್ಳಬೇಕು. ನಾವು ಕೂಪ ಮಂಡೂಕಗಳಾಗದೆ ಬಾವಿಯಿಂದ ಹೊರಗೆ ಬರಬೇಕು. ನಮ್ಮ ಭಾವನೆಗಳನ್ನು ಉದಾತ್ತ ಮಾಡಿಕೊಳ್ಳಬೇಕು. ಹೇಗೆ?

ಕೊಲ್ಲುವ ಧರ್ಮವನೊಯ್ದು ಒಲೆಯೊಳಗಿಕ್ಕುವುದು
ಕೊಲಲಾಗದೆಂಬ ಜೈನಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ

ಕವಿ, ಅನುಭಾವಿ ಸರ್ವಜ್ಞ ಜೈನಧರ್ಮದ ಉನ್ನತ ತತ್ವಗಳನ್ನು ಕೊಂಡಾಡಿದ್ದಾನೆ. ಜೈನಧರ್ಮವನ್ನು ಗೌರವಿಸಿ ಎಷ್ಟೊಂದು ಒಳ್ಳೆಯ ಮಾತುಗಳನ್ನಾಡಿದ್ದಾನೆ. ಕೊಲ್ಲುವುದು ಕೂಡದು. ಹಿಂಸೆಯನ್ನು ಬೇಡ ಎನ್ನುತ್ತದೆ. ಇಂತಹ ಜೈನ ಧರ್ಮವು ನನ್ನ ತಲೆಯ ಮೇಲಿರಲಿ ಎಂಬ ಉನ್ನತವಾದ ಮಾತುಗಳನ್ನು ಹೇಳಿದ್ದಾನೆ. ಹೀಗೆ ಪರಸ್ಪರರು ಇನ್ನೊಂದು ಧರ್ಮವನ್ನು ಗೌರವದಿಂದ ನೋಡುವ ಹೃದಯವಂತಿಕೆಯನ್ನು ಗಳಿಸಿದುದಾದರೆ ಆಗ ಭೂಲೋಕವೆ ಸ್ವರ್ಗವಾಗುವುದು. ಇಂತಹ ಪ್ರೀತಿಯನ್ನು ಕಲಿಸುವವರಾರು? ಕಲಿಯಲು ಯಾರು ಸಿದ್ಧರಿದ್ದಾರೆ? ಎಷ್ಟು ಹೇಳಿದರೂ ನೀನು ಯಾರು ಹೇಳುವುದಕ್ಕೆ ಎಂದು ಸಾಕ್ರಟೀಸನಿಗೆ ಬಲವಂತವಾಗಿ ವಿಷ ಕುಡಿಸಲಾಯಿತು. ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಲಾಯಿತು. ಗಾಂಧೀಜಿಯವರ ಎದೆಗೆ ಗುಂಡು ಹೊಡೆಯಲಾಯಿತು. ಅಷ್ಟೇ ಏಕೆ ಸಂಶೋಧಕರಾದ, ವಿದ್ವಾಂಸ ಎಂ.ಎಂ. ಕಲಬುರ್ಗಿಯವರ ಹಣೆಗೆ ಗುಂಡು ಹೊಡೆದು ಮುಗಿಸಲಾಯಿತು. ಸಹಿಷ್ಣುತೆಯಿಲ್ಲದವರ ಕೃತ್ಯ ಇದು. ಸಹಿಷ್ಣುತೆ ಒಂದು ದಿನದಲ್ಲಿ ಬರುವುದಿಲ್ಲ. ಪಾಕಿಸ್ತಾನೀಯರಿಗೆ ಎಷ್ಟು ಹೇಳಿದರೂ ಅವರು ಭಾರತದೇಶವನ್ನು ಪ್ರೀತಿಸುವರೇನು? ನಮ್ಮ ಯೋಧರಿಗೆ ದೇಶದ ಗಡಿಯಲ್ಲಿ ಕಾರಣವಿಲ್ಲದೆ ಗುಂಡು ಹೊಡೆದು ಕೊಲ್ಲುತ್ತಲೆ ಇದ್ದಾರೆ. ಪ್ರೀತಿಸುವುದು ದ್ವೇಷ ಮಾಡಿದಷ್ಟು ಸುಲಭ ಇಲ್ಲ, ಕಲ್ಲು ಹೊಡೆಯುವುದು ಸುಲಭ, ಒಡೆಯುವುದು, ಕೆಡಿಸುವುದು ಸುಲಭ, ಕಟ್ಟುವುದು ಕಷ್ಟ. ಜೀವನ ಕಟ್ಟಿಕೊಳ್ಳಲು ಆಯುಷ್ಯವನ್ನೆ ಸವೆಸಬೇಕು. ಮಡಕೆ ಹೊಡೆದುಹಾಕಲು ಕ್ಷಣ ಸಾಕು. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬ ನಾಣ್ಣುಡಿ ಇದನ್ನೆ ಹೇಳುತ್ತದೆ. ಧರ್ಮದ ಹೆಸರಿನಲ್ಲಿ ಪೂರ್ವಾಗ್ರಹ ಇಟ್ಟುಕೊಳ್ಳುವುದನ್ನು ಬಿಡಬೇಕು. ಮನುಷ್ಯರು ಮನುಷ್ಯರಾಗಿ ಮಾನವೀಯತೆಯಿಂದ ಸರ್ವಸಮಾನತಾ ಗೌರವವನ್ನು ನೀಡುತ್ತ ಬದುಕುವುದನ್ನು ಕಲಿಯಬೇಕು.

ಪ್ರಪಂಚದಲ್ಲಿ ಜನಾಂಗೀಯ ದ್ವೇಷ ಇಲ್ಲದ ಸ್ಥಳ ಎಲ್ಲಿದೆ? ಮಧ್ಯ ಆಫ್ರಿಕಾ ದೇಶದ ಬಂಗುರು ಪ್ರದೇಶದಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರ ನಡುವೆ ಜನಾಂಗೀಯ ದ್ವೇಷ ಅಧಿಕವಾಗಿದೆ. ಇಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇಲ್ಲಿಗೆ ಭೇಟಿ ನೀಡಿದ ಪೋಪ್ ಫ್ರಾನ್ಸಿಸ್ ಅವರು ನವೆಂಬರ್ 30 ಸೋಮವಾರ ಕ್ರೈಸ್ತರು ಮತ್ತು ಮುಸ್ಲಿಂ ಸಹೋದರರು ದಯವಿಟ್ಟು ದ್ವೇಷ ನಿಲ್ಲಿಸಿ ಎಂದು ಕರೆ ನೀಡಿದ್ದಾರೆ. ನಾವೆಲ್ಲರೂ ದ್ವೇಷ, ಪ್ರತೀಕಾರ ಮತ್ತು ಹಿಂಸೆಯನ್ನು ಒಕ್ಕೊರಲಿನಿಂದ ವಿರೋಧಿಸಬೇಕು. ದೇವರು ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಹಿಂಸೆಯನ್ನು ತಡೆಯಬೇಕು. ಶಾಂತಿ, ಸಮನ್ವಯವನ್ನು ಕಾಪಾಡಬೇಕು ಎಂದು ಹೇಳಿದ್ದಾರೆ.

□

# "ಇಷ್ಟಲಿಂಗನಿಷ್ಠ" ಅಮುಗಿದೇವ

ಎಚ್.ಸಿ. ರಜತ್

**ಸಂ**ಸ್ಕೃತಭೂಯಿಷ್ಠತೆಯಿಂದ ಕೂಡಿ ವೈದಿಕ ಶಿಷ್ಯರ ಜಿಹ್ವೆಗಳಲ್ಲಿ ನರಳಾಡುತ್ತ, ಓಲೆಗರಿಗಳಲ್ಲಿ ಅಡಗಿ ಕುಳಿತಿದ್ದ ಕನ್ನಡ ಸಾಹಿತ್ಯ ಸರಸ್ವತಿಯನ್ನು ಸಾಮಾನ್ಯ ಜನರ ನಾಲಗೆಯಲ್ಲಿ ನರ್ತಿಸುವಂತೆ ಮಾಡಿದವರು ವಚನಕಾರರು. ತರತಮಭಾವದ ಪುರೋಹಿತಶಾಹಿ ಸಂಸ್ಕೃತಿಯ ವಿರುದ್ಧ ಸಿಡಿದೆದ್ದು ಜಾತ್ಯತೀತತೆ, ಸ್ತ್ರೀಸಮಾನತೆ, ಏಕದೇವೋಪಾಸನೆ, ಕಾಯಕ, ದಾಸೋಹ, ಸ್ಥಾವರವಿರೋಧಗಳಂತಹ ಉನ್ನತ ಮೌಲ್ಯಗಳನ್ನು ಸಾಮಾಜೀಕರಣಗೊಳಿಸಿದ ವಚನ ಚಳುವಳಿಯಲ್ಲಿ ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಗಾಗಿದ್ದ ಮಾದರ, ಡೋಹರ, ಮಚ್ಚಿಗ, ಕೀಲಾರ, ಡೊಂಬ, ವ್ಯಾಧ, ಲೆಂಕ, ಕದಿರೆ, ವೇಶ್ಯೆ ಮುಂತಾದ ನಾನಾ ವೃತ್ತಿಗಳಿಂದ (ಜಾತಿ) ಬಂದ ಶರಣರಿದ್ದರು. ಇವರಲ್ಲಿ ಅನೇಕರು ವಚನಗಳನ್ನು ರಚಿಸಿದ್ದಾರೆ; ಅವರಲ್ಲಿ ಅಮುಗಿದೇವಯ್ಯನೂ ಒಬ್ಬ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅಮುಗಿದೇವ ಎಂಬ ಹೆಸರಿನ ಇಬ್ಬರು ವಚನಕಾರರು ಕಂಡುಬರುತ್ತಾರೆ. ಒಬ್ಬ ಕನ್ನಡಿ (ಕ್ಷೌರ) ಕಾಯಕದ ಅಮುಗಿದೇವ. ಈತ 'ಕಮಳೇಶ್ವರಲಿಂಗ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾನೆ. ಇನ್ನೊಬ್ಬ 'ಸೋಮನಾಥ' ಅಥವಾ 'ಸಿದ್ಧಸೋಮನಾಥ'' ಎಂಬ ಅಂಕಿತದಿಂದ ವಚನಗಳನ್ನು ರಚಿಸಿರುವ ನೇಯ್ಗೆ ಕಾಯಕದ ಅಮುಗಿದೇವ. ಇವರಿಬ್ಬರಲ್ಲದೆ ಕವಿಚರಿತಕಾರರು 'ಅಮುಗೇಶ್ವರ ಲಿಂಗ' ಎಂಬ ಅಂಕಿತದ ವಚನಕಾರನನ್ನು ಹೆಸರಿಸಿ, ಈತ ಕ್ರಿ.ಶ. 1160 ರಲ್ಲಿ ಇದ್ದನೆಂದು ಹೇಳಿ ಆತನ ವಚನವೊಂದನ್ನು ಉಲ್ಲೇಖಿಸಿದ್ದಾರೆ. 'ವಿಶ್ವಮಯ ರೂಪಾಗಿ ಬಂದೆನಯ್ಯಾ ಭಕ್ತಿಗೆ ಎನ್ನ ಮನಕ್ಕೆ ಸಂದ ನಿಲುವು ಅಮುಗೇಶ್ವರ ಲಿಂಗಕ್ಕೆ ಮಾಟವಾಯಿತ್ತು' (ಕರ್ಣಾಟಕ ಕವಿಚರಿತೆ: ನರಸಿಂಹಾಚಾರ್ಯ ಆರ್. ಪರಿಶೋಧಿತ ಮುದ್ರಣ -1961, ಪು.196). ಆದರೆ ಫ.ಗು. ಹಳಕಟ್ಟಿಯವರು 'ಅಮುಗೇಶ್ವರ ಲಿಂಗ'

---

ಶ್ರೀ **ಎಚ್.ಸಿ. ರಜತ್**, ಸಂಶೋಧನಾ ವಿದ್ಯಾರ್ಥಿ, ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು

ಎಂಬುದು ಅಮುಗಿದೇವಯ್ಯನ ಪತ್ನಿ ಅಮ್ಮುಗೆ ರಾಯಮ್ಮನ ವಚನಗಳ ಅಂಕಿತ ಎಂಬುದನ್ನು ಕಂಡುಹಿಡಿದು ಆಕೆಯ ನಾಲ್ಕು ವಚನಗಳನ್ನು 'ಶಿವಾನುಭವ ಪತ್ರಿಕೆ'ಯಲ್ಲಿ ಪ್ರಕಟಿಸಿದ್ದಾರೆ. (ಶಿವಾನುಭವ: ಸಂಪುಟ-2, ಸಂಚಿಕೆ-3, ಪು. 420). ಆ ನಾಲ್ಕು ವಚನಗಳಲ್ಲಿ ಕವಿಚರಿತಕಾರರು ಉದಾಹರಿಸಿದ ವಚನವು ಸೇರಿದೆ. ಆದ್ದರಿಂದ 'ಅಮುಗೇಶ್ವರ ಲಿಂಗ' ಎಂಬ ಅಂಕಿತವನ್ನುಳ್ಳ ವಚನಗಳು ಇನ್ನೊಬ್ಬ ಅಮುಗಿದೇವಯ್ಯನವು ಎನ್ನುವುದಕ್ಕಿಂತ ಅಮುಗಿದೇವಯ್ಯನ ಪತ್ನಿ ರಾಯಮ್ಮನ ವಚನಗಳೆಂದು ಇಟ್ಟುಕೊಳ್ಳಬಹುದಾದರೆ ಅಮುಗಿದೇವಯ್ಯಗಳು ಮೂವರಲ್ಲ, ಇಬ್ಬರೇ ಎಂದು ಹೇಳಬಹುದೆಂಬ ಹಳಕಟ್ಟಿಯವರ ಮಾತುಗಳು ನಿರ್ವಿವಾದವಾಗಿವೆ.

ಪ್ರಕೃತದಲ್ಲಿ ನಮಗೆ ಮುಖ್ಯವಾದವನು 'ಸೋಮನಾಥ' ಅಥವಾ 'ಸಿದ್ದ ಸೋಮನಾಥ' ಎಂಬ ಅಂಕಿತದಿಂದ ವಚನಗಳನ್ನು ಬರೆದಿರುವ ನೇಯ್ಗೆ ಕಾಯಕದ ಅಮುಗಿದೇವ. ಈತ ಬಸವಣ್ಣನವರ ಕಾಲದಲ್ಲಿ ಕಲ್ಯಾಣದಲ್ಲಿದ್ದ ಎಂಬುದನ್ನು ಸಿದ್ಧರಾಮನ ವಚನವೊಂದು ಸ್ಪಷ್ಟಪಡಿಸುತ್ತದೆ.

> ಅಂಗ ಲಿಂಗ ಒಂದೆಂದ ಬಳಿಕ ಅಂಗಗೆಟ್ಟು ಲಿಂಗ ಉಳಿಯಿತ್ತು ನೋಡಾ.
> ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ.
> ಅಂಗಲಿಂಗ ನಿರ್ವಯಲಲ್ಲಡಗಿಸಬಲ್ಲರೆ ಭಕ್ತನೆಂಬೆ,
> ಮಹೇಶನೆಂಬೆ ಕಪಿಲಸಿದ್ದ ಮಲ್ಲಿಕಾರ್ಜುನನವನೆಂಬೆ ನೋಡಾ ಅಮುಗಿದೇವಾ
>
> (ಸಿದ್ಧರಾಮೇಶ್ವರ ವಚನ ಸಂಪುಟ: ವಿದ್ಯಾಶಂಕರ ಎಸ್. ಪು. 441, ವ. 1530)

ಅಲ್ಲದೆ ಈತ ವಾಗ್ಗೇಯಕಾರನೂ ಆಗಿದ್ದ ಎಂಬುದನ್ನು ಡಾ. ಎಲ್. ಬಸವರಾಜು ಅವರು ತೋರಿಸಿಕೊಟ್ಟಿದ್ದಾರೆ. ಅವನ ಎರಡು ಹಾಡುಗಳು ಅಲ್ಲಿ ಬರುತ್ತವೆ (ಶಿವದಾಸಗೀತಾಂಜಲಿ, ಡಾ. ಎಲ್. ಬಸವರಾಜು, ಪು. 7, 97-98, 304, 310). ಈತನ ಬಗ್ಗೆ ಬೆಳಕು ಚೆಲ್ಲುವ ಶಿಲಾಶಾಸನವೊಂದು ಪಂಡರಾಪುರಕ್ಕೆ ಸಮೀಪವಿರುವ ಪುಳುಜ, ಪುಳುಂಜ ಅಥವಾ ಪೂರ್ಣಾಜಾ ಎಂದು ಕರೆಯಲ್ಪಡುವ ಊರಿನ ಸಿದ್ದಸೋಮನಾಥ ದೇವಾಲಯದಲ್ಲಿ (ಈಗ ಅದರ ಹೆಸರು ಲಿಂಗೇಶ್ವರ ದೇವಾಲಯ ಎಂದಾಗಿದೆ) ದೊರೆತಿದೆ. ಇದರ ಕಾಲವನ್ನು ವಿದ್ವಾಂಸರು ಕ್ರಿ.ಶ. 1200 ಎಂದು ನಿರ್ಧರಿಸಿದ್ದಾರೆ. ಈ ಶಾಸನದಲ್ಲಿ ಅಮುಗಿದೇವನಿಗೆ ಸಿಂಘಣನೆಂಬ ರಾಜ ಸಿದ್ದಸೋಮನಾಥ ದೇವರ ಸೇವೆಗಾಗಿ 'ಇಢ್ಢೆ' ಎಂಬ ಗ್ರಾಮವನ್ನು ದಾನ ಮಾಡಿದ ಉಲ್ಲೇಖವಿದೆ. ದೇವಗಿರಿಯ ಯಾದವ ಕುಲದ ಜೈತುಗೀ (1191-1210) ಆಳಿದ ನಂತರ ಅವನ ಮಗ ಸಿಂಘಣ ರಾಜನಾಗಿ ಉತ್ತರ ಕರ್ನಾಟಕದ ಬಹುಭಾಗವನ್ನು ಆಕ್ರಮಿಸಿದ್ದ. ಇವನ ಆಳ್ವಿಕೆ ಕಾಲ ಕ್ರಿ.ಶ. 1210 ರಿಂದ 1247 ಎಂಬುದು ಕವಿಚರಿತೆಕಾರರ ಅಭಿಪ್ರಾಯ. ಪುಳುಜದ ಶಾಸನದ ಕಾಲ ಕ್ರಿ.ಶ. 1210. ಆದ್ದರಿಂದ

ಆ ಕಾಲಕ್ಕಾಗಲೇ ಅವನು ರಾಜನಾಗಿದ್ದುದು ಖಚಿತ. ಆದ್ದರಿಂದ ಕವಿಚರಿತೆಕಾರರ ಅಭಿಪ್ರಾಯ ಸಂದೇಹಾಸ್ಪದವಾಗಿದೆ. ಆದರೆ ತಂದೆಯಾದ ಚೈತುಗಿಯ ಕಾಲದಲ್ಲೇ ಅಂದರೆ ಸು. 1200ರ ಕಾಲದಲ್ಲೇ ಆತ ಯುವರಾಜನಾಗಿ ಶಾಸನಾದಿಗಳ ರಚನೆಗೆ ತೊಡಗಿರಬಹುದೆಂಬ ಅಭಿಪ್ರಾಯವೂ ಉಂಟು. ಅದೇನೇ ಆಗಿದ್ದರೂ ಅಮುಗಿದೇವಯ್ಯನು ಕಲ್ಯಾಣಕ್ರಾಂತಿಯ ನಂತರವೂ ಸುಮಾರು 35-40 ವರ್ಷಗಳಾದರೂ ಬಾಳಿರಬಹುದೆಂಬುದು ಸ್ಪಷ್ಟವಾಗುತ್ತದೆ.

ಹಲಗೆದೇವರ 'ಶೂನ್ಯಸಂಪಾದನೆ' ಮತ್ತು ಸಿದ್ಧನಂಜೇಶನ 'ರಾಘವಾಂಕ ಚರಿತೆ'ಯಲ್ಲಿ ಅಮುಗಿದೇವನನ್ನು ಕುರಿತು ಕಥೆಯೂ ಬರುತ್ತದೆ. ಈತನನ್ನು ಕುರಿತ ಎರಡು ಸ್ವತಂತ್ರ ಕಾವ್ಯಗಳೂ ದೊರೆತಿವೆ. ಅವುಗಳೆಂದರೆ, ಶಂಕರಲಿಂಗಕವಿಯ 'ಅಮುಗಿದೇವಯ್ಯಗಳ ರಗಳೆ' ಮತ್ತು ಶಿವಲಿಂಗಕವಿಯ 'ಅಮುಗಿದೇವಯ್ಯಗಳ ಸಾಂಗತ್ಯ' ಇವುಗಳಲ್ಲದೆ ತಾಯಿಬೇರಾದ ಜನಪದ ಸಾಹಿತ್ಯದಲ್ಲಿಯೂ 'ನೇಗಿಯ ಅಮುಗಯ್ಯ' ಎಂಬ ಹಂತಿಯ ಪದ ದೊರೆತಿದೆ (ಕನ್ನಡ ಜಾನಪದ ಗೀತೆಗಳು: ಡಾ. ಬಿ.ಎಸ್. ಗದ್ದಗೀಮಠ. ಪು. 296-307) ಅಮುಗಿದೇವನ ಹೆಂಡತಿಯ ಹೆಸರು (ರುದ್ರಾಣಿಯಮ್ಮ? ವರದಾನಿ? ದಾನವ್ವ? ರಾಯಮ್ಮ?), ಅಮುಗಿದೇವ ಸ್ವಯಿಚ್ಛೆಯಿಂದ ಹೆಂಡತಿಯೊಡನೆ ಸೊನ್ನಲಿಗೆಯನ್ನು ಬಿಟ್ಟುಹೋದನೋ? ಕೊಟ್ಟಣ ಕುಟ್ಟುವುದಕ್ಕೆ ಒಪ್ಪದೆ ಇದ್ದುದರಿಂದ ಸಿದ್ದರಾಮನೇ ಊರು ಬಿಟ್ಟು ಹೋಗುವಂತೆ ಹೇಳಿದನೊ? ಇಂತಹ ಒಂದೆರಡು ಬದಲಾವಣೆಗಳನ್ನು ಹೊರತುಪಡಿಸಿದರೆ ಈ ಎಲ್ಲಾ ಕಥೆಗಳ ಸಾರವನ್ನು ಹೀಗೆ ಸಂಗ್ರಹಿಸಬಹುದು: "ಅಮುಗಿದೇವ ಎಂಬ ಶಿವಭಕ್ತ ತನ್ನ ಹೆಂಡತಿಯೊಡನೆ ಸಿದ್ಧರಾಮನ ಆಳ್ವಿಕೆಯ ಸೊನ್ನಲಿಗೆಯಲ್ಲಿ ನೇಯ್ಗೆ ಕಾಯಕದ ಮೂಲಕ ದಾಸೋಹ ಮಾಡುತ್ತ ಇಷ್ಟಲಿಂಗಪೂಜೆಯಲ್ಲಿ ನಿರತನಾಗಿದ್ದ. ಹೀಗಿರುವಾಗ ಒಂದು ದಿನ ಸಿದ್ಧರಾಮನು ಕಪಿಲಸಿದ್ಧ ಮಲ್ಲಿಕಾರ್ಜುನದೇವರ ಆರಾಧನೆಗೆಂದು ಗ್ರಾಮದ ಪ್ರತಿಯೊಂದು ಮನೆಗೂ ಕೊಟ್ಟಣವನ್ನು ಹಾಕಿಸುತ್ತಿದ್ದ, ಅಮುಗಿದೇವಯ್ಯನ ಮನೆಗೂ ಕೊಟ್ಟಣವನ್ನು ಹಾಕಿದಾಗ ಆತ ತಾನು ಅಂಗದ ಮೇಲೆ ಲಿಂಗವಿಲ್ಲದ ಭವಿಯ ಸೇವೆ ಮಾಡುವುದಿಲ್ಲ ಎಂದು ಹೇಳಿ ಬಸವಾದಿ ಶರಣರಿದ್ದ ಕಲ್ಯಾಣದ ಕಡೆಗೆ ಹೊರಡುತ್ತಾನೆ. ಹೋಗುವಾಗ ಕಟ್ಟಿದ ಮೂರು ಗಂಟುಗಳಲ್ಲಿ ಒಂದನ್ನು ತಾನು ಹೊತ್ತು, ಮತ್ತೊಂದನ್ನು ತನ್ನ ಸತಿಗೆ ಹೊರಿಸಿ ಮಗದೊಂದನ್ನು ಶಿವನಿಂದಲೇ ಹೊರಿಸಿಕೊಂಡು ಹೋಗುತ್ತಾನೆ. ಇತ್ತ ಪರಮಶಿವಭಕ್ತನಾದ ಸಿದ್ಧರಾಮನು ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವನ್ನು ಅರ್ಚಿಸಲು ಲಿಂಗವು ಅರ್ಚಿಸಬೇಡ ತಡೆ, ನನ್ನ ನೆತ್ತಿ ನೋವುತ್ತಿದೆ ಎಂದಾಗ ಸಿದ್ಧರಾಮನು ಕಾರಣವನ್ನು ಕೇಳುತ್ತಾನೆ." ಇಲ್ಲಿಂದೀಚೆಗೆ ಕಥೆಯಲ್ಲಿ ಬದಲಾವಣೆಗಳಾಗುತ್ತವೆ. ಹಲಗೆದೇವರಲ್ಲಿ "ಶಿವನ ಮಾತಿನಿಂದ ಪರಿವರ್ತಿತನಾದ

ಸಿದ್ದರಾಮ ಅಮುಗಿದೇವಯ್ಯನಲ್ಲಿಗೆ ಬಂದು ಅವನ ಪಾದಗಳಿಗೆ ನಮಸ್ಕರಿಸಿ ತನ್ನೂರಿಗೆ ಬರುವಂತೆ ಕೇಳಿದಾಗ ಅಮುಗಿದೇವ ಒಪ್ಪದೆ ಮುಂದೆ ಅಲ್ಲಮಪ್ರಭು ಸೊನ್ನಲಿಗೆಗೆ ಬರುವ ಸೂಚನೆ ಕೊಟ್ಟು ಕಲ್ಯಾಣಕ್ಕೆ ಹೋಗಿ ಲಿಂಗಸಂಗಿಯಾಗೆಂದು ಹೇಳಿ ಕಳುಹಿಸುತ್ತಾನೆ." ಸಿದ್ದನಂಜೇಶನು "ಸಿದ್ದರಾಮ ಅಮುಗಿದೇವಯ್ಯನಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸಲಾಗಿ ಅದಕ್ಕೊಪ್ಪಿದ ಅಮುಗಿದೇವ ಅವನೊಡನೆ ಸೊನ್ನಲಿಗೆಗೆ ಹೋಗುತ್ತಾನೆ. ನಂತರ ಗಣಾರಾಧನೆ, ವಿವಾಹಗಳು ನಡೆಯುತ್ತವೆ" ಎನ್ನುತ್ತಾನೆ.

ಶಂಕರಲಿಂಗನಲ್ಲಿ ಈ ಪ್ರಸಂಗ ಬೇರೆ ರೀತಿಯಾಗಿದೆ "ಸಿದ್ಧರಾಮ ಬಂದು ಕರೆದರೂ ಬರಲೊಪ್ಪುವುದಿಲ್ಲ ಅಮುಗಿದೇವ. ಆಗ ಸಿದ್ದರಾಮ ಸೊನ್ನಲಿಗೆಗೆ ಬಂದು ಕಪಿಲಸಿದ್ದಮಲ್ಲಿಕಾರ್ಜುನನಲ್ಲಿ ಇಷ್ಟಲಿಂಗೋಪದೇಶವಿಲ್ಲದ ತನ್ನ ದುಃಖ ಹೇಳಿಕೊಳ್ಳಲಾಗಿ ಶಿವನು "ಜಂಗಮಾಕೃತಿಯಾಗಿ ನಾ ಕರುಣದಿಂ ಬಂದು ನಿನಗೆ ಸನ್ನಿಧಿಯಾಗಿ ಇಷ್ಟಲಿಂಗವಂ ಕೊಡುವೆ" ಎಂದು ಹೇಳಿ ಅಂತೆಯೇ ಬಂದು ಇಷ್ಟಲಿಂಗ ದೀಕ್ಷೆ ನೀಡಿದ ನಂತರ ಅಮುಗಿದೇವ ಸಂತೋಷದಿಂದ ಸಿದ್ದರಾಮನಲ್ಲಿಗೆ ಬಂದು ಅವನನ್ನು ಕೂಡಿಕೊಳ್ಳುತ್ತಾನೆ. ಶಿವನು ಸತಿ ಸಹಿತ ಗಣಗಳೊಡಗೂಡಿ ಬಂದು ಇದನ್ನು ನೋಡಿ ಹಿಗ್ಗುತ್ತಾನೆ." ಶಿವಲಿಂಗಕವಿಯಲ್ಲಿ ಇದು ಹೆಚ್ಚು ಯುಕ್ತವಾಗಿ ನಿರೂಪಿತವಾಗಿದೆ "ಶಿವನನ್ನು ಜೊತೆಯಲ್ಲಿ ಕರೆದುಕೊಂಡು ಸಿದ್ದರಾಮನು ಕಲ್ಯಾಣದಲ್ಲಿ ಅಮುಗಿದೇವನಿದ್ದ ಮಠಕ್ಕೆ ಬಂದು ಅವನಲ್ಲಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತಾನೆ. ನಂತರ ಬಸವಣ್ಣನವರಲ್ಲಿ 'ಈ ದಂಪತಿಗಳು ನನ್ನ ಊರಿನಿಂದ ನಿಮ್ಮ ಊರಿಗೆ ಬಂದಿದ್ದಾರೆ. ಇವರನ್ನು ನನಗೆ ಉಡುಗೊರೆಯಾಗಿ ಬಿಟ್ಟುಕೊಡಬೇಕು' ಎಂದು ವಿನಂತಿಸಿಕೊಳ್ಳುತ್ತಾನೆ. ಈ ಕೋರಿಕೆಗೆ ಶಿವನ ಮುನ್ಸೂಚನೆ(ಸಂಚು!)ಯಂತೆ ಬಸವಣ್ಣ ಅಡ್ಡ ಬಂದು ತನ್ನಲ್ಲಿಗೆ ಬಂದ ಶರಣರನ್ನು ಕಳುಹಿಸಲಾಗುವುದಿಲ್ಲ ಎನ್ನುತ್ತಾನೆ. ಆಗ ಶಿವನೇ ಪ್ರತ್ಯಕ್ಷನಾಗುತ್ತಾನೆ. ಆಗ ಅಮುಗಿದೇವ ಮತ್ತವನ ಹೆಂಡತಿ ಶಿವನಲ್ಲಿ ಲೀನವಾಗುತ್ತಾರೆ."

ಜನಪದ ಕಥೆಯು ಇವೆಲ್ಲವುಗಳಿಗಿಂತ ಇತಿಹಾಸಕ್ಕೆ ಹೆಚ್ಚು ಹತ್ತಿರವಾಗಿದೆ. "ಹೊರೆ ಹೊತ್ತ ಅಮುಗಿದೇವ ಸತಿಯೊಡನೆ ಕಲ್ಯಾಣಕ್ಕೆ ಹೋಗುವಾಗ ಶಿವಪುರವೆಂಬ ಊರಿಗೆ ಬರುವ ವೇಳೆಗೆ ಮೂರನೇ ಹೊರೆಯನ್ನು ಶಿವ ಆಗಲೇ ಅಲ್ಲಿಗೆ ತಂದು ಇಟ್ಟಿದ್ದುದರಿಂದ ಶಿವಸಂಕಲ್ಪವೆಂದು ಅವರು ಅಲ್ಲೇ ಉಳಿದಿರುತ್ತಾರೆ. ಆಗ ಅಲ್ಲಿಗೆ ಸಿದ್ದರಾಮ ಬಂದು ಪ್ರಾರ್ಥಿಸಲಾಗಿ ಅಮುಗಿದೇವ ಹಿಂದಿರುಗಲು ಒಪ್ಪುವುದಿಲ್ಲ. ಆದರೆ ಶಿವನಿಂದ ಅವನಿಗೆ ಲಿಂಗದೀಕ್ಷೆ ಲಭಿಸುವಂತೆ ಮಾಡಿ ಸತಿಯೊಡನೆ ಕಲ್ಯಾಣಕ್ಕೆ ಹೋಗುತ್ತಾನೆ. ಅಲ್ಲಿ ಕೆಲಕಾಲ ಇದ್ದಾಗ ಕಲ್ಯಾಣಕ್ರಾಂತಿ ನಡೆದು ಶಿವಶರಣರೆಲ್ಲ ಚದುರಿಹೋಗಲು ತನ್ನ

ಇಷ್ಟದೈವವಾದ ಸಿದ್ಧಸೋಮನಾಥನನ್ನು ನೆನೆದು ಅವನ ಸನ್ನಿಧಿಯಲ್ಲೇ ಇರಲು ಬಯಸಿ ಹೂಳಚೆಯನ್ನು ಸೇರುತ್ತಾನೆ. ಅಲ್ಲಿ ಶಿವಕೂಟ ಸೇರಿಸಿ ಶಿವಗೋಷ್ಠಿಗಳನ್ನು ನಡೆಸುತ್ತಾನೆ. ಅವನ ಕೀರ್ತಿ ಯಾದವ ರಾಜನಾದ ಸಿಂಘಣನಿಗೆ ತಲುಪಿ ಆತ ಅಮುಗಿದೇವನಲ್ಲಿಗೆ ಬಂದು ಅವನ ದರ್ಶನಾಶೀರ್ವಾದಗಳನ್ನು ಪಡೆದು ಅವನಿಗೆ 'ಇಥ್ಥೆ' ಎಂಬ ಗ್ರಾಮವನ್ನು ದಾನವಾಗಿ ಕೊಡುತ್ತಾನೆ. ಹೀಗೆ ಅಮುಗಿದೇವ ರಾಜಪೂಜಿತನಾಗಿ ಜನಕೋಟಿಯ ಸೇವೆ ಮಾಡುತ್ತ ಲಿಂಗದಲ್ಲಿ ಬಯಲಾಗುತ್ತಾನೆ. ಹೂಳಚೆಯ ಶಾಸನವೂ ಈ ಕತೆಯನ್ನು ಸಮರ್ಥಿಸುತ್ತದೆ ಮತ್ತು ಅಮುಗಿದೇವನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಶಾಸನದ ಕಥೆಯನ್ನೇ ಅಕ್ಷರಸ್ಥನೊಬ್ಬ ವಾಕ್‌ರಚನಾ ಕೌಶಲ್ಯದಿಂದ ಜನಪದ ಕತೆಯಾಗಿ ಮಾರ್ಪಡಿಸಿರಬಹುದಾದ ಸಾಧ್ಯತೆಯನ್ನೂ ನಾವು ಇಲ್ಲಿ ಅಲ್ಲಗಳೆಯುವಂತಿಲ್ಲ.

ಹೀಗೆ ಕಾವ್ಯ, ಶಾಸನ ಮತ್ತು ಜನಪದ ಕಥೆ ಇವೆಲ್ಲವುಗಳಲ್ಲಿ ದೊರೆತಿರುವ ಅಮುಗಿದೇವನ ಚಿತ್ರಣದಲ್ಲಿ ಪ್ರಮುಖವಾಗಿ ಕಂಡುಬರುವ ಒಂದು ಅಂಶವೆಂದರೆ ಅವನ ಇಷ್ಟಲಿಂಗ ನಿಷ್ಠೆ. ಆ ನಿಷ್ಠೆ ಎಷ್ಟು ಗಟ್ಟಿಯಾದುದೆಂದರೆ ಮಡಿವಾಳ ಮಾಚಯ್ಯನು ಭವಿಗಳಾದವರ ಬಟ್ಟೆಯನ್ನು ತಾನು ಒಗೆಯುವುದಿಲ್ಲವೆಂದು ಹೇಳಿದಾಗ ಕೋಪದಿಂದ ಬಿಜ್ಜಳ ಅವನಿಂದ ಬಟ್ಟೆ ಒಗೆಸಲು ಮುಂದಾಗುತ್ತಾನೆ, ಆಗ ಮಾಚಯ್ಯನು ಬಿಜ್ಜಳನ ಸೈನ್ಯವನ್ನೆಲ್ಲಾ ನಾಶಮಾಡಿದ ಹಾಗೆ ಅಮುಗಿದೇವ ಖಂಡತುಂಡವಾಗಿ

ಗುರುಲಿಂಗಜಂಗಮ ಪರಮ ಸದ್ಭಕ್ತರ
ವರಪಾದ ಸೇವೆಗಿನ್ನಲಸೆ
ದೊರೆಗಳ ನರರ ಸ್ಥಾವರ ಲಿಂಗಸೇವೆಗೆ
ಶರೀರವ ಬಳಲಿಸಲಾರೆ

(ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ
ನಾಲ್ಕನೇ ಸಂಧಿ, ಪದ್ಯ 69)

ಎಂದು ಹೇಳುತ್ತಾನೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಬಸವ ತತ್ವದಲ್ಲಿ ಆತನಿಗೆ ಅಚಲವಾದ ವಿಶ್ವಾಸ. ಆದುದರಿಂದಲೇ ಸಿದ್ಧರಾಮನದು ಸೇವಾಕಾರ್ಯವಾದರೂ ತಾನದರಲ್ಲಿ ಭಾಗಿಯಾಗಲೊಲ್ಲದೆ, ಪರಿಣಾಮವ ಲೆಕ್ಕಿಸದೆ ದಿಟ್ಟತನದಿಂದ ನಿರಾಕರಿಸಿಬಿಟ್ಟ. ಅದೂ ಸಾಲದೆಂಬಂತೆ ಸಿದ್ಧರಾಮನೇ ಪಶ್ಚಾತ್ತಾಪದಿಂದ ತಾನಿರುವಲ್ಲಿಗೆ ಬಂದು ತನ್ನೊಡನೆ ಹಿಂದಿರುಗುವಂತೆ ಬೇಡಿದರೂ ನಿನಗೆ ಇಷ್ಟಲಿಂಗಧಾರಣೆಯಾಗದ ಹೊರತು ನಾನು ನಿನ್ನೊಡನೆ ಬರುವುದು ಸಾಧ್ಯವಿಲ್ಲವೆಂದು ಹೇಳಿಬಿಡುತ್ತಾನೆ. ಇದು ಅವನ 'ವೀರ'ಶೈವ ನಿಷ್ಠೆ. ಇದನ್ನು ಕುರಿತು ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಹೀಗೆ ಹೇಳುತ್ತಾರೆ. "ಅಮುಗಿದೇವಯ್ಯನನ್ನು ಕುರಿತ ಕಥೆಗಳನ್ನು ನೋಡಿದರೆ ಒಂದಂಶ ಸ್ಪಷ್ಟವಾಗುತ್ತದೆ. ಇಷ್ಟಲಿಂಗ ನಿಷ್ಠೆಯ ಏಕೈಕ ಸಂಕೇತವಾಗಿ

ಅಮುಗಿದೇವ ಕಂಗೊಳಿಸುತ್ತಾನೆ. ಬಹಿರಂಗಪೂಜಾತತ್ಪರನಾದ ಸಿದ್ಧರಾಮನನ್ನು ಎಚ್ಚರಗೊಳಿಸಿ ಅಂತರ್ಮುಖನನ್ನಾಗಿ ಮಾಡಿದುದು ಈ ಕಥೆಯಿಂದ ಧ್ವನಿತವಾಗುವ ತತ್ತ್ವ. ಸಾಕ್ಷಾತ್ ಶಿವನೇ ಹೊರೆಯನ್ನು ಹೊತ್ತನೆಂಬುದು ಅರ್ಥಗರ್ಭಿತವಾದ ಪ್ರತೀಕ. ಅಕ್ಷರಷಃ ಅದರ ಅರ್ಥವನ್ನು ತೆಗೆದುಕೊಳ್ಳದೆ ಅದು ಧ್ವನಿಸುವ ದರ್ಶನವನ್ನು ಗಮನಿಸಿದಾಗ ಈ ಕಥಾಪ್ರತಿಮೆ ಶಕ್ತಿಸಮನ್ವಿತವಾಗುತ್ತದೆ. ತಮ್ಮ ನಮ್ರ ಕಾಯಕದಲ್ಲಿ ಮಗ್ನರಾಗಿ ಅಂತರಂಗ ಪೂಜೆಯನ್ನು ಕೈಗೊಳ್ಳುವ ನಿಸ್ಪೃಹ ಸಂಸಾರಿಗಳ ಸಾಧನೆಯ ಶಕ್ತಿ. ಜನಮೆಚ್ಚುಗೆಯ ಆಡಂಬರದಲ್ಲಿ ಮೈಮರೆತ ಮಹಾಸಾಧಕನ ಯೌಗಿಕ ಶಕ್ತಿಗಿಂತಲೂ ಮಿಗಿಲಾದುದೆಂಬುದನ್ನು ಅಮುಗಿದೇವಯ್ಯನ ಕಥೆ ಸಾರಿ ಹೇಳುತ್ತದೆ" (ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ, ಪೀಠಿಕೆ-xxiv) ಎಂಬ ಮಾತುಗಳು ಅವನ ಇಷ್ಟಲಿಂಗನಿಷ್ಠೆಯ ಔನ್ನತ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸಿದ್ಧರಾಮನ ದೀಕ್ಷೆಗೆ ಕಾರಣವಾದ ಸನ್ನಿವೇಶಗಳಲ್ಲಿ ಅಮುಗಿದೇವನ ಪ್ರಭಾವವೂ ಇದ್ದಿತೆಂಬುದು. ಚೆನ್ನಂಜೇದೇವರ ಮಿಶ್ರಸ್ತೋತ್ರ ವಚನವೊಂದರಲ್ಲಿ ಸಿದ್ಧರಾಮ ಹೇಳಿಕೊಂಡಿರುವ "ಅಯ್ಯಾ ನಿಮ್ಮ ಕೃಪೆಯಿಂದ ನಿಷ್ಠಾ ಮಹೇಶ್ವರನೆನಿಪ ಅಮುಗಿದೇವಯ್ಯಗಳಿಂದ ಪ್ರಭುದೇವರೆಂಬ ಅನಾದಿ ಜಂಗಮವ ಕಂಡೆನಯ್ಯ.... ಚೆನ್ನಬಸವಣ್ಣನ ಕರುಣಮಂ ಪಡೆದು ನಿಮ್ಮನಂಗದ ಮೇಲೆ ಸಾಹಿತ್ಯದ ಮಾಡಿಕೊಂಡೆನಯ್ಯಾ" ಎಂಬ ಮಾತು ಐತಿಹಾಸಿಕ ಸತ್ಯವೊಂದನ್ನು ಸ್ಪಷ್ಟೀಕರಿಸುತ್ತದೆ.

ಅಮುಗಿದೇವಯ್ಯನ ಲಭ್ಯ ವಚನಗಳ ಸಂಖ್ಯೆ ಮೂವತ್ತು, ಅವುಗಳಲ್ಲಿಯೂ ಸಹ ಅವನ ಇಷ್ಟಲಿಂಗನಿಷ್ಠೆ ಎದ್ದು ಕಾಣುತ್ತದೆ. ಸ್ವೇಚ್ಛಾಗಮನಿಯಾದರೂ, ತನು ಬಯಲಾದರೂ, ಅಷ್ಟಮಹಾಸಿದ್ಧಿಗಳನ್ನು ಗಳಿಸಿಕೊಂಡಿದ್ದರೂ, ಹಲವು ಮಹಿಮೆಗಳ ತೋರಿ ಮೆರೆದರೂ, ಅಷ್ಟೇ ಏಕೆ ಚತುರ್ವಿಧಪದವ ಪಡೆದು ಕೈಲಾಸದಲ್ಲಿದ್ದರೂ ಆತ ಭಕ್ತನೆನಿಸಿಕೊಳ್ಳುವುದಿಲ್ಲ. ಆತ ಭಕ್ತನಾಗಬೇಕಾದರೆ ಅಂಗತ್ರಯದಲ್ಲಿ ಲಿಂಗತ್ರಯ ಸಮವೇದಿಯಾಗಬೇಕು. ಆಗ ಮಾತ್ರ ಆತನನ್ನು ಭಕ್ತನೆಂದು ಕರೆಯಬಹುದೆಂಬ ನಿಲುವು ಅವನದು. "ಗುರು ಕಾರುಣ್ಯದಿಂದ ಲಿಂಗದೊಳವಗ್ರಾಹಕನಾಗದೆ ಲಿಂಗತ್ರಯ ವಿಚಾರವಿಲ್ಲದವನಿಗೆ ಭಕ್ತಿ, ಪ್ರಸಾದ, ಮೋಕ್ಷ ಇದಾವುದೂ ಇಲ್ಲ. ಲಿಂಗವು ತನ್ನನ್ನು ಅವಗ್ರಹಿಸಿದ ಬಳಿಕ ಅಂಗವಿಕಾರವೆಂಬುದು ಇಲ್ಲದ್ದರಿಂದ ಲಿಂಗಾಂಗ ಸಂಬಂಧಿಗಳು ಅಪೂರ್ವರು" ಎಂಬ ಮನೋಧೋರಣೆ ಅವನ ವಚನಗಳಲ್ಲಿ ವ್ಯಕ್ತವಾಗಿದೆ. ಅಂಗದ ಮೇಲೆ ಲಿಂಗವಿಲ್ಲದವರನ್ನು ಎಷ್ಟರಮಟ್ಟಿಗೆ ತಿರಸ್ಕರಿಸುತ್ತಾನೆಂದರೆ ಸಾಕ್ಷಾತ್ ಶಿವನೇ ಲಿಂಗ ಧರಿಸದೇ ಬಂದರು ಅವನೂ ಹೊರಗು

ಜಟಾಜೂಟ ಮಕುಟಕೋಟಿಗಳಾದಡೇನು?
ನೊಸಲ ಕಣ್ಣು ಚತುರ್ಭುಜದವರಾದಡೇನು?
ಅಂಗದ ಮೇಲೆ ಲಿಂಗವಿಲ್ಲದವರ ಕಂಡಡೆ
ಬರುಕಾಯರೆಂಬೆನು, ಬರುಮುಖರೆಂಬೆನು
ಸಿದ್ದಸೋಮನಾಥ ಲಿಂಗವಾದಡೆಯೂ ನಮಗೇನು?
ಕೊಂದಡೆ ಕೊಲಲಿ, ಇಂತೆಂಬುದ ಮಾಣೆನಯ್ಯಾ.

(ಸಂಕೀರ್ಣ ವಚನ ಸಂಪುಟ 1, ಪುಟ 111)

ಇಷ್ಟಲಿಂಗವಿಲ್ಲದಿದ್ದವರ ದೇಹ ಚೈತನ್ಯಸ್ವರೂಪಿಯಾದ ಜೀವವಿಲ್ಲದ ಬರಿಯ ದೇಹ. ಅದಕ್ಕೆ ಚೈತನ್ಯ ಮೂಡಬೇಕಾದರೆ ಅದು ಲಿಂಗವನ್ನು ಧರಿಸಬೇಕು; ಆಗ ಮಾತ್ರ ಅದು ಜೀವಸ್ವರೂಪಿ, ಅಲ್ಲದಿದ್ದಡೆ ಅದು ಜಡ. ಕೊನೆಗೆ ಆತ ಹೇಳುವ 'ಸಿದ್ದಸೋಮನಾಥ ಲಿಂಗವಾದಡೆಯೂ ನಮಗೇನು? ಕೊಂದಡೆ ಕೊಲಲಿ, ಇಂತೆಂಬುದು ಮಾಣೆನಯ್ಯಾ' ಎಂಬ ಮಾತು ಅವನ ಸ್ಥಾವರ ವಿರೋಧಿ ನಿಲುವಿನೊಂದಿಗೆ ಇಷ್ಟಲಿಂಗ ನಿಷ್ಠೆಯನ್ನು ವ್ಯಕ್ತಪಡಿಸುತ್ತದೆ. ಈ ನಿಷ್ಠೆಯಿಂದಲೇ ಹಾಲುಮತ (ಕುರುಬ)ದವರ ಮೇಲೆ ವಿಶೇಷ ಪ್ರಭಾವ ಬೀರಿ ಅವರನ್ನು ಲಿಂಗವಂತರನ್ನಾಗಿ ಮಾಡಿದ ಸಿದ್ದ ಅಮುಗಿದೇವ.

**ಪರಾಮರ್ಶನ ಸಾಹಿತ್ಯ**


1. ಕರ್ನಾಟಕ ಕವಿಚರಿತೆ - ಪ್ರಥಮ ಸಂಪುಟ: ನರಸಿಂಹಾಚಾರ್ಯ ಆರ್. ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 1961.
2. ಕನ್ನಡ ಜಾನಪದ ಗೀತೆಗಳು: ಗದ್ದಗಿಮಠ ಬಿ.ಎಸ್. ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ ವಿ.ವಿ. ಧಾರವಾಡ, 1963.
3. ಕನ್ನಡ ವಿಶ್ವಕೋಶ ಸಂಪುಟ 1: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.,1969.
4. ಶಾಸನಗಳಲ್ಲಿ ಶಿವಶರಣರು: ಕಲಬುರ್ಗಿ ಎಂ.ಎಂ. ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ಡಂಬಳ-ಗದಗ, 1978.
5. ಶಿವದಾಸ ಗೀತಾಂಜಲಿ: ಎಲ್. ಬಸವರಾಜು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 1963.
6. ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ: ಸಂ. ಎಚ್. ತಿಪ್ಪೇರುದ್ರಸ್ವಾಮಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 1965.
7. ಶ್ರೀ ಚಿಕ್ಕನಂಜೇಶ ವಿರಚಿತ ರಾಘವಾಂಕ ಚರಿತೆ: ಸಂ. ಮಾಳವಾಡ. ಸ.ಸ. ಶ್ರೀ ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮುರುಘಾ ಮಠ, ಹಾವೇರಿ ಪೇಟೆ, ಧಾರವಾಡ, 1954.
8. ಸಂಕೀರ್ಣ ವಚನ ಸಂಪುಟ 1: ಕಲಬುರ್ಗಿ ಎಂ.ಎಂ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2001.


□

# ಅಲ್ಲಮನೆಂಬ ಜ್ಞಾನಜಂಗಮ

**ಪ್ರೊ. ಸಿ.ಪಿ. ಸಿದ್ಧಾಶ್ರಮ**

(ಹಿಂದಿನ ಸಂಚಿಕೆಯ ಮುಂದುವರಿದ ಭಾಗ)

## ಅಲ್ಲಮನ ದೃಷ್ಟಿಯಲ್ಲಿ ದೇವರು

ಅಲ್ಲಮನ ದೇವರ ಕಲ್ಪನೆ ವಿಶಿಷ್ಟವಾಗಿದೆ ಮತ್ತು ಭಿನ್ನವಾಗಿದೆ. ಅಲ್ಲಮ ಗುಡಿಗುಂಡಾರಗಳನ್ನು ನಿರ್ಮಿಸಿ ಅಲ್ಲಿ ಕಲ್ಲುಮಣ್ಣಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರೆ ಆ ಜಡಮೂರ್ತಿಗಳು ದೇವರಲ್ಲವೆಂದು ಹೇಳುತ್ತಾನೆ. ಮಾನವನ ಶರೀರವೇ ದೇಗುಲ ವಾಗಿದ್ದು, ಈ ದೇಹವೆಂಬ ದೇಗುಲದಲ್ಲಿ ದೇವರನ್ನು ಕಾಣಬೇಕೆಂದು ಸೂಚಿಸುತ್ತಾನೆ. ಅಷ್ಟಾಂಗಯೋಗ ಮತ್ತು ಶಿವಯೋಗದ ಮೂಲಕ ಷಟ್‌ಚಕ್ರಗಳ ನೆಲೆಯಲ್ಲಿ ಸಾಧನೆ ಮಾಡಿ ಪ್ರಣವನಿನಾದದ ಆನಂದಸಾಗರದಲ್ಲಿ ಜೀವಾತ್ಮನು ತನ್ನ ಜೀವಭಾವ ಕಳೆದುಕೊಂಡು ದೇವನಲ್ಲಿ ಲೀನವಾಗುವ ಪ್ರಕ್ರಿಯೆಯ ಮೂಲಕ ಜೀವ ಶಿವನಾಗಬೇಕೆಂಬುದು ಆತನ ಅರಿವು ಮತ್ತು ಅಭಿಪ್ರಾಯ. ನಾವೆಲ್ಲ ತಿಳಿದಂತೆ ಈ ಮನುಷ್ಯನನ್ನು ಮತ್ತು ಪ್ರಪಂಚ ವನ್ನು ಹೊರತಾದ ದೇವರಿಲ್ಲ. ಪ್ರಪಂಚದ ಎಲ್ಲ ಚರಾಚರವಸ್ತುಗಳಲ್ಲಿ ದೈವದ ಅಂಶವಿದೆ. ಅರಿವಿನ ಕುರುಹು ಆದ ಮಾನವ ಇದನ್ನರಿತು ತನ್ನ ಹೊರಗಡೆಗೆ ದೈವವನ್ನು ಕಾಣುವ ವ್ಯರ್ಥ ಪ್ರಯತ್ನ ಮಾಡದೆ, ತನ್ನಂತರಂಗದಲ್ಲಿರುವ ದೈವವನ್ನು ಯೋಗಶಕ್ತಿಯ ಮೂಲಕ ಧ್ಯಾನದ ಮೂಲಕ ಅರಿತುಕೊಳ್ಳಬೇಕೆಂದು ತಿಳಿಹೇಳುತ್ತಿದ್ದಾನೆ ನಮ್ಮ ಅಲ್ಲಮ.

ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲುಕುಟುಕಂಗೆ ಹುಟ್ಟಿದ ಮೂರುತಿ  
ಮಂತ್ರಕ್ಕೆ ಲಿಂಗವಾಯಿತ್ತಲ್ಲಾ!  
ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು  
ಕೈವಿಡಿವ ಅಚ್ಚವ್ರತಗೇಡಿಗಳನೇನೆಂಬೆ ಗುಹೇಶ್ವರ

ಕಲ್ಲುದೇವರೆಂದು ಪೂಜಿಸುವರು  
ಆಗದು ಕಾಣಿರೋ! ಆಗಡಿಗರಾದಿರಲ್ಲಾ

---

**ಪ್ರೊ. ಸಿ.ಪಿ. ಸಿದ್ಧಾಶ್ರಮ,** ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, # 249, ಕಾವ್ಯಕುಟೀರ, 20ನೇ ಮುಖ್ಯ ರಸ್ತೆ, 3ನೇ ಹಂತ, ಬಿ ಬ್ಲಾಕ್, ವಿಜಯನಗರ, ಮೈಸೂರು - 20

ಮುಂದೆ ಹುಟ್ಟುವ ಕೂಸಿಂಗೆ
ಇಂದು ಮೊಲೆಯ ಕೊಡುವಂತೆ ಗುಹೇಶ್ವರ

ಶಿಲೆ ಹುಟ್ಟುವುದು ಭೂಮಿಯಲ್ಲಿ, ಆ ಕಲ್ಲು ಮೂರ್ತಿಯಾಗಿ ರೂಪತಳೆಯುವುದು ಕಲ್ಲುಕೆಲಸದಲ್ಲಿ ಪರಿಣಿತನಾದ ಶಿಲ್ಪಿಯಿಂದ. ಆ ಕಲ್ಲುಮೂರ್ತಿ ಲಿಂಗ ಅಥವಾ ದೇವರಾಗುವುದು ಮಂತ್ರಸಂಸ್ಕಾರದ ಬಲದಿಂದ. ಈ ರೀತಿಯಾಗಿ ಈ ಮೂವರಿಂದ ಹುಟ್ಟಿದ ಅಂದರೆ ಮೂರ್ತರೂಪ ತಾಳಿದ ಲಿಂಗವನ್ನು ಕೇವಲ ಯಾಂತ್ರಿಕವಾಗಿ ಪೂಜಿಸುವ ವ್ಯಕ್ತಿ ದೈವವನ್ನು ಪಡೆಯುವುದು ಅಸಾಧ್ಯದ ಮಾತು. ಇಂಥವರನ್ನು ಅಲ್ಲಮ ವ್ರತಗೇಡಿಗಳೆಂದು ಕರೆದು ಗೇಲಿ ಮಾಡುತ್ತಿದ್ದಾನೆ. ಇಲ್ಲಿ ಅಲ್ಲಮ ಮೂರ್ತಿಪೂಜೆಯ ನಿರಾಕರಣೆ ಮಾಡಿರುವುದನ್ನು ಕಾಣಬಹುದಾಗಿದೆ. ಇನ್ನು ಎರಡನೆಯ ವಚನದಲ್ಲಿ ಮೂರ್ತಿಪೂಜೆಯನ್ನು ಅಲ್ಲಮ ಸ್ಪಷ್ಟವಾಗಿ ನಿರಾಕರಣೆ ಮಾಡಿರುವುದು ಗೋಚರಿಸುತ್ತದೆ. ಕಲ್ಲನ್ನು ಮಾನವರು ದೇವರೆಂದು ಪೂಜಿಸುವರು. ಆದರೆ ಅದು ದೈವವನ್ನು ಪಡೆಯುವ ಸರಿಯಾದ ಮಾರ್ಗವಲ್ಲ. ದೈವದ ಸ್ವರೂಪವನ್ನು ಸರಿಯಾಗಿ ತಿಳಿಯದೆ ಹೀಗೆ ಕಲ್ಲನ್ನು ಪೂಜಿಸುವ ಮೂಲಕ ಮೂಢಜನರು ಆಗಡಿಗರಾಗುತ್ತಿದ್ದಾರೆ, ಅಂದರೆ ಹಾಳಾಗುತ್ತಿದ್ದಾರೆ; ದಾರಿತಪ್ಪಿದವರಾಗುತ್ತಿದ್ದಾರೆ. ಅದು ಹೇಗೆಂದರೆ ಭವಿಷ್ಯದಲ್ಲಿ ಹುಟ್ಟಬಹುದಾದ ಕೂಸಿಗೆ ಇಂದು ಹಾಲು ಕುಡಿಸುವ ಪ್ರಯತ್ನ ಎಷ್ಟು ಅರ್ಥಹೀನವೂ ಮೂರ್ಖತನದ್ದೂ ಆಗಿರುತ್ತದೆಯೋ ಹಾಗೆಯೇ ಕಲ್ಲುಮೂರ್ತಿಯನ್ನು ದೇವರೆಂದು ಬಗೆದು ಪೂಜಿಸುವ ವಿಧಾನವೂ ಕೂಡ ಅರ್ಥಹೀನವೆಂದು ಅಲ್ಲಮ ಹೇಳುವಲ್ಲಿ ಆತ ಕಲ್ಲು, ಮಣ್ಣು, ಮರ, ಲೋಹದ ಮೂರ್ತಿಪೂಜೆಯನ್ನು ಅಂದರೆ ಸಾಕಾರದೈವದ ಪೂಜೆಯನ್ನು ನಿರಾಕರಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದಡೆ, ದೇವರೆತ್ತ ಹೋದರೊ ?
ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ - ಗುಹೇಶ್ವರಾ

ಕಲ್ಲಿನಿಂದ ಕಟ್ಟಿದ ದೇವಾಲಯದಲ್ಲಿ ಕಲ್ಲಿನ ಮೂರ್ತಿಯನ್ನು ದೇವರೆಂದು ಪ್ರತಿಷ್ಠಾಪಿಸಿದರೆ ಆ ದೇವರು ಅಲ್ಲಿರದೆ ಬೇರೆ ಕಡೆಗೆ ನಡೆದುಬಿಡುತ್ತಾನೆ. ಯಾಕಂದರೆ ದೇವರು ಕಲ್ಲುದೇವಾಲಯದ ಕಲ್ಲುಮೂರ್ತಿಯಲ್ಲಿರದೆ ಅಮೂರ್ತತೆಯಲ್ಲಿ ಜಗದ್ಭರಿತನಾಗಿರುವಂಥವನು. ಆದುದರಿಂದ ಕಲ್ಲಿನ ಮೂರ್ತಿಯ ಕಟೆದು ದೇವರೆಂದು ಕಲ್ಲುದೇವಾಲಯದಲ್ಲಿ ಪ್ರತಿಷ್ಠಾಪಿಸಿದವರಿಗೆ ನಾಯಕನರಕ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಕೆ ನೀಡುತ್ತಿರುವನು ಅಲ್ಲಮ. ಈ ವಚನದಲ್ಲೂ ಮೇಲಿನ ವಚನಗಳ ಆಶಯವೇ ಬಿಂಬಿತವಾಗಿದ್ದು, ಅಲ್ಲಮ ಮೂರ್ತಿಪೂಜೆಯ ನಿರಾಕರಣೆ ಮಾಡುತ್ತಿರುವುದು ಕಂಡುಬರುತ್ತದೆ.

ಮರ್ತ್ಯಲೋಕದ ಮಾನವರು; ದೇಗುಲದೊಳಗೊಂದು
ದೇವರ ಮಾಡಿದಡೆ, ಆನು ಬೆರಗಾದೆನು.
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ,
ಭೋಗವ ಮಾಡುವರ ಕಂಡು ನಾನು ಬೆರಗಾದೆನು.
ಗುಹೇಶ್ವರಾ, ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು.

ನಶ್ವರವಾದ ಈ ಭೂಲೋಕದ ಮಾನವರು ಜಡವಾದ ದೇಗುಲವನ್ನು ಕಟ್ಟಿ ಅದರಲ್ಲಿ ಕಲ್ಲು, ಮಣ್ಣು, ಮರ, ಲೋಹದ ಮೂರ್ತಿ ಮಾಡಿ ದೇವರೆಂದು ಪ್ರತಿಷ್ಠಾಪಿಸುತ್ತಾರೆ. ಪ್ರತಿದಿನವೂ ಅರ್ಚನೆ ಪೂಜೆ ಆರಾಧನೆ ಮಾಡಿಸಿ ಮತ್ತೆ ಭೋಗಜೀವನದಲ್ಲೇ ಮೈಮರೆಯುತ್ತಾರೆ. ಎಷ್ಟೋ ಜನರು ತಮಗೆ ಸಕಲೈಶ್ವರ್ಯಗಳು, ಸಿರಿಸಂಪತ್ತು ಪ್ರಾಪ್ತವಾಗಲೆಂದೇ ದೇವರ ಪೂಜೆ ಆರಾಧನೆ ಮಾಡುತ್ತಾರೆ. ತಮಗೆ ದೈವ ಬೇಕು, ದೇವರನ್ನು ಹೊಂದಬೇಕೆಂಬ ಭಾವ ಇರುವ ಶರಣರು ಬಹು ಕಡಿಮೆ. ಆದುದರಿಂದಲೇ ಜನರ ಈ ಬಗೆಯ ಲೌಕಿಕನೆಲೆಯ ಆಶೆ-ಆಮಿಷದ ಪೂಜೆ ಪ್ರಾರ್ಥನೆ ಕಂಡು ಅಲ್ಲಮನಿಗೆ ಅಚ್ಚರಿಯಾಗುತ್ತದೆ. ಆದರೆ ನೈಜಶರಣ ಮಾತ್ರ ದೇವರನ್ನು ಅರಸಿ ಹೋಗುತ್ತಾನೆ. ಆತನ ಭಕ್ತಿಮಾರ್ಗ ಆದರ್ಶಪ್ರಾಯ.

ಎನಗೊಂದು ಲಿಂಗ ನಿನಗೊಂದು ಲಿಂಗ
ಮನೆಗೊಂದು ಲಿಂಗವಾಯಿತ್ತು.
ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ.
ಉಳಿ ಮುಟ್ಟದ ಲಿಂಗವ ಮನ ಮುಟ್ಟಬಲ್ಲದೆ ಗುಹೇಶ್ವರಾ.

ತನಗೆ ಇನ್ನೊಬ್ಬರಿಗೆ ಮನೆಮನೆಗೆ ಲಿಂಗ ಬೇರೆ ಬೇರೆ ಎಂಬ ಭೇದಭಾವದಿಂದ ಜನರು ಲಿಂಗವನ್ನು ಪೂಜಿಸುತ್ತಾರೆ; ಭಕ್ತಿ ಮಾಡುತ್ತಾರೆ. ಇಂಥ ಭೇದಭಾವದಿಂದ ಕೂಡಿದ ಶಿವಭಕ್ತಿ ನೀರಲ್ಲಿ ಮುಳುಗಿಹೋದ ಲಿಂಗದಂತೆ ವ್ಯರ್ಥ. ಆದರೆ ಲಿಂಗದ ನಿಜಸ್ವರೂಪ ಅತ್ಯಂತ ಸೂಕ್ಷ್ಮ. ಭಕ್ತನ ಮನಸ್ಸು ಲಿಂಗದ ಸೂಕ್ಷ್ಮಸ್ವರೂಪವನ್ನು ಅಷ್ಟು ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ. ಶಿಲ್ಪಿ ತನ್ನ ಉಳಿಯಿಂದ ಮಾಡಿದ ಸ್ಥೂಲಲಿಂಗಗಳೇ ನಿಜಲಿಂಗಗಳೆಂದು ತಿಳಿವ ಭಕ್ತರು ಲಿಂಗದಲ್ಲಿ ಭೇದಭಾವ ಮಾಡುತ್ತಾರೆ. ಆದರೆ ನೈಜಲಿಂಗವು ಅಖಂಡತೆಯ ಪರಿಪೂರ್ಣತೆಯ ಸಂಕೇತ. ಇದನ್ನು ಅರಿಯುವುದು ಬಹಳ ಮುಖ್ಯವೆಂದು ತಿಳಿಹೇಳುತ್ತಿದ್ದಾನೆ, ಅಲ್ಲಮ.

ರೂಪ(ನೆ) ಕಂಡರು, ನಿರೂಪ(ನೆ) ಕಾಣರು.
ಅನುವನೆ ಕಂಡರು, ತನುವನೆ ಕಾಣರು.
ಆಚಾರವನೆ ಕಂಡರು, ವಿಚಾರವನೆ ಕಾಣರು.
ಗುಹೇಶ್ವರಾ - ನಿಮ್ಮ ಕುರುಹನೆ ಕಂಡರು,
ಕೂಡಲರಿಯದೆ ಕೆಟ್ಟರು!

ಜಗತ್ತಿನ ಜನ ಕೇವಲ ಮೂರ್ತರೂಪವಾದ ನಾನಾ ವಿಧದ ಪ್ರಪಂಚವನ್ನು ಮತ್ತು ಅದರ ಬಾಹ್ಯ ಸೌಂದರ್ಯವನ್ನು ಮಾತ್ರ ಕಾಣುತ್ತಾರೆಯೇ ಹೊರತು ಅದರ ಹಿಂದಿರುವ ಅದಕ್ಕೆ ಆಧಾರವಾದ ಪರತತ್ವವನ್ನು ಕಾಣುವವರಾಗಿಲ್ಲ. ಪಂಚಭೂತಗಳಿಂದ ಕೂಡಿರುವ ಇಂದ್ರಿಯಗ್ರಾಹ್ಯವಾದ ಈ ಜಗತ್ತಿನೊಳಗೆ ಪರಮಾತ್ಮ ಅಥವಾ ಪರಶಕ್ತಿ ಅಂತರ್ಯಾಮಿಯಾಗಿ ಅಣುವಿಗೆ ಅಣುವಾಗಿ ಮಹತ್ತಿಗೆ ಮಹತ್ತಾಗಿ ನೆಲೆಸಿದ್ದಾನೆ. ಆದರೆ ಈ ಜಗದ ಜನ ದೈವಾರಾಧನೆಯನ್ನು ಮಾತ್ರ ಮಾಡಬಲ್ಲವರೇ ಹೊರತು ಆ ಆಚರಣೆಯ ಹಿಂದಿನ ಪರತತ್ತ್ವ ವಿಚಾರವನ್ನು ತಿಳಿಯಲು ಮನಸ್ಸು ಮಾಡುವವರಲ್ಲ. ಕೇವಲ ಗುಹೇಶ್ವರನ ಅಂದರೆ ದೇವರ ಕುರುಹಿನ ಆರಾಧನೆಯಿಂದ ದೈವ ಪ್ರಾಪ್ತವಾಗುವುದಿಲ್ಲವೆಂಬ ನಿಜವನ್ನು ಅಲ್ಲಮ ಇಲ್ಲಿ ತಿಳಿಸುತ್ತಿದ್ದಾನೆ. ದೇವರನ್ನು ಕುರಿತ ಹಿಂದಿನ ವಚನಗಳ ಆಶಯ ಇಲ್ಲಿಯೂ ಇದೆಯಾದರೂ ಮೂರ್ತರೂಪದ ಹಿಂದೆ ಅಡಗಿರುವ ಪರಶಕ್ತಿಯ ಅರಿವನ್ನು ಪಡೆಯಬೇಕೆಂಬ ವಿಚಾರ ಇಲ್ಲಿರುವುದು ಗಮನಾರ್ಹವಾಗಿದೆ.

ದೇಹದೊಳಗೆ ದೇವಾಲಯವಿದ್ದು,
ಮತ್ತೆ ಬೇರೆ ದೇಗುಲವೇಕಯ್ಯಾ?
ಎರಡಕ್ಕೆ ಹೇಳಲಿಲ್ಲಯ್ಯಾ.
ಗುಹೇಶ್ವರಾ ನೀನು ಕಲ್ಲಾದಡೆ ನಾನು ಏನಪ್ಪೆನು!

ಹಿಂದಿನ ವಚನಗಳಲ್ಲಿ ಕಲ್ಲದೇವರನ್ನು, ಮೂರ್ತಿಪೂಜೆಯನ್ನು ನಿರಾಕರಿಸಿದ್ದ ಅಲ್ಲಮ ಈ ವಚನದಲ್ಲಿ ದೇಹವೆಂಬ ದೇಗುಲದಲ್ಲಿ ದೈವವನ್ನು ಕಾಣಬೇಕೆಂಬ ಅರಿವನ್ನು ಕಾಣಿಸುತ್ತಿದ್ದಾನೆ. ಮಾನವನ ಈ ದೇಹ ನಿಸರ್ಗ ನಿರ್ಮಿಸಿದ ಒಂದು ಸುಂದರ ದೇವಾಲಯ. ಆದುದರಿಂದ ಕಲ್ಲುಮಣ್ಣಿನ ಬೇರೆ ದೇವಾಲಯದ ಹಂಗು ಮಾನವನಿಗೆ ಬೇಕಿಲ್ಲ. ದೇಹವೆಂಬ ಈ ದೇಗುಲದಲ್ಲಿ ಪ್ರಾಣಲಿಂಗವೆಂಬ ದೇವರಿದ್ದಾನೆ. ಮಾನವ ಅಂತರ್ಮುಖ ಸಾಧನೆಯಿಂದ ಈ ಪ್ರಾಣಲಿಂಗದ ದರ್ಶನ ಪಡೆಯಬೇಕು. ಹಾಗಾಗಿ ದೇಹವೊಂದು ದೇಗುಲವಾಗಿರಬೇಕಾದರೆ ಬಾಹ್ಯದ ಇನ್ನೊಂದು ದೇವಾಲಯದಲ್ಲಿ ದೇವರನ್ನು ಕಲ್ಲಿನ ರೂಪದಲ್ಲಿ ನೋಡುವುದನ್ನು ಮನುಷ್ಯ ತ್ಯಜಿಸಬೇಕು.

ಅಲ್ಲಮನ ಈ 'ದೇಹವೇ ದೇಗುಲ' ಎಂಬ ಪರಿಕಲ್ಪನೆ ಅದ್ಭುತವಾಗಿದ್ದು, ಆ ಕಾಲದ ಬಸವಣ್ಣ, ಅಂಬಿಗರ ಚೌಡಯ್ಯ ಮುಂತಾದ ಶರಣರು ಈ ತತ್ವವನ್ನು ಪ್ರತಿಪಾದಿಸಿರುವುದನ್ನು ನಾವು ನೋಡುತ್ತೇವೆ. ದೇಹ ದೇಗುಲವಾಗಬೇಕಾದರೆ ದೇಹದಲ್ಲಿನ ಅಷ್ಟಮದಗಳು, ಅರಿಷಡ್ವರ್ಗಗಳು ನಷ್ಟವಾಗಬೇಕು. ಮನಸ್ಸು, ಆತ್ಮ ಶುದ್ಧವಾಗಬೇಕು, ಅಂತರಾತ್ಮ ತೊಳಗಿ ಬೆಳಗಬೇಕು. ದೇಹದಲ್ಲಿ ವಾಸವಾಗಿರುವ ಮನಸ್ಸು ಮತ್ತು ಪಂಚೇಂದ್ರಿಯಗಳು ಕೇವಲ ವಿಷಯಾಸಕ್ತವಾಗಿ ಲೌಕಿಕ ಸುಖದೆಡೆಗೆ ಹಂಬಲಿಸಿದರೆ, ದೇಹ ದೇಗುಲವಾಗುವ ಬದಲು ಹೊಲಸಿನ ತಿಪ್ಪೆಯಾಗಿಬಿಡುತ್ತದೆ.

ಆದುದರಿಂದ ದೇಹ ದೇಗುಲವಾಗುವ ಪ್ರಕ್ರಿಯೆಯಲ್ಲಿ ಎಲ್ಲ ಉಪಾಧಿಗಳನ್ನು ಕಳೆದುಕೊಂಡು ಮದಮಾತ್ಸರ್ಯವನ್ನು ನೀಗಿಕೊಂಡು ದೇಹ ದೇಗುಲವಾಗಿ ಅಂತರಾತ್ಮನ ಅರಿವನ್ನು ಪಡೆಯಲು ಸಾಧ್ಯ.

ಎನ್ನ ಮನದ ಕೊನೆಯ ಮೊನೆಯ ಮೇಲೆ
ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವಾ.
ಆತನ ಕಂಡು ಬೆರಗಾದೆನವ್ವಾ.
ಎನ್ನ ಅಂತರಂಗದ ಆತುಮನೊಳಗೆ
ಅನಿಮಿಷ ನಿಜೈಕ್ಯ ಗುಹೇಶ್ವರನ ಕಂಡು!

ಇಲ್ಲಿ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ರೂಪನ ಅಂದರೆ ದೈವವನ್ನು ಕಂಡ ದಿವ್ಯ ಅನುಭವವಿದೆ. ಮನಸ್ಸು ಸದಾ ಚಂಚಲವಾದದ್ದು. ಆದುದರಿಂದಲೇ ಅದನ್ನು ಮರ್ಕಟಕ್ಕೆ ಹೋಲಿಸಲಾಗಿದೆ. ಮನಸ್ಸಿನ ಈ ಆಸೆ-ಆಮಿಷದ ಚಂಚಲತೆ ಮೊದಲು ಕಳೆಯಬೇಕು. ಭವಲೋಕದ ಸಂಚಲನವೆಲ್ಲ ಕೊನೆಗೊಂಡ ಮೇಲೆ ನಿಶ್ಚಲವಾದ ಅಂದರೆ ದೈವದಲ್ಲಿ ಮಾತ್ರ ನೆಟ್ಟ ನಿಶ್ಚಲತೆ ಮನಸ್ಸಿಗೆ ದೊರಕುತ್ತದೆ. ಲೌಕಿಕ ಆಸೆ-ಆಮಿಷಗಳೆಲ್ಲ ಕಳೆದು ನಿಜದಲ್ಲಿ ಅಂದರೆ ಪರತತ್ವದಲ್ಲಿ ನೆಟ್ಟ ಮನಸ್ಸಿನ ಸ್ಥಿತಿಯನ್ನು ಅಲ್ಲಮ ಇಲ್ಲಿ 'ಮನದ ಕೊನೆಯ ಮೊನೆ' ಎಂದು ಬಣ್ಣಿಸುತ್ತಿರುವುದು. ಅಂಥ ಮನದ ಕೊನೆಯ ಮೊನೆಯಲ್ಲಿ ಮಾತ್ರ ಅಂಗವಿಲ್ಲದ ಅಂದರೆ ರೂಪವಿಲ್ಲದ ನಿರಾಕಾರ ದೈವವನ್ನು ತಾನು ಕಂಡು ಬೆರಗಾದೆನೆಂದು ಮತ್ತು ತನ್ನ ಅಂತರಂಗದ ಆತ್ಮದಲ್ಲಿ ತನ್ನ ದೈವ ಅನಿಮಿಷ ಅಂದರೆ ಪರಾತ್ಪರಶಕ್ತಿ ನಿಜೈಕ್ಯನಾದನೆಂದು ಅಲ್ಲಮ ಹೇಳುವಲ್ಲಿ ದೇಹವೆಂಬ ದೇಗುಲದಲ್ಲಿ ಪ್ರಾಣಲಿಂಗಸ್ವರೂಪಿ ನಿರಾಕಾರದೈವವನ್ನು ಕಂಡು ನಿಬ್ಬೆರಗಾದ ಅನುಭಾವದ ದಿವ್ಯ ದರ್ಶನವನ್ನು ನೀಡುತ್ತಿರುವನು. ಇದು ಹಿಂದಿನ ವಚನದ ದೇಹವೇ ದೇಗುಲವೆಂಬ ಪರಿಕಲ್ಪನೆಯನ್ನು ವಿಕಾಸಗೊಳಿಸಿದ ಪ್ರಕ್ರಿಯೆಯಾಗಿದೆ.

ಶಿಲೆಯೊಳಗಣ ಪಾವಕದಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರಾ ನಿಮ್ಮ ಶರಣಸಂಬಂಧ

ಶಿಲೆಯಲ್ಲಿ ಅಗ್ನಿ ಗೂಢವಾಗಿರುವಂತೆ, ನೀರಲ್ಲಿ ಕಾಣುವ ಪ್ರತಿಬಿಂಬಕ್ಕೆ ನೀರ ಗುಣದೋಷಗಳು ಅಂಟದ ನಿರ್ಲಿಪ್ತ ಭಾವದಂತೆ, ಬೀಜದಲ್ಲಿ ಅಡಗಿರುವ ಬೃಹತ್ ವೃಕ್ಷದಂತೆ, ಶಬ್ದದೊಳಗಿರುವ ನಿಶ್ಶಬ್ದದಂತೆ ಗುಹೇಶ್ವರನು ಅವ್ಯಕ್ತವಾಗಿ ನಿರಾಕಾರವಾಗಿ ಇರುವನೆಂದು ಅಲ್ಲಮ ಹೇಳುತ್ತಿರುವನು. ಅಂದರೆ ದೇವರು ನಿರಾಕಾರಸ್ವರೂಪಿಯೇ ಹೊರತು ಅವನಿಗೊಂದು ರೂಪವಾಗಲೀ ಆಕಾರವಿಲ್ಲವೆಂಬುದು ಇಲ್ಲಿನ ಅಭಿಪ್ರಾಯ.

ನೆಲದ ಮರೆಯ ನಿಧಾನದಂತೆ
ಮುಗಿಲ ಮರೆಯಲಡಗಿದ ಮಿಂಚಿನಂತೆ
ಬಯಲ ಮರೆಯಲಡಗಿದ ಮರೀಚಿಯಂತೆ
ಕಂಗಳ ಮರೆಯಲಡಗಿದ ಬೆಳಗಿನಂತೆ
ಗುಹೇಶ್ವರಾ ನಿಮ್ಮ ನಿಲವು !

ನೆಲದ ಮರೆಯಲ್ಲಿ ಅಡಗಿರುವ ನಿಧಿಯಂತೆ; ಮುಗಿಲ ಮರೆಯಲ್ಲಿ ಅಡಗಿರುವ ಮಿಂಚಿನಂತೆ, ಬಯಲ ಮರೆಯಲ್ಲಿ ಅಡಗಿರುವ ಮರೀಚಿಕೆಯಂತೆ, ಜಗತ್ತನ್ನು ನೋಡುವ ಕಣ್ಣುಗಳ ಮರೆಯಲ್ಲಿರುವ ಬೆಳಕಿನಂತೆ ದೇವರು ನಿಗೂಢನಾಗಿ ಅವ್ಯಕ್ತ ಸ್ವರೂಪಿಯಾಗಿ ಸೂಕ್ಷ್ಮದೇಹಿಯಾಗಿ ನಿರಾಕಾರಿಯಾಗಿ ಈ ಜಗವನ್ನೆಲ್ಲ ವ್ಯಾಪಿಸಿಕೊಂಡಿರುವನು. ದೇವನು ನಿರಾಕಾರಸ್ವರೂಪಿಯೇ ಹೊರತು ರೂಪ ಆಕಾರ ಬಣ್ಣಗಳಿಂದ ಕೂಡಿರುವ ಸಾಕಾರರೂಪಿಯಲ್ಲವೆಂಬುದು ಇಲ್ಲಿನ ಅರಿವು.

ಆಧಾರದಲ್ಲಿ ಬ್ರಹ್ಮ ಸ್ವಾಯತವಾದ
ಸ್ವಾಧಿಷ್ಠಾನದಲ್ಲಿ ವಿಷ್ಣು ಸ್ವಾಯತವಾದ
ಮಣಿಪೂರಕದಲ್ಲಿ ರುದ್ರ ಸ್ವಾಯತವಾದ
ಅನಾಹತದಲ್ಲಿ ಈಶ್ವರ ಸ್ವಾಯತವಾದ
ವಿಶುದ್ಧಿಯಲ್ಲಿ ಸದಾಶಿವ ಸ್ವಾಯತವಾದ
ಆಜ್ಞೆಯಲ್ಲಿ ಉಪಮಾತೀತ ಸ್ವಾಯತವಾದ.
ಇವರೆಲ್ಲರು; ಬಯಲಲ್ಲಿ ಹುಟ್ಟಿ ಬಯಲಲ್ಲಿ ಬೆಳೆದು,
ಬಯಲಲಿಂಗವನೆ ಧರಿಸಿಕೊಂಡು, ಬಯಲನೆ ಆರಾಧಿಸಿ
ಬಯಲಾಗಿ ಹೋಯಿತ್ತ ಕಂಡೆ ಗುಹೇಶ್ವರಾ.

ಮಾನವನ ಶರೀರದಲ್ಲಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಎಂಬ ಚಕ್ರಗಳಿವೆ. ಇವು ಸಾಧಕನ ದೇಹಾಂತರಂಗದಲ್ಲಿ ಲಿಂಗ ಅಥವಾ ಪರತತ್ವ ಪ್ರಕಟಗೊಳ್ಳುವ ನೆಲೆಗಳು ಅಥವಾ ಸ್ಥಾನಗಳು. ಆಧಾರಚಕ್ರದಲ್ಲಿ ಬ್ರಹ್ಮ, ಸ್ವಾಧಿಷ್ಠಾನಚಕ್ರದಲ್ಲಿ ವಿಷ್ಣು, ಮಣಿಪೂರಕಚಕ್ರದಲ್ಲಿ ರುದ್ರ, ಅನಾಹತಚಕ್ರದಲ್ಲಿ ಈಶ್ವರ, ವಿಶುದ್ಧಿಚಕ್ರದಲ್ಲಿ ಸದಾಶಿವ, ಆಜ್ಞಾಚಕ್ರದಲ್ಲಿ ಮಹೇಶ್ವರ ಸ್ವಾಯತವಾಗಿದ್ದಾರೆ. ಮಾನವಶರೀರದಲ್ಲಿನ ಈ ಚಕ್ರಗಳಲ್ಲಿ ನೆಲೆಸಿರುವ ಈ ಬ್ರಹ್ಮ, ವಿಷ್ಣು ಆದಿಯಾದ ದೇವತೆಗಳನ್ನು ಯೋಗಶಕ್ತಿಯ ಮೂಲಕ ತಿಳಿದು ಆರಾಧಿಸಿ ಆನಂದಿಸಬೇಕು. ಈ ಆನಂದವೇ ಮಾನವ ಬದುಕಿನ ನೈಜ ನೆಲೆ. ಬ್ರಹ್ಮ ವಿಷ್ಣು ಆದಿಯಾದ ಇವರೆಲ್ಲರೂ ಬಯಲಲ್ಲೆ ಹುಟ್ಟಿ, ಬಯಲಲ್ಲೆ ಬೆಳೆದು, ಬಯಲ ಲಿಂಗವನೆ ಧರಿಸಿ, ಬಯಲನೆ ಆರಾಧಿಸಿ ಕೊನೆಗೆ ಬಯಲಲ್ಲೇ ಬಯಲಾಗುತ್ತಾರೆ. ಇಲ್ಲಿ ಬಯಲು ಎನ್ನುವುದು ಒಂದು ವಿಶಿಷ್ಟ ಶಬ್ದವಾಗಿದ್ದು ಜಗತ್ ಸೃಷ್ಟಿಗಿಂತ ಮುಂಚೆ ಇದ್ದ ಶೂನ್ಯದ

ಸ್ವರೂಪವನ್ನು, ಅಂದರೆ ದೈವದ ಸ್ವರೂಪವನ್ನು ಸಂಕೇತಿಸುತ್ತದೆ. ಶೂನ್ಯವೇ ಮಹಾ ಬಯಲಾಗಿದ್ದು ಅದು ಪರತತ್ವದ ಸಂಕೇತವಾಗಿದೆ. ಬಯಲಲ್ಲಿ ಬಯಲಾಗುವುದರಲ್ಲೇ ಮಾನವಜೀವನದ ಪರಮ ಸಾರ್ಥಕ್ಯವಿರುವುದು.

ಆಕಾಶವ ಕಪ್ಪೆ ನುಂಗಿದಡೆ ಆಗಳೆ ಹತ್ತಿತ್ತು ರಾಹು !
ನೋಡಿರೆ; ಅಪೂರ್ವ ಅತಿಶಯವ !
ಅಂಧಕ ಹಾವ ಹಿಡಿದ -
ಇದು ಕಾರಣ; ಲೋಕಕ್ಕೆ ಅರುಹದೆ,
ನಾನು ಅರಿದೆನು ಗುಹೇಶ್ವರಾ.

'ಆಕಾಶ'ವೆಂದರೆ ಯೋಗಸಾಧನೆಯಿಂದ ಮೇಲೆ ತಿಳಿಸಿದ ಆರು ಚಕ್ರಗಳ ಸೋಪಾನವನ್ನೇರಿದ ಜೀವಾತ್ಮ ಅಥವಾ ಶರಣ. 'ಕಪ್ಪೆ' ಎಂದರೆ ಯೋಗಸಾಧನೆಯಿಂದ ಉಂಟಾದ ಅನಾಹತಪ್ರಣವನಿನಾದ. ಇಂಥ ಕಪ್ಪೆ ಶರಣನನ್ನು ನುಂಗಿದರೆ ಅಂದರೆ ಆವರಿಸಿಕೊಂಡರೆ ಅವನ ಜೀವಭಾವ ಕಳೆದುಹೋಗುತ್ತದೆ. ಇದು ಅತ್ಯಂತ ಅಪೂರ್ವ ವಾದ ಘಟನೆ ಮತ್ತು ತುರೀಯಾವಸ್ಥೆಯ ಅನುಭವ. ಈ ಪ್ರಣವನಾದದಲ್ಲಿ ಮಗ್ನನಾಗಿ ರುವ ಜೀವಾತ್ಮನಲ್ಲಿ ತಾನು ಮತ್ತು ಪರಮಾತ್ಮನೆಂಬ ಭೇದದೃಷ್ಟಿ ಮುಚ್ಚಿಹೋಗಿರುವು ದರಿಂದ ಆತ ಕುರುಡ. 'ಹಾವು ಹಿಡಿದ' ಎಂದರೆ ಜಾಗೃತವಾದ ಕುಂಡಲಿನಿಶಕ್ತಿಯನ್ನು ಪಡೆದ ಎಂದರ್ಥ. ಇಂಥ ಅಪೂರ್ವಾತಿಶಯವಾದ ಶಿವ-ಜೀವ ಐಕ್ಯದ ಆನಂದಾನು ಭೂತಿಯನ್ನು ಅನುಭವಿಸಿದವನು ಅರಿಯುತ್ತಾನೆಯೇ ಹೊರತು ಹೊರಗಿನ ಲೋಕ ತಿಳಿಯದು ಎಂದು ಅಲ್ಲಮ ಹೇಳುತ್ತಾನೆ.

ನಾ ದೇವನಲ್ಲದೆ ನೀ ದೇವನೆ ?
ನೀ ದೆವನಾದಡೆ ಎನ್ನನೇಕೆ ಸಲಹೆ ?
ಆರೈದು, ಒಂದು ಕುಡಿತೆ ಉದಕವನೆರೆವೆ,
ಹಸಿದಾಗ ಒಂದು ತುತ್ತು ಓಗರವನಿಕ್ಕುವೆ.
ನಾ ದೇವ ಕಾಣಾ ಗುಹೇಶ್ವರಾ!

ಅನ್ನ ನೀರು ಕೊಟ್ಟು ಸಲಹುವವನು ದೇವನಾಗುವನು. ಆದರೆ ಶರಣನಿಂದ ಸಲುಹಿಸಿಕೊಳ್ಳುವವನು ದೇವನಾಗುವುದಿಲ್ಲ. ಶರಣ ದೇವರಿಗೆ ಪ್ರೀತಿಯಿಂದ ನೀರು ಅನ್ನ ನೀಡುತ್ತಾನೆ. ಆದರೆ ದೇವರು ಎಂದಾದರೂ ಶರಣನಿಗೆ ಅನ್ನ ನೀರು ನೀಡಿ ಸಲುಹಿದ್ದು ಉಂಟೆ? ಆದುದರಿಂದ ಸಲುಹುವ ಶರಣನೇ ದೇವರು ಎಂಬ ಭಾವ ಇಲ್ಲಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಶರಣ ದೇವನಾಗುವ ಅಭೇದ ಪರಿಕಲ್ಪನೆ ಕುಡಿಯೊಡೆದಿರುವುದು. ಇಲ್ಲಿ ಅಲ್ಲಮಪ್ರಭುವಿನ ನಾನತ್ವವೇನೂ ಇಲ್ಲ. ಶರಣ ಸಾಧನೆಯ ಹಾದಿಯಲ್ಲಿ ಸಾಗಿ ಶಿವನಾಗುವ ಪ್ರಕ್ರಿಯೆ ಇದು.

ಹೀಗೆ ಅಲ್ಲಮ ತನ್ನ ವಚನಗಳಲ್ಲಿ ಕಲ್ಲು, ಮಣ್ಣಿನ ಜಡಮೂರ್ತಿಗಳನ್ನು ದೇವರೆಂದು ಬಗೆಯದೆ 'ದೇಹವೇ ದೇಗುಲ'ವೆಂಬ ಪರಿಕಲ್ಪನೆಯಲ್ಲಿ ಸಾಧಕ ತನ್ನಲ್ಲಿ ದೇವರನ್ನು ಕಾಣುವ ನಿರಾಕಾರ ಶಿವತತ್ವದ ಪ್ರತಿಪಾದಕನಾಗಿರುವುದು ಕಂಡುಬರುತ್ತದೆ. 'ಮಣ್ಣು ಬಿಟ್ಟು ಮಡಿಕೆ ಇಲ್ಲ, ತನ್ನ ಬಿಟ್ಟು ದೇವರಿಲ್ಲ' ಎಂಬ ಉಕ್ತಿಯಂತೆ ಮಾನವ ತನ್ನ ಒಳ್ಳೆಯ ನಡತೆ, ಗುಣಶೀಲಗಳಿಂದ ದೈವತ್ವದ ನೆಲೆಗೆ ಏರಬೇಕೆಂಬ ಆಶಯ ಅಲ್ಲಮನದಾಗಿದೆ.

**ಅಲ್ಲಮನ ಅಳತೆಯಲ್ಲಿ ಸಮಾಜ**

ವ್ಯಕ್ತಿ ಸಮಾಜಜೀವಿಯಾದ್ದರಿಂದ ಸಮಾಜದ ಆಗುಹೋಗುಗಳನ್ನು ಪರಿಭಾವಿಸುತ್ತ ತನ್ನ ಆಲೋಚನಾಕ್ರಮವನ್ನು ರೂಪಿಸಿಕೊಳ್ಳುತ್ತಾನೆ. ಸಮಾಜವೆನ್ನುವುದು ಸರ್ವರೀತಿಯ ಜನವರ್ಗಗಳಿಂದ ಕೂಡಿರುವಂಥದ್ದು. ಅಲ್ಲಿ ಒಳ್ಳೆಯದು-ಕೆಟ್ಟದ್ದು, ಉತ್ತಮವಾದದ್ದು-ಕನಿಷ್ಠವಾದದ್ದು, ಬೇಕಾಗಿರುವುದು-ಬೇಡವಾದುದು-ಹೀಗೆ ಪರ ವಿರೋಧ ನಿಲುವಿನ ಜನ, ಅಭಿಪ್ರಾಯಗಳು ಸಹಜವೆನ್ನುವಂತೆ ಮಿಶ್ರಣಗೊಂಡಿರುತ್ತವೆ. ಒಬ್ಬ ಪ್ರಜ್ಞಾವಂತ ವ್ಯಕ್ತಿ ಹಂಸಕ್ಷೀರನ್ಯಾಯದಂತೆ ಸಮಾಜಮುಖಿ ವಿಚಾರ-ಚಿಂತನೆ ನಡೆಗಳನ್ನು ಒಪ್ಪಿ ಸ್ವೀಕರಿಸಿದರೆ ಸಮಾಜವಿರೋಧಿ ಅವಿಚಾರ ಅನಾಚಾರಗಳನ್ನು ಧಿಕ್ಕರಿಸುತ್ತಾನೆ. ಕವಿಗಳು, ಚಿಂತಕರು, ವಿಚಾರಮತಿಗಳು, ದಾರ್ಶನಿಕರು ಸಮಾಜದ ಬಹುಮುಖ್ಯ ಚೇತನಗಳಾಗಿರುವುದರಿಂದ ಅಂಥವರ ಮಾತುವಿಚಾರಗಳಿಗೆ ಸಮಾಜದಲ್ಲಿ ಸಹಜವಾಗಿಯೇ ಬೆಲೆಯಿರುತ್ತದೆ. ನಡುಗನ್ನಡದ ವಚನ ಚಳವಳಿ ಅಂದಿನ ಸಮಾಜದಲ್ಲಿ ಬೇರುಬಿಟ್ಟಿದ್ದ ಅಜ್ಞಾನ, ಮೂಢನಂಬಿಕೆ, ಅಸಮಾನತೆ, ಶೋಷಣೆಯನ್ನು ತಿರಸ್ಕರಿಸಿ ಜನಮಾನಸದಲ್ಲಿ ಜ್ಞಾನದ ಬೀಜ ಬಿತ್ತಿ ಮೌಢ್ಯ ಕಂದಾಚಾರ ರಹಿತ ಶೋಷಣಮುಕ್ತ ಸರ್ವಸಮಾನತೆಯ ಸಮಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ಸನ್ನು ಸಾಧಿಸಿದರು. ನೂರಾರು ವಚನಕಾರರಲ್ಲಿ ಅಲ್ಲಮನೂ ಒಬ್ಬ. ಈ ಅಲ್ಲಮ ಮಿಕ್ಕೆಲ್ಲ ವಚನಕಾರರಿಗಿಂತ ಭಿನ್ನ. ಜ್ಞಾನಮಾರ್ಗಿಯಾದ ಆತ ಕರ್ಮಮಾರ್ಗವನ್ನು ದೂರ ಸರಿಸಿದವನು. ಶಿವ-ಜೀವ ಐಕ್ಯತೆಯಲ್ಲಿ ಬದುಕಿನ ಸಾರ್ಥಕ್ಯವನ್ನು ಕಂಡವನು. ಸಮಾಜದ ಒಳಿತು-ಕೆಡಕಿನ ಬಗೆಗೆ ಅರಿವಿದ್ದರೂ ಅದನ್ನು ಅಷ್ಟಾಗಿ ಮೈಮೆದುಳಿಗೆ ಹಚ್ಚಿಕೊಂಡವನಲ್ಲ. ಆತನದೇನಿದ್ದರೂ ಅಂತರಾತ್ಮಸಂವೇದನೆಯ ಜ್ಞಾನಮಾರ್ಗ, ಬಹಿರ್ಮುಖದ ಬದುಕಿನ ಕರ್ಮಮಾರ್ಗವಲ್ಲ. ಹೀಗಿದ್ದರೂ ಸಮಾಜದ ಅಂಕು-ಡೊಂಕು ತಿದ್ದುವ ಕಾರ್ಯದಲ್ಲಿ ಆತ ನಿರತನಾಗಿರುವುದು ಆತನ ಕೆಲ ವಚನಗಳಲ್ಲಿ ಕಂಡುಬರುತ್ತದೆ.

ಜಗತ್ಸಂಚಾರಿಯಾದ ಅಲ್ಲಮ ಕರ್ಮಯೋಗಿ ಸಿದ್ಧರಾಮನಿರುವ ಸೊನ್ನಲಿಗೆಗೆ ಬಂದಾಗ ಆತ ಕೆರೆಬಾವಿ ದೇವಸ್ಥಾನಗಳ ನಿರ್ಮಾಣದಲ್ಲಿ ನಿರತನಾಗಿದ್ದ. ಕೆರೆಬಾವಿಗಳ

ನಿರ್ಮಾಣದಿಂದ ಶ್ರಮಜೀವಿಗಳ ನೆಲಮೂಲದ ಕಾಯಕಕ್ಕೆ ಬಲ ಒದಗಿಬರುತ್ತಿತ್ತು. ಜನತೆಯ ನೀರಿನ ಬರ ಹಿಂಗುತ್ತಿತ್ತು. ಅಲ್ಲದೆ ಸಿದ್ಧರಾಮ ಒಬ್ಬ ಸಮಾಜಸೇವಾಧುರೀಣನೆಂಬ ಅರಿವೂ ಅಲ್ಲಮನಿಗಿತ್ತು. ಸಿದ್ಧರಾಮನ ಕರ್ತೃತ್ವಶಕ್ತಿ, ಜಾಣ್ಮೆಯ ಬಗೆಗೂ ಅಲ್ಲಮನಿಗೆ ತಿಳಿದಿತ್ತು. ಇಷ್ಟಾದರೂ ಅಲ್ಲಮ

ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯಾ.
ನೆಲನನಗಿದು ಜಲವ ತೆಗೆದಿಹೆನೆಂಬ ಬಳಲಿಕೆಯ ನೋಡಾ.
ಒಂದು ಕಲ್ಲನು ಕಡಿದು ಮತ್ತೊಂದು ಕಲ್ಲಿಗೆ
ಭೋಗವ ಕೊಟ್ಟಿಹೆನೆಂಬ ಅಜ್ಞಾನವಿದೇನೊ ?
ಗುಹೇಶ್ವರಾ ! ಈ ಇರವಿನ ಪರಿಗೆ ಬೆರಗಾದೆನು !

ಎಂದು ಸಿದ್ಧರಾಮನ ಕೆರೆ ಬಾವಿ ದೇವಸ್ಥಾನ ನಿರ್ಮಾಣದ ಕೆಲಸವನ್ನು ಅಜ್ಞಾನವೆಂದು ವಿಡಂಬಿಸುತ್ತಾನೆ. ಇಲ್ಲಿ ಅಲ್ಲಮನಿಗೆ ಸಿದ್ಧರಾಮನನ್ನು ಕರ್ಮಮಾರ್ಗದಿಂದ ಜ್ಞಾನಮಾರ್ಗದೆಡೆಗೆ ಸೆಳೆವುದು ಮುಖ್ಯ ಗುರಿಯಾಗಿರುತ್ತದೆ. ಸಿದ್ಧರಾಮನ ಈ ಕರ್ಮಮಾರ್ಗವನ್ನು ಜರೆದು ಅವನನ್ನು ಜ್ಞಾನಮಾರ್ಗದತ್ತ ಕರೆದುಕೊಂಡು ಹೋಗುತ್ತಾನೆ, ಕಲ್ಯಾಣದ ಮಾರ್ಗವಾಗಿ.

ಅನ್ನವನಿಕ್ಕಿ ನನ್ನಿಯ ನುಡಿದು
ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದಡೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು.
ಗುಹೇಶ್ವರನನರಿದ ಶರಣಂಗೆ ಆವ ಫಲವೂ ಇಲ್ಲ.

ವ್ಯಕ್ತಿಯೊಬ್ಬ ಅನ್ನದಾನ, ಅರವಟ್ಟಿಗೆ ಸೇವೆ, ಕೆರೆ ನಿರ್ಮಾಣದಂಥ ಸೇವಾಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡರೆ ಸ್ವರ್ಗ ಪ್ರಾಪ್ತಿಯಾಗಬಹುದಲ್ಲದೆ ಶಿವನ ಅರಿವು ಸಾಧ್ಯವಾಗದೆಂದು ಮೇಲಿನಂಥ ಲೋಕಸೇವಾಕಾರ್ಯಗಳ ಫಲವನ್ನು ವಿಡಂಬಿಸುತ್ತಾನೆ, ಅಲ್ಲಮ.

ಕುಲಮದ ಛಲಮದ ವಿದ್ಯಾಮದದವರ ತೋರದಿರಾ.
ಅವರ ಆರೂಢಪದವಿಯನೆನಗೆ ತೋರದಿರಾ.
ಅವರ ಗರುವ ಗಂಭೀರವನೆನಗೆ ತೋರದಿರಾ.
ಶಮೆದಮೆಯುಳಿದು ದಶಮುಖ ನಿಂದು
ಲಿಂಗದಲ್ಲಿ ಲೀಯವಾದವರನಲ್ಲದೆ
ಎನಗೆ ತೋರದಿರಾ ಗುಹೇಶ್ವರಾ.

ತಾವು ಶ್ರೇಷ್ಠಕುಲದವರೆಂಬ ಸೊಕ್ಕಿನಿಂದ, ಛಲಗಾರರೆಂಬ ಸೊಕ್ಕಿನಿಂದ, ಘನವಿದ್ವಾಂಸರೆಂಬ ಸೊಕ್ಕಿನಿಂದ ಮೆರೆಯುವವರ ಘನಪದವಿಯನ್ನು ಗರ್ವಗಂಭೀರತೆ

ಯನ್ನು ತನಗೆ ತೋರಬಾರದೆಂದು ಅಲ್ಲಮ ಗುಹೇಶ್ವರನಲ್ಲಿ ಮೊರೆಯಿಡುತ್ತಿರುವನು. ಮನೋನಿಗ್ರಹ ಮತ್ತು ಇಂದ್ರಿಯನಿಗ್ರಹದ ಮೂಲಕ ಚಂಚಲ ಮನಸ್ಸು ಸ್ಥಿರವಾಗಿ ನಿಂತು ಲಿಂಗದಲ್ಲಿ ಮಗ್ನನಾಗಿರುವ ಶರಣರನ್ನಲ್ಲದೆ ಬೇರೆ ಯಾರನ್ನೂ ಅಂದರೆ ಮೇಲಿನ ರೀತಿಯ ಹುಸಿ ಶ್ರೇಷ್ಠತೆಯ ವ್ಯಸನದಲ್ಲಿ ಬಳಲುತ್ತಿರುವ ಮತಿಗೇಡಿಗಳ ಮುಖವನ್ನು ತನಗೆ ತೋರದಿರು ಎಂದು ಬೇಡಿಕೊಳ್ಳುತ್ತಿರುವರು ಅಲ್ಲಮಪ್ರಭುಗಳು. ಇಲ್ಲಿ ವ್ಯಕ್ತಿಶ್ರೇಷ್ಠತೆಯ ವ್ಯಸನದಿಂದ ಮುಕ್ತವಾಗಬೇಕೆಂಬ ಆಶಯವೇ ಮುಖ್ಯವಾಗಿದೆ. ತಾನು ಶ್ರೇಷ್ಠನೆಂದು ಭಾವಿಸಿದರೆ ಅನ್ಯರು ಸಹಜವಾಗಿಯೇ ಕನಿಷ್ಠರು, ಅಧಮರು ಎಂಬ ಭಾವ ಅಂತರಂಗದಲ್ಲಿ ಮೂಡಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಆದುದರಿಂದ ಶ್ರೇಷ್ಠತೆಯ ವ್ಯಸನದಿಂದ ವ್ಯಕ್ತಿ ಪಾರಾದರೆ ಅವನ ಉದ್ಧಾರ ಸಾಧ್ಯ ಎಂಬ ಅರಿವನ್ನು ಕಾಣಿಸಿದ್ದಾರೆ, ಇಲ್ಲಿ.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರಿ ಉಂಬ ಲಾಭ.
ಗುಹೇಶ್ವರನೆಂಬುದು ಮೀರಿದ ಘನವು !

ವೇದವೆನ್ನುವುದು ಕೇವಲ ಪಠಿಸಲಿಕ್ಕೆ ಇರುವ ಶಬ್ದರಾಶಿಯೇ ಹೊರತು ಅಲ್ಲಿ ಅನುಭಾವದ ಹುರುಳಿಲ್ಲ. ಶಾಸ್ತ್ರಗಳೆಂಬವು ಆಧಾರರಹಿತ ಸಂಗತಿಗಳಿಂದ ಕೂಡಿರುವ ಸಂತೆಯ ಸುದ್ದಿಗಳೇ ಹೊರತು ಅಲ್ಲಿ ಸತ್ಯಸಂಗತಿಗಳಿಲ್ಲ. ಪುರಾಣಗಳು ಬಲಿಷ್ಠರ ಸಂಘರ್ಷದ ಕಥೆಗಳು ಮಾತ್ರ. ತರ್ಕವು ಖಂಡನಾತ್ಮಕ ಬೌದ್ಧಿಕ ಹೋರಾಟವೇ ಹೊರತು ಅಲ್ಲಿ ಯಾವ ಹುರುಳೂ ಇಲ್ಲ. ದೇವರಿಗೆ ನೈವೇದ್ಯ ತೋರಿ ತಾವು ಉಣ್ಣುವ ಲಾಭವೇ ಭಕ್ತಿಯಾಗಿದೆ. ಇದು ಕೇವಲ ತೋರಿಕೆಯ ಭಕ್ತಿ. ಆದರೆ ಗುಹೇಶ್ವರನು ಮಾತ್ರ ಘನಕ್ಕೆ ಘನ, ಪರಿಪೂರ್ಣ ಸತ್ಯ. ಹೀಗೆ ಇಲ್ಲಿ ವೇದ, ಶಾಸ್ತ್ರ, ಪುರಾಣ, ತರ್ಕಗಳ ಅರ್ಥಹೀನತೆಯನ್ನು ಅವುಗಳ ಮಿತಿಯನ್ನು ಅಲ್ಲಿನ ಜನವಿರೋಧಿ ನಿಲುವನ್ನು ಅಲ್ಲಮ ಖಂಡಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ ಎನ್ನಬೇಕು. ಇದು ಅಲ್ಲಮನ ವಿಚಾರಮತಿಯ ಮೊನಚನ್ನು ತೋರಿಸುತ್ತದೆಂದು ಹೇಳಬೇಕು.

ಆಸೆಯೆಂಬ ಶೂಲದ ಮೇಲೆ, ವೇಷವೆಂಬ ಹೆಣನ ಕುಳ್ಳಿರಿಸಿ ;
ಧರೆಯ ಮೇಲುಳ್ಳ ಹಿರಿಯರು ಹೀಂಗೆ ಸವೆದರು ನೋಡಾ !
ಆಸೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು,
ಹೇಸಿಕೆಯಾಯಿತ್ತು ಗುಹೇಶ್ವರಾ.

ಆಸೆಯೆನ್ನುವುದು ಶೂಲವಿದ್ದ ಹಾಗೆ. ಶೂಲ ಮನುಷ್ಯದೇಹವನ್ನು ಇರಿದರೆ, ಆಸೆ ದೇಹದೊಳಗಿನ ಮನಸ್ಸು ಆತ್ಮವನ್ನು ಇರಿದು ಘಾಸಿ ಮಾಡುತ್ತದೆ. ಈ ಜಡ ಪ್ರಪಂಚವೆಲ್ಲ ತೋರಿಕೆಯದಾಗಿದ್ದು ವೇಷ ಧರಿಸಿದ ಹೆಣ ಮಾತ್ರದ್ದು. ಇಂಥ ಆಶಾಶೂಲದ ಮೇಲೆ ತೋರಿಕೆಯ ಜೀವರಹಿತ ಜಡಪ್ರಪಂಚ ಆಸೀನವಾಗಿದೆ. ಈ ತೋರಿಕೆಯ ಜಡಪ್ರಪಂಚದ ಸುಖ ಸಂತೋಷವನ್ನು ಪಡೆಯಬೇಕೆಂಬ ಬಯಕೆಯಿಂದ ಈ ಲೋಕದ ಜಾಣ ಹಿರಿಯರೆಲ್ಲ ತಮ್ಮ ಅಮೂಲ್ಯವಾದ ಆಯುಷ್ಯವನ್ನೆಲ್ಲ ಸವೆಸಿದ್ದಾರೆ. ಆಸೆಗಳಿಗೆ ಹಂಬಲಿಸಿ ಅವುಗಳಿಗೆ ಪ್ರಾಮುಖ್ಯತೆ ನೀಡಿ ಅವುಗಳನ್ನು ಈಡೇರಿಸಿಕೊಳ್ಳಲು ಹಗಲಿರುಳೂ ಹೋರಾಡುವ ಈ ಹಿರಿಯರನ್ನು ಕಂಡು ತಮಗೆ ಹೇಸಿಗೆಯಾಯಿತೆಂದು ಅಲ್ಲಮಪ್ರಭು ಹೇಳುತ್ತಿದ್ದಾರೆ. 'ಆಸೆಯೇ ದುಃಖಕ್ಕೆ ಮೂಲ' ಎಂದು ಬುದ್ಧ ಹೇಳಿದ ಮಾತನ್ನು ಇಲ್ಲಿ ನೆನೆಯಬಹುದಾಗಿದೆ. ಪ್ರಾಪಂಚಿಕ ನೆಲೆಯ ಆಸೆಯನ್ನು ಜಯಿಸಿದವನೇ ನಿಜಮಾನವ. ಆದುದರಿಂದ ಆಶಯ ಹಂಬಲವನ್ನು ಆತ ಬಿಡದಿದ್ದರೆ ಅವನ ಉದ್ಧಾರ ಸಾಧ್ಯವಿಲ್ಲವೆಂಬ ಅರಿವನ್ನು ಅಲ್ಲಮ ಇಲ್ಲಿ ಕಾಣಿಸುತ್ತಿದ್ದಾರೆ.

ಧರೆಯ ಮೇಲುಳ್ಳ ಅರುಹಿರಿಯರೆಲ್ಲರೂ
ಮರುಳುಗೊಂಡಾಡುತ್ತಿದ್ದಾರೆ ನೋಡಾ.
ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ
ಅಂಜದೆ ಪಾಕವ ಮಾಡಿಕೊಂಡು ಉಂಡು,
ಭಂಡವ ಮಾರುತ್ತಿರ್ಪರು ನೋಡಾ.
ಸಂಜೀವನಿಯ ಬೇರ ಕಾಣದೆ ಮರಣಕ್ಕೊಳಗಾದರು
ಗುಹೇಶ್ವರನನರಿಯದ ಭವಭಾರಕರೆಲ್ಲರು.

ಈ ವಚನದಲ್ಲಿ ಆಧ್ಯಾತ್ಮಿಕ ವಿದ್ಯೆಯನ್ನು, ಆತ್ಮವಿದ್ಯೆಯನ್ನು ಬಲ್ಲವರೆಂಬ ಹಿರಿಯರು ವಿಷಯಭ್ರಮಿತರಾಗಿ ಮರುಳುಗೊಂಡಂತೆ ಕಾಣುವ ಅವರ ದ್ವಂದ್ವಮಯ ನಿಲುವನ್ನು ಅಲ್ಲಮ ಖಂಡಿಸುತ್ತಿದ್ದಾನೆ. ಜ್ಞಾನವಂತರೆಂಬ ಹಲವು ಜನಗಳ ನಡೆ ಈ ರೀತಿಯಾಗಿ ವಿರೋಧಾಭಾಸದಿಂದ ಕೂಡಿರುವುದು ಪ್ರಾಚೀನಕಾಲದಿಂದಲೂ ನಡೆದು ಬಂದಿದೆ. ಪಾರಮಾರ್ಥಿಕ ಸತ್ವವಿಲ್ಲದ ಅವರ ಅಂತರಂಗ ಕೇವಲ ತೋರಿಕೆಯ ಮಂಜಿನ ಮಡಕೆಯಾಗಿದೆ. ಈ ತೋರಿಕೆಯ ದೇಹ ಮತ್ತು ಅಂತರಂಗದಲ್ಲಿ ತುಂಬಿರುವುದು ಆಕರ್ಷಕವಾದ ಪ್ರಾಪಂಚಿಕ ವಿಷಯವಾಸನೆಯ ಸಂವೇದನೆ, ಸ್ಮರಣೆ ಮತ್ತು ಅನುಭವಗಳು ಮಾತ್ರ. ಅಲ್ಲಿ ಆಧ್ಯಾತ್ಮಿಕವಾದ ಅನುಭೂತಿ ಎಳ್ಳಷ್ಟೂ ಇಲ್ಲ. ಈ ರಂಜನೆಯ ಲೌಕಿಕ ನೆಲೆಯ ವಿಷಯವಾಸನೆಗಳ ಭಂಡವನ್ನು ಎಳ್ಳಷ್ಟೂ ಅಳುಕು-ಅಂಜಿಕೆಯಿಲ್ಲದೆ ಅದನ್ನೇ ಪಾಕಮಾಡಿಕೊಂಡು ಉಣ್ಣುತ್ತಾರೆ, ಈ ಹಿರಿಯರು. ಅಂದರೆ ಇವರು ಪಾಕಮಾಡಿಕೊಂಡು ಉಣ್ಣುವುದು ಲೌಕಿಕ ನೆಲೆಯ ಸುಖ-ಸಂಭ್ರಮಗಳನ್ನು. ಆದರೆ ಜನರಿಗೆ ಹೊರ ಪ್ರಪಂಚಕ್ಕೆ ನೀಡುವುದು ಅಂದರೆ ಭಾಷಣ ಬಿಗಿಯುವುದು

ಆತ್ಮಜ್ಞಾನವನ್ನು. ಜನರಿಗೆ ಆತ್ಮಜ್ಞಾನದ ಗಿಳಿಪಾಠ ಹೇಳುವ ಈ ಹಿರಿಯರು ತಮ್ಮ ಸ್ವಂತ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳದ ದ್ವಂದ್ವ ವ್ಯಕ್ತಿತ್ವದವರು. ಲೌಕಿಕ ಬದುಕಿನ ಆಸೆ ಆಮಿಷಗಳ ಸೆಳೆತದಿಂದ ಬಿಡುಗಡೆ ಪಡೆಯಬೇಕಾದ ಸಂಜೀವಿನಿ ಸ್ವರೂಪದ ಪಾರಮಾರ್ತಿಕ ಸತ್ಯ, ಸತ್ವವನ್ನು ಅರಿಯದ ಇವರು ನಿತ್ಯ ಮರಣಕ್ಕೆ ಈಡಾಗುತ್ತಿದ್ದಾರೆ. ಇಂತವರೆಲ್ಲ ಪಾರಮಾರ್ಥಿಕ ಸತ್ಯವನ್ನು ತಿಳಿಯದ ಭವಬಂಧಿತ ನತದೃಷ್ಟರು.

ಮದ್ಯ ಮಾಂಸಾದಿಗಳ ಮುಟ್ಟೆವೆಂದಿರಿ ನೀವು ಕೇಳಿರೆ.
ಮದ್ಯವಲ್ಲದೇನು ಅಷ್ಟಮದಂಗಳು ?
ಮಾಂಸವಲ್ಲದೇನು ಸಂಸಾರಸಂಗ ?
ಈ ಉಭಯವನತಿಗಳೆದಾತನೆ
ಗುಹೇಶ್ವರ ಲಿಂಗದಲ್ಲಿ ಲಿಂಗೈಕ್ಯನು.

ಕೆಲ ಜನರು ಆಹಾರ ಸಂಸ್ಕೃತಿಯ ಆಧಾರದ ಮೇಲೆ ಶ್ರೇಷ್ಠ-ಕನಿಷ್ಠತೆಯನ್ನು ನಿರ್ಣಯಿಸುತ್ತಾರೆ; ತಾವು ಮದ್ಯಮಾಂಸ ಮುಟ್ಟುವುದಿಲ್ಲ; ತಾವು ಸಸ್ಯಾಹಾರದ ಸಾತ್ವಿಕರು, ಸಜ್ಜನರೆಂದು ಭ್ರಮಿಸಿ ಜಂಭ ಕೊಚ್ಚಿಕೊಳ್ಳುತ್ತಾರೆ. ಈ ಬಗೆಯ ಆಹಾರ ಸೇವನೆಯ ಆಧಾರದ ಹೆಚ್ಚು-ಕಮ್ಮಿ ಭಾವಗಳು ಮೊದಲಿನಿಂದಲೂ ಇವೆ; ಇಂದೂ ಚಾಲ್ತಿಯಲ್ಲಿವೆ. ಮದ್ಯ ಮಾದಕವಸ್ತುವಾಗಿದ್ದು ಅದು ತಮೋಗುಣ ಪೋಷಕ. ಮಾಂಸವು ರಾಜಸಿಕಗುಣ ಪೋಷಕವಾಗಿದೆ. ಮದ್ಯಮಾಂಸವನ್ನು ಮಿತವಾಗಿ ಬಳಸಿದರೆ ಆರೋಗ್ಯವರ್ಧಕ ಎಂಬ ಅಂಶವನ್ನು ಮರೆಯುವಂತಿಲ್ಲ. ಈ ಮದ್ಯಮಾಂಸಗಳಿಗಿಂತ ಅಧಿಕ ಹಾನಿಯನ್ನು ಉಂಟುಮಾಡುವಂಥ ಅಷ್ಟಮದಗಳ ಹಾವಳಿಯನ್ನು, ಸಂಸಾರದ ತಾಪತ್ರಯಗಳನ್ನು ನಿವಾರಿಸಿಕೊಳ್ಳುವುದು ಎಲ್ಲಕ್ಕಿಂತ ಮುಖ್ಯ ಎಂಬ ಸಂಗತಿಯನ್ನು ಅಲ್ಲಮ ಇಲ್ಲಿ ಒತ್ತಿ ಹೇಳುತ್ತಿದ್ದಾನೆ.

ಲೋಕದವರನೊಂದು ಭೂತ ಹಿಡಿದಡೆ,
ಆ ಭೂತದಿಚ್ಛೆಯಲ್ಲಿ ನುಡಿವುತ್ತಿಪ್ಪರು.
ಲಾಂಛನಧಾರಿ ವೇಷವ ಧರಿಸಿ, ಆಸೆಯಿಂದ ಘಾಸಿಯಾಗಲೇಕಯ್ಯಾ ?
ಆನೆಯ ಚೋಹವ ತೊಟ್ಟು, ನಾಯಾಗಿ ಬೊಗಳುವ
ಮಾನವರನೇನೆಂಬೆ ಗುಹೇಶ್ವರಾ ?

ಇಲ್ಲಿ ಅಲ್ಲಮ ಈ ಪ್ರಪಂಚದ ಜನರಿಗೆ ಹಿಡಿದಿರುವ ಭೂತವನ್ನು ಕುರಿತು ತಿಳಿಸುತ್ತಿದ್ದಾರೆ. ಆ ಭೂತದ ಇಚ್ಛೆಗೆ ಅನುಸಾರವಾಗಿಯೇ ನುಡಿವರು, ನಡೆವರು ಈ ಲೋಕದ ಜನರು. ಆ ಭೂತವಾದರೂ ಯಾವುದೆಂದರೆ ಅದು ಆಸೆ. ಆಸೆ ಎಂಬ ಭೂತ ಮೆಟ್ಟಿದವರನ್ನು ನುಡಿಸಲಾಗುವುದಿಲ್ಲ. ಆ ಭೂತದ ಇಚ್ಛೆಗೆ ಅನುಗುಣವಾಗಿ ಈ ಪ್ರಪಂಚದ ಜನ ನುಡಿಯುತ್ತಾರೆ, ನಡೆಯುತ್ತಾರೆ. ಆಸೆ ಎಂಬ ಭೂತ ಮೆಟ್ಟಿದರೆ ಮನುಷ್ಯ ತನ್ನ ಸ್ವಂತಿಕೆ, ಸ್ವೋಪಜ್ಞತೆಯನ್ನು ಕಳೆದುಕೊಂಡು ಕೇವಲ ಆಸೆಯ

ದಾಸರಾಗಿಬಿಡುತ್ತಾರೆ. ಇದು ಲೌಕಿಕ ಪ್ರಪಂಚದಲ್ಲಿನ ಸಾಮಾನ್ಯ ಜನರಲ್ಲಿ ಮನೆಮಾಡಿರುವ ಆಸೆಯೆಂಬ ಭೂತದ ಚೇಷ್ಟೆಯಾದರೆ, ಪಾರಮಾರ್ಥಿಕ ಬದುಕಿನಲ್ಲೂ ವೈರಾಗ್ಯದ ವೇಷಧರಿಸಿ ಆಸೆ-ಆಮಿಷಕ್ಕೆ ಒಳಗಾದ ವಿರಾಗಿಗಳೆಂಬವರ ನಡೆಯನ್ನು ಖಂಡಿಸುತ್ತಿದ್ದಾನೆ. ಅಲ್ಲಮ, ಇಲ್ಲಿ ವಿರಾಗಿಗಳು ನೈಜ ನಡೆಯಲ್ಲಿ ಸಾಗಿ ಪಾರಮಾರ್ಥಿಕ ತತ್ತ್ವ-ಸತ್ಯವನ್ನು ಹೊಂದದೆ ಆಸೆಬುರುಕರಾಗಿ ಲೌಕಿಕ ಆಸೆ-ಆಮಿಷಗಳಿಗೆ ಬಲಿಯಾದರೆ ಅದು ಆನೆಯ ವೇಷವ ತೊಟ್ಟ ನಾಯಿಯ ಬಾಳಿನಂತೆ ವ್ಯರ್ಥವಾಗುತ್ತದೆಂದು ಎಚ್ಚರಿಸುತ್ತಿದ್ದಾನೆ. ಲೌಕಿಕ ಬದುಕಿನಲ್ಲೇ ಆಗಲೀ ಪಾರಮಾರ್ಥಿಕ ಬದುಕಿನಲ್ಲೇ ಆಗಲೀ ಮಾನವ ಆಸೆ ಎಂಬ ಮಾಯೆಯ ಹಿಡಿತಕ್ಕೆ ಸಿಲುಕಿ ತನ್ನ ಬದುಕನ್ನು ವೃಥಾ ಹಾಳುಮಾಡಿಕೊಳ್ಳಬಾರದೆಂಬ ಅರಿವು ಇಲ್ಲಿದೆ.

ವೇದ ವೇಧಿಸಲರಿಯದೆ ಕೆಟ್ಟವು
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು
ಪುರಾಣ ಪೂರೈಸಲರಿಯದೆ ಕೆಟ್ಟವು
ಹಿರಿಯರು ತಮ್ಮ ತಾವು ಅರಿಯದೆ ಕೆಟ್ಟರು
ತಮ್ಮ ಬುದ್ಧಿ ತಮ್ಮನೇ ತಿಂದಿತು.
ನಿಮ್ಮನೆತ್ತ ಬಲ್ಲರೊ ಗುಹೇಶ್ವರಾ ?

ಕರ್ಮಪರವಾದ ವೇದಗಳು ಬಾಹ್ಯಕರ್ಮಗಳಾದ ಹೋಮ-ಹವನ, ಯಜ್ಞ-ಯಾಗಾದಿಗಳನ್ನು ವಿವರಿಸುವ ಮತ್ತು ಮಾಡುವ ಕಾರ್ಯಭಾರದಲ್ಲಿ ವಿರಮಿಸಿದವೇ ಹೊರತು ಪರಾತ್ಪರ ಸತ್ಯವನ್ನು ತಿಳಿಯುವ ಗೋಜಿಗೆ ಹೋಗಲಿಲ್ಲ. ಶಾಸ್ತ್ರಗಳು ಒಣತತ್ತ್ವ-ಸಿದ್ಧಾಂತಗಳ ಖಂಡನೆ-ಮಂಡನೆಗಳಲ್ಲಿ ತರ್ಕ-ವಿತರ್ಕಗಳಲ್ಲಿ ಕಾಲಹರಣ ಮಾಡಿದವೇ ಹೊರತು ದೈವದ ಅರಿವನ್ನು ಹೊಂದದೆ ಕೆಟ್ಟವು. ಪುರಾಣಗಳು ದೇವತೆಗಳ ಕಥಾರಂಜನೆಯಲ್ಲಿ ಕಾಲಹರಣ ಮಾಡಿದವೇ ಹೊರತು ದೇವರ ಅಸ್ತಿತ್ವ ಕುರಿತು ದರ್ಶನರೂಪದಲ್ಲಿ ವಿಚಾರಮಂಡನೆ ಮಾಡಲಿಲ್ಲ. ಶಬ್ದಪಾಂಡಿತ್ಯದ ಗಿಳಿಪಾಠದ ಪಂಡಿತವರ್ಗ ತಾವು ಎಲ್ಲವನ್ನೂ ಬಲ್ಲವರು, ಎಲ್ಲರಿಗೂ ಅಧಿಕ ಹಿರಿಯರೆಂಬ ಭ್ರಮೆ ಅಹಂಕಾರಕ್ಕೆ ಒಳಗಾಗಿ ದೈವದ ನಿಜಸ್ವರೂಪ ಮತ್ತು ತತ್ತ್ವವನ್ನು ತಿಳಿಯದೆ ಕೆಟ್ಟುಹೋದರೆಂದು ಅಲ್ಲಮ ಖಂಡಿಸುತ್ತಿರುವನು. ಹೀಗೆ ವೇದ ಶಾಸ್ತ್ರ ಪುರಾಣಗಳ ಕೃತಕತೆ ಮತ್ತು ನಿಷ್ಫಲತೆಯನ್ನು, ಸತ್ವರಹಿತ ಪಂಡಿತವರ್ಗದವರ ಒಣಜಂಭವನ್ನು ಅಲ್ಲಮ ಇಲ್ಲಿ ಟೀಕಿಸುತ್ತಿರುವನು.

ಹುಸಿಯುಳ್ಳಾತ ಭಕ್ತನಲ್ಲ, ಬಾಧೆಯುಳ್ಳಾತ ಜಂಗಮನಲ್ಲ,
ಆಸೆಯುಳ್ಳಾತ ಶರಣನಲ್ಲ. ಇಂತಪ್ಪ ಆಸೆ ಹುಸಿ ಬಾಧೆಯ ನಿರಾಕರಿಸಿ
ಇರಬಲ್ಲಡೆ ಗುಹೇಶ್ವರಾ ನಿಮ್ಮ ಶರಣ

ಲೌಕಿಕಪ್ರಪಂಚದಲ್ಲಿಯಾಗಲೀ, ಪಾರಮಾರ್ಥಿಕದಲ್ಲಾಗಲೀ 'ಹುಸಿ' ಎಂಬುದು ಇರಬಾರದು. ಹುಸಿ ಮನುಷ್ಯನ ಬದುಕಿನ ಮಹಾಶತ್ರು. ಸುಳ್ಳು, ವಂಚನೆಯಿಂದ ಕೂಡಿದ ನಡೆ ನಾಶಕ್ಕೆ ಬುನಾದಿಯಾಗುತ್ತದೆಯೇ ಹೊರತು ಬದುಕಿಗೆ ಆಸರೆಯನ್ನು ನೀಡುವುದಿಲ್ಲ. ರಾಗದ್ವೇಷಾದಿ ಕ್ಲೇಶವುಳ್ಳವರು, ಜಾತಿ-ಮತಗಳ ಭೇದಭಾವವಿದ್ದರು ವೈರಾಗ್ಯಸಂಪನ್ನರಾದ ನೈಜ ಜಂಗಮನಾಗಲು ಸಾಧ್ಯವಿಲ್ಲ. 'ಜಂಗಮ' ಎಂದರೆ ಎಲ್ಲ ಭೇದಭಾವದ ಭಾದೆಗಳಿಂದ ಬಿಡಿಸಿಕೊಂಡು ಸಮತೆ ಶಾಂತಿಗುಣವನ್ನು ಹೊಂದಿದ ನಡೆದಾಡುವ ದೇವರೆಂದೇ ಹೇಳಬಹುದು. ಲೌಕಿಕ ಆಶೆ-ಆಮಿಷಗಳನ್ನು ಅಂತರಂಗದಲ್ಲಿ ಹೊಂದಿ ಅದಕ್ಕಾಗಿ ಹಪಹಪಿಸುವ ಚಂಚಲಬುದ್ಧಿಯ ವ್ಯಕ್ತಿ ಶರಣನಾಗಲು ಸಾಧ್ಯವಿಲ್ಲ. ಎಲ್ಲ ಆಸೆಗಳ ಹಂಗು ತೊರೆದವನು ಮತ್ತು ದೈವಪ್ರಾಪ್ತಿಯ ಹಂಬಲದಲ್ಲಿದ್ದವನು ಲಿಂಗಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವನು ಮಾತ್ರ ನೈಜ ಶರಣನಾಗುತ್ತಾನೆ. ಲೌಕಿಕ ಆಸೆ-ಆಮಿಷಗಳ ಬಂಧನದಲ್ಲಿರುವವನು ಎಂದಿಗೂ ಶರಣನಾಗನು. ಹೀಗೆ ಹುಸಿ, ಭಾದೆ, ಆಸೆಯನ್ನು ನಿರಾಕರಿಸಿ ಇರಬಲ್ಲವನೇ ಶರಣ ಎಂಬ ಅರಿವನ್ನು ತಿಳಿಸುತ್ತಿದ್ದಾನೆ, ಅಲ್ಲಮ.

> ಆಸೆಯೆಂಬ ಕೂಸನೆತ್ತಲು,
> ರೋಷವೆಂಬ ತಾಯಿ ಮುಂದೆ ಬಂದಿಪ್ಪಳು ನೋಡಾ -
> ಇಂತೀ ಎರಡಿಲ್ಲದ ಕೂಸನೆತ್ತ ಬಲ್ಲಡೆ
> ಆತನೇ  ಲಿಂಗೈಕ್ಯನು ಗುಹೇಶ್ವರಾ.

ಆಸೆಯೆಂಬ ಕೂಸನ್ನು ರಕ್ಷಿಸಲು ರೋಷವೆಂಬ ತಾಯಿ ಸದಾ ಮುಂದಿರುವಳು. ಆಸೆ ಎಂಬ ಕೂಸಿಗೆ ಏನಾದರೂ ತೊಂದರೆ ಅಡ್ಡಿಯಾದರೆ ರೋಷವೆಂಬ ತಾಯಿ ಅದನ್ನು ರಕ್ಷಿಸಲು ಕೂಡಲೇ ಧಾವಿಸುವಳು. ಆಸೆಗೂ ರೋಷಕ್ಕೂ ಒಂದು ಬಗೆಯ ಮಗು-ತಾಯಿಯ ಅನ್ಯೋನ್ಯ ಸಂಬಂಧ ಯಾವಾಗಲೂ ಇರುತ್ತದೆ. ಆಶಾಭಂಗವಾಗುವ ಸಂದರ್ಭ ಬಂದರೆ ರೋಷ ಅದನ್ನು ತಡೆದು ನಿಲ್ಲಿಸಲು ಸದಾ ಹವಣಿಸುತ್ತದೆ. ಲೌಕಿಕ ನೆಲೆಯ ಈ ಆಸೆ-ರೋಷವನ್ನು ನೀಗಿಕೊಂಡರೆ ಇಹದ ಬದುಕು ಹಸನಾಗುತ್ತದೆ ಮಾತ್ರವಲ್ಲ ಪಾರಮಾರ್ಥಿಕ ಜೀವನವೂ ಸಾರ್ಥಕವಾಗುತ್ತದೆಂಬ ಅರಿವು ಇಲ್ಲಿರುವುದನ್ನು ಕಾಣಬಹುದು. ಹಾಗಾಗಿ ಮಾನವ ಬದುಕಿನ ಶತ್ರುವಾದ ಆಸೆ-ರೋಷವನ್ನು ತ್ಯಜಿಸುವುದು ಸರ್ವರೀತಿಯಿಂದಲೂ ಸೂಕ್ತವಾದುದು.

> ಬಾಯೆ ಭಗವಾಗಿ ಕೈಯೆ ಇಂದ್ರಿಯವಾಗಿ
> ಹಾಕುವ ತುತ್ತುಗಳೆಲ್ಲಾ ಬಿಂದು ಕಾಣಿರೊ !
> ಪಥಮ ವಿಷಯವಿಂತಿರಲಿಕೆ, ಗುಹೇಶ್ವರ ಏಕೋ ಅದ್ವೈತ!

ಅಲ್ಲಮನು ಈ ವಚನದಲ್ಲಿ ಸ್ತ್ರೀ-ಪುರುಷರ ಸಂಭೋಗಕ್ರಿಯೆಯನ್ನು ಉಣ್ಣುವ,

ತಿನ್ನುವ ಕ್ರಿಯೆಗೆ ಅನ್ವಯಿಸಿ ಹೇಳಿರುವುದು ಅಚ್ಚರಿ ಮೂಡಿಸುತ್ತದೆ. ಬಾಯಿ ಭಗವಾಗಿ, ಕೈ ಇಂದ್ರಿಯವಾಗಿ, ಕೂಳಿನ ತುತ್ತು ಬಿಂದುವಾಗುವುದು ಹೊಸ ಪರಿಕಲ್ಪನೆ. ಲೌಕಿಕನೆಲೆಯ ಸಂಸಾರದ ಸಂಭೋಗಕ್ರಿಯೆ ಮತ್ತು ಅದು ನೀಡುವ ಆನಂದ, ಆಹಾರಸೇವನೆ ಮತ್ತು ಅದು ಕೊಡುವ ಸುಖ, ತೃಪ್ತಿ- ಇವುಗಳಲ್ಲೇ ಸಾಮಾನ್ಯ ಮಾನವ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಲು ಹವಣಿಸುತ್ತಾನೆ. ಇದು ಆತನಿಗೆ ಸಹಜವೂ ಹೌದು. ಆದರೆ ಅಲೌಕಿಕ ನೆಲೆಯ ಯೋಗಿ ಕೇವಲ ಸಾಂಸಾರಿಕವಾದ ಭೋಗಸುಖಗಳಲ್ಲಿ ತನ್ಮಯವಾದರೆ ಅವನಿಗೆ ಪರತತ್ವದ ಪ್ರಾಪ್ತಿ ಅಸಾಧ್ಯ. ಹಾಗಾಗಿ ಅಲ್ಲಮ ಈ ವಚನದಲ್ಲಿ ಯೋಗಿಗಳನ್ನು ಅವರ ಸಾಂಸಾರಿಕ ಆಸಕ್ತಿಯನ್ನು ವಿಡಂಬಿಸುತ್ತಿದ್ದಾನೆಂದು ಹೇಳಬಹುದು.

ಡಿ.ಆರ್. ನಾಗರಾಜ್ ಅವರು ಅಭಿನವಗುಪ್ತ ಉನ್ನತೀಕರಿಸುವ ಕೌಳತಾಂತ್ರಿಕ ವಿದ್ಯೆಯಲ್ಲಿ ಸಂಭೋಗಕ್ಕೆ ಇರುವ ಮಹತ್ವ ತಾತ್ವಿಕಾರ್ಥ ಮತ್ತು ಆಧ್ಯಾತ್ಮಿಕ ಸಾಂಕೇತಿಕತೆಯನ್ನು ವಿಡಂಬಿಸುವ ಹಂಬಲ ಅಲ್ಲಮನ ಈ ವಚನದಲ್ಲಿ ಕಾಣಿಸುತ್ತದೆಂದು ಹೇಳುತ್ತಾರೆ. ಕೌಳತಾಂತ್ರಿಕತೆಯಲ್ಲಿ ಗಂಡು-ಹೆಣ್ಣಿನ ಸಂಭೋಗವನ್ನು ಆಧ್ಯಾತ್ಮಿಕ ಜ್ಞಾನದ ವಾಹಕವೆಂದು ಹೇಳಲಾಗಿದೆ. ಈ ಪ್ರಕ್ರಿಯೆಯಲ್ಲಿ ಮಾನವಯೋಗಿಣಿಯ ಯೋನಿಯನ್ನು ಬಾಯಿಯೆಂದು ಗುರುತಿಸಲಾಗಿದೆ. ಆಧ್ಯಾತ್ಮಿಕ ಜ್ಞಾನವೆನ್ನುವುದು ಸಂಭೋಗಕ್ರಿಯೆಯ ಮೂಲಕ ಅಲ್ಲಿಂದ ಹರಿದುಬರುತ್ತದೆಂದು ತಿಳಿಯಲಾಗಿದೆ. ಮಿಥುನ ಸಂದರ್ಭದಲ್ಲಿ ಉಂಟಾಗುವ ಆನಂದ, ಆಧ್ಯಾತ್ಮ ಆನಂದಕ್ಕೆ ಸಮವಾದುದೆಂಬ ಅನಿಸಿಕೆ ಅಭಿನವಗುಪ್ತನದು. ಸಂಭೋಗಕ್ರಿಯೆಯ ಆನಂದಾನುಭೂತಿಯಲ್ಲಿ ಗಂಡು-ಹೆಣ್ಣಿನ ಭಿನ್ನವೆಂಬ ದ್ವೈತಭಾವ ಅಳಿದು ಇಬ್ಬರ ಶರೀರ, ಮನ, ಆತ್ಮ ಒಂದಾಗಿ ಬೆರೆತ ಅದ್ವೈತ ಸ್ಥಿತಿ ಉಂಟಾಗುತ್ತೆಂದು ತಿಳಿಯಲಾಗಿದೆ. ಆದುದರಿಂದ ಇದನ್ನು ಒಪ್ಪದ ಅಲ್ಲಮ, ಯೋಗಿಣಿಯ ಯೋನಿ ಜ್ಞಾನದ ಬಾಯಿ ಎಂಬ ಈ ಪರಿಕಲ್ಪನೆಯನ್ನು ಅಲ್ಲಗಳೆದು ಅದಕ್ಕೆ ಪ್ರತಿಕ್ರಿಯಾರೂಪದಲ್ಲಿ 'ಬಾಯೆ ಭಗ' ಎಂಬ ಮಾತನ್ನು ಹೇಳುತ್ತಿದ್ದಾನೆ. (ಡಿ.ಆರ್. ನಾಗರಾಜ್ : ಅಲ್ಲಮ ಮತ್ತು ಶೈವ ಪ್ರತಿಭೆ) ಅಲ್ಲಮ ಇಲ್ಲಿ ದೈಹಿಕ ಸುಖ ಮತ್ತು ಶರೀರದ ಪ್ರಾಮುಖ್ಯತೆಯ ವಿಚಾರವನ್ನು ಅಲ್ಲಗಳೆಯುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲಮನಿಗೇನಿದ್ದರೂ ಶರೀರ, ದೈವಸಾನ್ನಿಧ್ಯವನ್ನು ಪಡೆವ ಮಾಧ್ಯಮ ಮಾತ್ರ.

ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯನೇರ ಬಯಸುವರು,
ವೀರರೂ ಅಲ್ಲ, ಧೀರರೂ ಅಲ್ಲ, ಇದು ಕಾರಣ
ನೆರೆ - ಮೂರು ಲೋಕವೆಲ್ಲವೂ

ಹಲ್ಲಣವ ಹೊತ್ತುಕೊಂಡು, ತೊಳಲುತ್ತ ಇದ್ದಾರೆ.
ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು ?

ಇಲ್ಲಿ ಕೊಟ್ಟ ಕುದುರೆ ಎಂದರೆ ನಮ್ಮ ಪಾಲನೆಗೆ ಬಂದ ಜವಾಬ್ದಾರಿ ಎಂದರ್ಥ. ನಮ್ಮ ಹೆಗಲೇರಿದ ಜವಾಬ್ದಾರಿಯನ್ನು ಸರಿಯಾಗಿ, ಸಮರ್ಥವಾಗಿ, ಜಾಣ್ಮೆಯಿಂದ ನಿಭಾಯಿಸಬೇಕೇ ಹೊರತು ಆ ಕುದುರೆಯಲ್ಲಿ ಏನೋ ದೋಷವಿದೆ ಎಂದು ತಿಳಿದು ಇನ್ನೊಂದು ಕುದುರೆ ಅಥವಾ ಜವಾಬ್ದಾರಿ ಬೇಕೆಂದು ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ. ಹಾಗಾಗಿ ವೀರನಾದವನು ತನ್ನ ಪಾಲಿಗೆ ಬಂದ ಜವಾಬ್ದಾರಿಯನ್ನು ಘನತೆಯಿಂದ ಸಮರ್ಥವಾಗಿ ನಿಭಾಯಿಸಬೇಕು. ಇದು ವೀರನ ಲಕ್ಷಣ. ಆದರೆ ಕೆಲವರು ತಮ್ಮ ಪಾಲಿಗೆ ಬಂದ ಕೆಲಸ, ಜವಾಬ್ದಾರಿಯನ್ನು ಸರಿಯಾಗಿ ಸಮರ್ಥವಾಗಿ ನಿರ್ವಹಿಸದೆ, ಅದು ಸರಿಯಾಗಿಲ್ಲವೆಂದು ಹೇಳಿ ಇನ್ನೊಂದು ಬೇರೆ 'ಕುದುರೆ' ಅಂದರೆ ಜವಾಬ್ದಾರಿಯನ್ನು ಬೇಡುವುದು ವೀರನ ಲಕ್ಷಣವಲ್ಲವೆಂದು ಅಲ್ಲಮಪ್ರಭುಗಳು ಹೇಳುತ್ತಿದ್ದಾರೆ. ಹಾಗಾಗಿ ಕೊಟ್ಟ ಕುದುರೆಯನ್ನು ಏರಲರಿಯದ ಜನ ಕುದುರೆಯ ಬೆನ್ನಿನ ಮೇಲೆ ಹಾಕುವ ಜೀನನ್ನು ತಾವೇ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಬಳಲುತ್ತಿದ್ದಾರೆ, ಅನವರತ. ಕುದುರೆ ಏರಿ ಅದರ ಮೇಲೆ ಸವಾರಿ ಮಾಡಬೇಕಾದವನು ತನ್ನ ಅಸಮರ್ಥತೆಯಿಂದ ಕುದುರೆಯ ಜೀನನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ತಿರುಗುವ ಹೀನ ಪರಿಸ್ಥಿತಿ ಬರುವುದು ಯಾರಿಗೂ ಬೇಡವೆಂಬ ಅಭಿಪ್ರಾಯವಿದೆ, ಇಲ್ಲಿ. ಸಾಂಸಾರಿಕ ಜವಾಬ್ದಾರಿಯನ್ನು ಸಮರ್ಥವಾಗಿ ಜಾಣ್ಮೆಯಿಂದ ನಿರ್ವಹಿಸದ ವ್ಯಕ್ತಿ, ಆಧ್ಯಾತ್ಮಿಕ ಅರಿವನ್ನು ಪಡೆಯಲು ಹೇಗೆ ಸಾಧ್ಯ? ಎಂಬ ಅಲ್ಲಮನ ಪ್ರಶ್ನೆ ಸರಿಯಾದ ವಿವೇಕಯುತವಾದ ಪ್ರಶ್ನೆ. ಲೌಕಿಕ ಬದುಕನ್ನು ಅದರ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ ಧೀರನು ಮಾತ್ರ ಪಾರಮಾರ್ಥಿಕ ಅರಿವನ್ನೂ ಪಡೆಯಬಲ್ಲ. ಲೌಕಿಕಾನುಭವದ ಮೂಲಕವೇ ಪಾರಮಾರ್ಥಿಕ ಅನುಭಾವ ಸಾಧ್ಯವೆಂಬ ಅರಿವು ಇಲ್ಲಿನದು.

**ಪರಾಮರ್ಶನ ಸಾಹಿತ್ಯ**

1. ಅಲ್ಲಮನ ವಚನ ಚಂದ್ರಿಕೆ : ಸಂ: ಎಲ್. ಬಸವರಾಜು, 2001
2. ಪ್ರಭುದೇವರ ಷಟ್ಸ್ಥಲದ ವಚನಗಳು : ಎಲ್. ಬಸವರಾಜು, 2005
3. ಅಲ್ಲಮಪ್ರಭುದೇವರ ವಚನ-ನಿರ್ವಚನ : ಶ್ರೀ ಸಿದ್ಧೇಶ್ವರ ಸ್ವಾಮಿಗಳು, 2001
4. ಅಲ್ಲಮಪ್ರಭು ಮತ್ತು ಶೈವಪ್ರತಿಭೆ : ಡಿ.ಆರ್. ನಾಗರಾಜ್, 1999
5. ಕನ್ನಡ ಸಾಹಿತ್ಯ ಚರಿತ್ರೆ : ಸಂ. 4, ಪ್ರ.ಸಂ: ಡಾ. ಹಾ.ಮಾ. ನಾಯಕ್, 1977

□

ಶ್ರೀ ಗೌರೀಶಂಕರ ಮಹಾಸ್ವಾಮಿ ವಿರಚಿತ

# ಬಸವಾನಂದಲಹರೀ

---

ಅನುವಾದ ಮತ್ತು ವಿವರಣೆ
ವಿದ್ವಾನ್ ಎಚ್.ವಿ. ನಾಗರಾಜರಾವ್

(ಹಿಂದಿನ ಸಂಚಿಕೆಯಿಂದ)

೩೪

### ಶಾರ್ದೂಲವಿಕ್ರೀಡಿತ ವೃತ್ತ

ದುರ್ವ್ಯಾಪಾರಗಣೋಲ್ಬಣಾಗಣಿತಸಂತಾಪೇನ ಯತ್ಸ್ವೇದವಾ-
ರ್ಗಾತ್ರೇ ಕಂಪನಮಾರ್ತಿರೋದನಮಹೋ ಮೂರ್ಛಾ ವಚೋ ಗದ್ಗದಮ್ |
ತ್ವತ್ಸೇವಾಜನಿತಂ ಗುರೋಽಖಿಲಮಪಿ ಜ್ಞಾತ್ವೈತದಾರ್ತಂ ಸದಾ
ರಕ್ಷ ಶ್ರೀಬಸವೇಶ ಮಾಂ ಪರಿಭವಾತ್ ಸರ್ವೇಶ ಮದ್ವಲ್ಲಭ ||

**ಅನುವಾದ**

ನನಗೆ ಪ್ರಿಯನಾದ ಸರ್ವೇಶ್ವರ ಬಸವ, ಕೆಟ್ಟ ಕೆಲಸಗಳ ಗಡಣದ ಉಲ್ಬಣಾವಸ್ಥೆಯಿಂದ ಹುಟ್ಟಿದ ಅಪಾರವಾದ ಸಂತಾಪದಿಂದ ನನ್ನ ಮೈಯಲ್ಲಿ ಬೆವರಿನ ನೀರು ಹರಿಯುತ್ತಿದೆ. ನಡುಕ, ನೋವು, ಗೋಳಾಟ, ಮೂರ್ಛೆ, ಗದ್ಗದವಾದ ಮಾತು ಇವೆಲ್ಲವೂ ಆಗುತ್ತಿವೆ. ಎಲೈ ಗುರುವೆ, ಇದೆಲ್ಲವೂ ನಿನ್ನ ಸೇವೆಯಿಂದ ಉಂಟಾದುದೆಂದು ಭಾವಿಸಿ ಆರ್ತನಾದ ನನ್ನನ್ನು ಅನಾದರದ ದೆಸೆಯಿಂದ ಕಾಪಾಡು.

**ವಿವರಣೆ**

ಭಕ್ತನು ತನ್ನ ಕೆಲಸಕಾರ್ಯಗಳಿಂದ ಬೆವರಿ ಬೆಂಡಾಗಿ ಬಳಲಿದ್ದರೂ ಬಸವೇಶ್ವರನು ಈ ಶ್ರಮವೆಲ್ಲಾ ನನ್ನ ಸೇವೆಗಾಗಿ ದುಡಿದಿದ್ದರಿಂದ ಉಂಟಾಯಿತು ಎಂದು ಕರುಣೆಯಿಂದ ರಕ್ಷಿಸಲಿ ಎಂದು ಕಳಕಳಿಯ ಬಿನ್ನಹ ಇಲ್ಲಿದೆ.

೩೫

### ಶಾರ್ದೂಲವಿಕ್ರೀಡಿತ ವೃತ್ತ

ಉದ್ವಿಗ್ನಾತ್ ಕೃತಮಾಲಮಂಜರಮಹೋ ಸಾರೋಪಹಾರಂ ತತೋ
ಲಬ್ಧ್ವಾ ಸುಗ್ಗಮುದಾರಭೂರಿಕೃಪಯಾ ಪೀಯೂಷಧಾನ್ಯಾ ದೃಶಾ |

---

ವಿದ್ವಾನ್ ಎಚ್.ವಿ. ನಾಗರಾಜರಾವ್, ನಂ. 90, 9ನೇ ಕ್ರಾಸ್, ನವಿಲು ರಸ್ತೆ, 'ಎ' ಮತ್ತು 'ಬಿ' ಬ್ಲಾಕ್, ಕುವೆಂಪುನಗರ, ಮೈಸೂರು

**ದುರ್ವಾದಿಪ್ರಕರಾದವನ್ ಬಸವ ತೇ ಶೀಲಂ ವ್ಯತಾನೀದ್ ಭವಾನ್**
**ಇತ್ಯಸ್ಮಾತ್ ಕರುಣಾಕರೇ ತ್ವಯಿ ಮನೋ ಮೇ ಶಂಕರೇ ಸ್ನಿಹ್ಯತಿ ||**

**ಅನುವಾದ**

ಬಸವೇಶ್ವರ, ಸುಗ್ಗನೆಂಬ ಭಕ್ತನು ಗಾಬರಿಯಿಂದ ತಪ್ಪು ಮಾಡಿದರೂ ಅವನನ್ನು ದುರ್ವಾದಿಗಳ ಗುಂಪಿನಿಂದ ಅಮೃತವನ್ನು ಸುರಿಸುವ ಕಣ್ಣನೋಟದಿಂದ ರಕ್ಷಿಸಿದ ನೀನು ನಿನ್ನ ಉನ್ನತ ಶೀಲವನ್ನು ಮೆರೆಸಿರುವೆ. ಹೀಗೆ ಕರುಣಾಕರನೂ ಶುಭಕರನೂ ಆದ ನಿನ್ನಲ್ಲಿ ನನ್ನ ಮನಸ್ಸು ಮೈತ್ರಿಯನ್ನು ಹೊಂದಿದೆ.

**ವಿವರಣೆ**

ಇಲ್ಲಿ ಸುಗ್ಗನೆಂಬ ಭಕ್ತನ ಕಥೆಯನ್ನು ಸೇರಿಸಿರುವಂತೆ ತೋರುತ್ತದೆ. ಆದರೆ 'ಮಾಲಪಂಜರ' ಎಂಬ ಪದದ ಅರ್ಥ ಸ್ಪಷ್ಟವಾಗಿಲ್ಲ. ವಿದ್ವಾಂಸರು ಇದರ ಬಗೆಗೆ ಬೆಳಕನ್ನು ಚೆಲ್ಲಬೇಕೆಂದು ಕೋರುತ್ತೇವೆ.

೩೬

**ಶಾರ್ದೂಲವಿಕ್ರೀಡಿತ ವೃತ್ತ**

**ದ್ರೋಹಾದೋಕಸಿ ವಹ್ನಿಸಂವೃತಪದೇ ಬೌದ್ಧಸ್ಯ ಕೀರಃ ಕ್ಷಣಾದ್**
**ಉಡ್ಡೀನಶ್ಚರಮೇತ್ಯ ತೇನ ನಿಲಯಂ ತೇ ಯಾತಿ, ದುರ್ವಾದಿಭಿಃ |**
**ತ್ವಂ ಸರ್ವಾಂಚಿತಲಿಂಗವಾನ್ ಪ್ರಹಸಿತೋ ಲಿಂಗಂ ಗಲೇ ತಸ್ಯ ಸ-**
**ಲ್ಲಿಂಗಾರ್ಚಾರ್ಪಣಸಾಹಸೋ ಬಸವ ತೇ ಸಂದರ್ಶಿತೋ ಲೀಲಯಾ ||**

**ಅನುವಾದ**

ಯಾರೋ ಮಾಡಿದ ದ್ರೋಹದಿಂದ ಬೌದ್ಧನ ಮನೆಗೆ ಬೆಂಕಿ ಬಿದ್ದಾಗ ಅವನ ಗಿಳಿ ಅಲ್ಲಿಂದ ಹಾರಿ ತಪ್ಪಿಸಿಕೊಂಡು ಒಬ್ಬ ಜಂಗಮನ ಬಳಿಗೆ ಬಂದು ಅವನೊಡನೆ ನಿನ್ನ ಮನೆಗೆ ಬಂತು.

ಬಸವ, ಎಲ್ಲೆಲ್ಲೂ ಲಿಂಗವನ್ನು ಪೂಜಿಸಿದ ನಿನ್ನನ್ನು ದುರ್ವಾದಿಗಳು ಅಪಹಾಸ್ಯಕ್ಕೆ ಈಡುಮಾಡಿದರು. ಆಗ ನೀನು ಆ ಗಿಳಿಯ ಕತ್ತಿನಲ್ಲೂ ಲಿಂಗವನ್ನು ತೋರಿಸಿದೆ. ಹೀಗೆ ಸರ್ವರಿಗೂ ಇಷ್ಟಲಿಂಗವನ್ನು ಅರ್ಪಿಸಿದ ಸಾಹಸವನ್ನು ನೀನು ಲೀಲೆಯಿಂದ ಪ್ರದರ್ಶಿಸಿದೆ.

**ವಿವರಣೆ**

ಲಿಂಗವಂತರಿಗೇ ಪ್ರವೇಶವಿದ್ದ ಬಸವಣ್ಣನ ಮನೆಯಲ್ಲಿ ಲಿಂಗವಿಲ್ಲದ ಗಿಳಿ ಹೇಗೆ ಪ್ರವೇಶವನ್ನು ಪಡೆಯಿತು? ಎಂದು ದುರ್ವಾದಿಗಳಾದ ಬೌದ್ಧರು ಗಲಾಟೆ ಮಾಡಿದಾಗ

ಬಸವಣ್ಣ ತನ್ನ ಮಹಿಮೆಯಿಂದ ಆ ಗಿಳಿಯ ಕುತ್ತಿಗೆಯಲ್ಲೂ ಇಷ್ಟಲಿಂಗವಿರುವುದನ್ನು ತೋರಿಸಿದನೆಂದು ಐತಿಹ್ಯವನ್ನಿಲ್ಲಿ ಸ್ಮರಿಸಬೇಕು.

೩೭

**ಶಾರ್ದೂಲವಿಕ್ರೀಡಿತ ವೃತ್ತ**

**ಸಂರಂಭಾಚ್ಛಿವನಾಗನಾಥಕರತಃ ಪೀಯೂಷಧಾರಾಂ ಪರಾಮ್**
**ಆನಂದೇನ ಚ ಸೋಮಪಾದನಖತೋ ಗಾಂಗಂ ಪಯಸ್ತ್ವನ್ನತಃ |**
**ಉದ್ದಾಮಂ ಮಧುಮಂದಿರಂ ಪಶುಪತೇ ಪೂಜ್ಯಂ ಗಿರಾ ಕುರ್ವತಃ**
**ಧೋ ಧೋ ಶ್ರೀಬಸವೇಶ ತೇ ನಹಿ ಗುಣಾನ್ ಸ್ತೋತುಂ ವಯಂ ಶಕ್ನುಮಃ ||**

**ಅನುವಾದ**

ಎಲೈ ಬಸವೇಶ್ವರ, ಶಿವನಾಗನಾಥನ ಕೈಯಿಂದ ಸಮೃದ್ಧವಾದ ಅಮೃತದ ಧಾರೆಯನ್ನು ಹರಿಸಿದೆ. ಆನಂದದಿಂದ ಸೋಮಪಾದನ ಉಗುರಿನಿಂದ ಗಂಗೆಯ ನೀರನ್ನು ಉಕ್ಕಿಸಿದೆ. ಗಲಾಟೆಯಿಂದ ತುಂಬಿದ್ದ ಪಡಖಾನೆಯನ್ನು ಮಾತಿನಿಂದಲೇ ಪೂಜ್ಯಸ್ಥಳವನ್ನಾಗಿ ಮಾರ್ಪಡಿಸಿದೆ. ನಿನ್ನ ಗುಣಗಳನ್ನು ಸ್ತುತಿಸಲು ನಾವು ಶಕ್ತರಲ್ಲ.

**ವಿವರಣೆ**

ಇಲ್ಲಿ ಬಸವೇಶ್ವರರ ಜೀವಿತದಲ್ಲಿ ನಡೆದ ಹಲವು ಪವಾಡಗಳನ್ನು ಬಣ್ಣಿಸಿ ಅವರ ಅಗ್ಗಳಿಕೆಯನ್ನು ಸೂಚಿಸಲಾಗಿದೆ.

೩೮

**ಶಾರ್ದೂಲವಿಕ್ರೀಡಿತ ವೃತ್ತ**

**ಸಾರಾಚಾರವಿದೂಷಕಾನ್ ಪ್ರದಮಿತುಂ ರೇಮಾರ್ಯವೇಶ್ಮಾಂತರೇ**
**ತ್ವಂ ಭಿತ್ತೌ ಲಿಖಿತಃ ಪ್ರಮಾಣವಚನಂ ಪ್ರೋಕ್ತೋऽಸಿ ಮನ್ನಾಥ ಯತ್ |**
**ಕಾಸಾರೇ ಪ್ರತಿವಾದಮಾತ್ಥ ಭಗವನ್ ಪಂಕೇಜವಕ್ತ್ರೇ ಭೃಶಂ**
**ಮದ್ಬಂಧೋ ಬಸವೇಶ ತೇ ಗುಣಗಣಂ ಸ್ತೋತುಂ ವಯಂ ನೇಶ್ಮಹೇ ||**

**ಅನುವಾದ**

ಸಾರವತ್ತಾದ ಸದಾಚಾರವನ್ನು ದೂಷಿಸುವ ಜನರನ್ನು ಅಡಗಿಸಲು ರೇಮಾರ್ಯನ ಮನೆಯಲ್ಲಿ ನಿನ್ನ ಚಿತ್ರವನ್ನು ಗೋಡೆಯ ಮೇಲೆ ಬರೆದಿದ್ದರು. ನನ್ನೊಡೆಯ, ಬಸವೇಶ, ಆಚಾರಕ್ಕೆ ಪ್ರಮಾಣ ವಚನವನ್ನು ಹೇಳು ಎಂದು (ಪ್ರತಿವಾದಿಗಳು) ಕೇಳಿದರು. ಆಗ ನೀನು ಸರೋವರದಲ್ಲಿ ಕಮಲಗಳ ಮುಖದಿಂದಲೇ ಉತ್ತರವನ್ನು ನೀಡಿದೆ. ನಿನ್ನ ಗುಣಗಣಗಳನ್ನು ಹೊಗಳಲು ನಾವು ಸಮರ್ಥರಲ್ಲ.

**ವಿವರಣೆ**

ಈ ಪವಾಡದ ವರ್ಣನೆಯನ್ನು ಶಿವಶರಣ ಕಥಾರತ್ನಕೋಶದಲ್ಲಿ ನೋಡಬಹುದು.

೩೯

**ಶಾರ್ದೂಲವಿಕ್ರೀಡಿತ ವೃತ್ತ**

**ಆನಂದಾತ್ ಕರಪಂಕಜಂ ಬಸವ ತೇ ಸಮ್ಯಕ್ ಪ್ರಸಾರ್ಯ ಕ್ಷಣಾದ್**
**ಧನ್ಯಂ ಮಾಂ ಕುರು ದೀನನಾಥ ಭಗವನ್ ನೋಪೇಕ್ಷಣೀಯೋ ಹ್ಯಹಮ್|**
**ದೀನೇऽಸ್ಮಿನ್ನಭಿಲಾಷುಕೋ ಭವಸಿ ಕಾಂ ಕರ್ತುಂ ಪರೀಕ್ಷಾಂ ಪ್ರಭೋ**
**ಪಾಪೀ ಮನ್ನ ಪರಃ ಕೃಪಾಕರಗುಣಸ್ತ್ವನ್ನಾಪರೋ ವಿದ್ಯತೇ ||**

**ಅನುವಾದ**

ಭಗವನ್, ಬಸವೇಶ್ವರ, ನಿನ್ನ ಕೈಯೆಂಬ ತಾವರೆಯನ್ನು ಆನಂದದಿಂದ ಚಾಚಿ ಒಂದು ಕ್ಷಣದಲ್ಲಿ ನನ್ನನ್ನು ಧನ್ಯನನ್ನಾಗಿ ಮಾಡು. ದೀನರ ಒಡೆಯನೆ, ನನ್ನನ್ನು ಕಡೆಗಣಿಸಬೇಡ. ಪ್ರಭು, ದೈನ್ಯದಿಂದ ತುಂಬಿರುವ ನನ್ನ ವಿಷಯದಲ್ಲಿ ಯಾವ ಪರೀಕ್ಷೆಯನ್ನು ಮಾಡಬೇಕೆಂದಿರುವೆ? ನನಗಿಂತ ಹೆಚ್ಚು ಪಾಪಿಯೂ ಇಲ್ಲ. ನಿನಗಿಂತ ಹೆಚ್ಚು ಕರುಣಾಮಯನೂ ಇನ್ನೊಬ್ಬನಿಲ್ಲ.

**ವಿವರಣೆ**

ಹೆಚ್ಚು ತೀವ್ರವಾದ ರೋಗವುಳ್ಳವನಿಗೇ ವೈದ್ಯರು ಹೆಚ್ಚು ಗಮನ ಕೊಡುವಂತೆ ಅತ್ಯಂತ ಪಾಪಿಗಳ ಬಗೆಗೆ ಭಗವಂತನು ಆದ್ಯಗಮನವನ್ನು ನೀಡಬೇಕು. ಏಕೆಂದರೆ ಭಗವಂತ ಕರುಣಾಮಯ.

೪೦

**ಶಾರ್ದೂಲವಿಕ್ರೀಡಿತ ವೃತ್ತ**

**ಸತ್ಯಂ ವಚ್ಮಿ ಹಿತಾಯ ವಚ್ಮಿ ನಿಯತಂ ಸಾರಾಂ ಪುರಾಣಪ್ರಥಾಂ**
**ವೇದಾಂತಾಗಮಭೂರಿಸಾರರಸಿಕಾಃ ಶೃಣ್ವಂತು ಗಣ್ಯಂ ವಚಃ |**
**ಸಂಸಾರಾಮಯಘೋರತಾಪಶಮನಸ್ಫಾರೋರುಸಂಜೀವನಂ**
**ಸಿದ್ಧಂ ಶ್ರೀ ಬಸವೇಶನಾಮ ಜಗತಾಂ ಜೀವಾತವೇ ಕೇವಲಮ್ ||**

**ಅನುವಾದ**

ಸತ್ಯವನ್ನು ಹೇಳುತ್ತಿದ್ದೇನೆ, ಹಿತವಾಗಲೆಂದು ಹೇಳುತ್ತಿದ್ದೇನೆ. ಸಾರವತ್ತಾದ ಪುರಾಣಪ್ರಸಿದ್ಧವಾದ ವಿಷಯವನ್ನು ಹೇಳುತ್ತಿದ್ದೇನೆ. ಆಗಮಗಳ ಸಾರವನ್ನು ಸವಿಯುವುದರಲ್ಲಿ ಆಸಕ್ತರಾದ ರಸಿಕರು ಗಣ್ಯವಾದ ಈ ಮಾತನ್ನು ಕೇಳಿರಿ. ಸಂಸಾರವೆಂಬ

ರೋಗದಿಂದ ಉಂಟಾಗುವ ಘೋರವಾದ ನೋವನ್ನು ನೀಗಲು ಶ್ರೇಷ್ಠವಾದ ಸಂಜೀವನೌಷಧವಾಗಿರುವ 'ಬಸವೇಶ್ವರ' ಎಂಬ ಹೆಸರು ಜಗತ್ತಿನ ಪ್ರಾಣರಕ್ಷಣೆಗಾಗಿಯೇ ಇದೆ.

**ವಿವರಣೆ**

ಸಂಸಾರವೇ ಆಮಯ, ಬಸವೇಶನಾಮವೇ ಸಂಜೀವನೌಷಧ ಎಂದು ಅಭೇದಾರೋಪವಿರುವುದರಿಂದ ಇಲ್ಲಿ ರೂಪಕಾಲಂಕಾರ.

೪೧

**ಶಾರ್ದೂಲವಿಕ್ರೀಡಿತ ವೃತ್ತ**

**ಆನಂದಾಮೃತಸಾಗರೇ ಶುಭಕರೇ ಸಾರೇ ಪರೇ ಭಾಸುರೇ**
**ಸಾಕಾರೇ ಬಸವೇಶ್ವರೇ ನತಿಮರೇ ಸಂಧೇಹಿರೇ ಸುಂದರೇ |**
**ಕಲ್ಯಾಣಾದಿಗುಣಾಕರೇ ಗುರುವರೇ ಸರ್ವಾಂಕುರೇ ಶಂಕರೇ**
**ಸ್ಫಾರೇ ಸನ್ನತಸಾದರೇಽವನಪರೇ ಪಾರೇಭವಂ ಬಂಧುರೇ ||**

**ಅನುವಾದ**

ಎಲೈ ಮಾನವನೆ, ಆನಂದವೆಂಬ ಅಮೃತಕ್ಕೆ ಸಮುದ್ರನೂ ಶುಭವನ್ನುಂಟು ಮಾಡುವವನೂ, ಸಾರವತ್ತಾದವರಲ್ಲಿ ಶ್ರೇಷ್ಠನೂ, ಪ್ರಕಾಶಮಾನನೂ, ಒಳ್ಳೆಯ ಆಕಾರವುಳ್ಳವನೂ, ಸುಂದರನೂ, ಕಲ್ಯಾಣವನ್ನುಂಟುಮಾಡುವ ಗುಣಗಳ ನಿಧಿಯೂ, ಉತ್ತಮ ಗುರುವೂ, ಎಲ್ಲ ಶುಭದ ಮೊಳಕೆಯೂ, ಮಂಗಳಮಯನೂ, ವಿಶಾಲಹೃದಯನೂ, ಅಡ್ಡಬಿದ್ದವರಿಗೆ ಆದರವನ್ನು ತೋರುವವನೂ, ರಕ್ಷಕನೂ, ಸಂಸಾರದ ಪಾರವನ್ನು ದಾಟಿದವನೂ, ಹಿತಕಾರಿಯೂ ಆದ ಬಸವೇಶ್ವರನಿಗೆ ಪ್ರಣಾಮವನ್ನು ಮಾಡು.

**ವಿವರಣೆ**

ಇಲ್ಲಿ ಆನಂದಾಮೃತಸಾಗರೇ ಎಂಬ ಪದದಲ್ಲಿ ರೂಪಕಾಲಂಕಾರ. 'ರೇ' ಎಂಬ ಅಂತ್ಯ ಅಕ್ಷರದ ಪ್ರಾಸವೇ ಇಲ್ಲಿ ಮುಖ್ಯ ಉದ್ದೇಶ.

೪೨

**ಶಾರ್ದೂಲವಿಕ್ರೀಡಿತ ವೃತ್ತ**

**ನಿರ್ವಾಣೋರುಫಲಪ್ರದಾದ್ ಬಸವ ಚೇನ್ನ ತ್ವದ್ಗರೀಯಾನ್ ಪರಃ**
**ದೂರಂ ಕ್ಷುಲ್ಲಫಲಪ್ರದಾಂಶ್ಚ ಭಜಕಾಸ್ತೇಽನ್ಯಾನ್ ಜಹುಶ್ಚೇತ್ಸುರಾನ್ |**

**ಉದ್ದಾಮೈರ್ಯದಿ ತಾವಕೀನಚರಣನ್ಯಾಸೈಃ ಪ್ರಪೂತಾ ಮಹೀ**
**ತ್ವದ್ಭಕ್ತಾವಳಿಭಕ್ತಭಕ್ತಜನತಾಭಕ್ತೇನ ಕೋಽನ್ಯಸ್ಸಮಃ? ||**

**ಅನುವಾದ**

ಮೋಕ್ಷವೆಂಬ ದೊಡ್ಡ ಫಲವನ್ನು ಕೊಡುವಂಥ ನಿನಗಿಂತಲೂ ಹೆಚ್ಚಿನವರು ಇನ್ನು ಯಾರೂ ಇಲ್ಲ. ಬಸವೇಶ್ವರ, ಈ ಕಾರಣದಿಂದ ಕ್ಷುಲ್ಲಕ ಫಲಗಳನ್ನೇ ಕೊಡುವ ಇತರ ದೇವತೆಗಳನ್ನು ಭಕ್ತರು ದೂರದಿಂದಲೇ ತ್ಯಜಿಸುತ್ತಾರೆ. ನಿನ್ನ ಧೀರ ಹೆಜ್ಜೆಗಳಿಂದ ಈ ಭೂಮಿ ಪವಿತ್ರವಾಗಿದೆ. ಆ ಕಾರಣ, ನಿನ್ನ ಭಕ್ತಸಮೂಹದ ಭಕ್ತರ ಭಕ್ತರ ಭಕ್ತನಿಗೆ ಕೂಡ ಬೇರೆ ಯಾವನು ಸಮಾನನು?

**ವಿವರಣೆ**

ಪರಂಪರೆಯಿಂದ ಬಸವೇಶ್ವರನ ಭಕ್ತನಾದವನೂ ಕೂಡ ಇತರ ಜನರಿಗಿಂತ ಮೇಲು ಎಂದ ಮೇಲೆ ಸಾಕ್ಷಾತ್ ಬಸವಭಕ್ತನ ಅಗ್ಗಳಿಕೆಯನ್ನು ಬೇರೆ ಹೇಳಬೇಕೆ? ಆದ್ದರಿಂದ ಜನರಿಗೆ ಕ್ಷುದ್ರವಾದ ಫಲಗಳನ್ನು ಕೊಡುವ ಇತರ ದೇವತೆಗಳೇತಕ್ಕೆ ಎಂದು ಇಲ್ಲಿ ಆಶಯ.

೪೩

**ಶಾರ್ದೂಲವಿಕ್ರೀಡಿತ ವೃತ್ತ**

**ದರ್ಶಾಹೇ ಸಹಸಾ ಜಡಾನ್ ಘನಪುರೀಮಾರೇಣ ರಾಕಾಧುನೇ -**
**ತ್ಯುಕ್ತ್ವಾ ವಿಸ್ಮೃತಿತೋಽಪಹಾಸ್ಯನಿರತಾನ್ ಭಂಕ್ತುಂ ಸ್ವಯಂಸ್ತಾನ್ ಪುನಃ|**
**ಸ್ಮೃತ್ವಾ ತ್ವಾಂ ಬಸವೇಶ ಬಂಧುರವಿಧುಂ ವ್ಯೋಮ್ನಿ ವ್ಯತಾನೀತ್ತು ಯಃ**
**ತೇನ ತ್ವದ್‌ಭಜಕೇನ ದುರ್ಮದಜನಾಃ ಕೇ ವಾ ಸಮಾ ಮಾದೃಶಾಃ ||**

**ಅನುವಾದ**

ಅಮಾವಾಸ್ಯೆಯ ದಿನ ಘನಪುರೀಮಾರನು ಮರೆತು "ಇಂದು ಹುಣ್ಣಿಮೆ" ಎಂದು ಹೇಳಿಬಿಟ್ಟಾಗ, ಕೇಳಿದ ಕೆಲವರು ಅವನನ್ನು ಅಪಹಾಸ್ಯ ಮಾಡಿದರು. ಅವರನ್ನು ಭಂಗಿಸಿ ಬುದ್ಧಿ ಕಲಿಸಲು ಅವನು ನಿನ್ನನ್ನು ಸ್ಮರಿಸಿ ಆಕಾಶದಲ್ಲಿ ಪೂರ್ಣಚಂದ್ರನನ್ನು ತೋರಿಸಿದನು. ಬಸವೇಶ, ಅಂಥ ನಿನ್ನ ಭಕ್ತನಿಗೆ ಮದೋದ್ಧತರಾದ ನನ್ನಂಥ ಜನರು ಯಾರು ಸಮಾನರಾದಾರು?

**ವಿವರಣೆ**

ಇಲ್ಲಿ ಒಂದು ಪವಾಡದ ವೃತ್ತಾಂತವನ್ನು ಉಪಯೋಗಿಸಿಕೊಂಡು ಬಸವೇಶ್ವರನ ಭಕ್ತರಿಗೆ ಅಸಾಧ್ಯವಾದುದು ಇಲ್ಲ ಎಂದು ಹೇಳುವುದು ಶ್ರೀಶ್ರೀಗಳ ಉದ್ದೇಶ.

೪೪

**ಶಾರ್ದೂಲವಿಕ್ರೀಡಿತ ವೃತ್ತ**

**ಮಾಯಾಖ್ಯೋ ಗಜಪೇಶ್ವರಾಯ ಕರಿಣಂ ದತ್ವಾ ಸಸರ್ಜಾಪರಂ**
**ಮಾಕಾಳಸ್ತುರಗಂ ವಿತೀರ್ಯ ವಿಭವೇ ಘೋಟಂ ಪರಂ ನಿರ್ಮಮೇ |**
**ತ್ವದ್‌ಭಕ್ತ್ಯಾ ಪರಯೋಸ್ತಯೋರ್ನ ವಿಪುಲಂ ಮನ್ಯೇ ತಯೋಸ್ಸರ್ಜನಂ**
**ಧರ್ಮಂ ವೈದಿಕಮೋಕಸಸ್ತವ ಬಹಿಃ ಶ್ವಾಬೋಧಯದ್ಯಜ್ಞಡಾನ್ ||**

**ಅನುವಾದ**

ಮಾಯನೆಂಬ ಭಕ್ತನು ಗಜಪೇಶ್ವರನಿಗೆ ಒಂದು ಆನೆಯನ್ನು ದಾನ ಮಾಡಿ ಆಮೇಲೆ (ರಾಜನ ಆನೆ ಎಲ್ಲಿ ಎಂಬ ಪ್ರಶ್ನೆ ಬಂದಾಗ) ಇನ್ನೊಂದು ಆನೆಯನ್ನು ಸೃಷ್ಟಿಸಿದನು. ಮಾಕಾಳನು ಪ್ರಭುವಾದ ನಿನಗೆ ಕುದುರೆಯನ್ನು ಅರ್ಪಿಸಿ ಅದರ ಬದಲಿಗೆ ಇನ್ನೊಂದು ಕುದುರೆಯನ್ನೇ ಸೃಷ್ಟಿಸಿದನು. ಭಕ್ತಿಯಿಂದ ಶ್ರೇಷ್ಠರಾದ ಅವರಿಬ್ಬರು ಅವನ್ನು ಸೃಷ್ಟಿಸಿದ್ದು ದೊಡ್ಡ ವಿಷಯವೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ನಿನ್ನ ಮನೆಯ ಹೊರಗೆ ನಾಯಿಯೇ ದಡ್ಡ ಜನರಿಗೆ ವೈದಿಕಧರ್ಮವನ್ನು ಬೋಧಿಸಿತು.

**ವಿವರಣೆ**

ಈ ಪದ್ಯದಲ್ಲಿ ಮೂರು ಪವಾಡಗಳನ್ನು ಕುರಿತು ಹೇಳಲಾಗಿದೆ. ಇವುಗಳ ಬಗೆಗೆ ವಿವರಣೆಗಳನ್ನು ತ.ಸು. ಶಾಮರಾಯರ "ಶಿವಶರಣ ಕಥಾರತ್ನಕೋಶ"ದಲ್ಲಿ ನೋಡಬಹುದು.

೪೫

**ಶಾರ್ದೂಲವಿಕ್ರೀಡಿತ ವೃತ್ತ**

**ನೀಲಾಕ್ಷೋ ಗತಪಾರದೋರುಮುಕುರೇ ಯಾವನ್ನ ತೇ ಚಾನನಂ**
**ಸುವ್ಯಕ್ತಂ ಕಲತೇ ಪ್ರಭೋ ಬಸವ ತೇ ಭಕ್ತೋ ಮಮಾರಾಚಿರಾತ್ |**
**ತಾವತ್ತನ್ಮುಕುರೇ ಕರೇ ಪುರಭಿದಾ ದತ್ತೇ ಮುಖಂ ತತ್ರ ತೇ**
**ದೃಷ್ಟ್ವಾ ಜೀವಸನಾಥಮೇನಮಕರೋದ್‌ರಾಗಂ ತಥಾ ದೇಹಿ ಮೇ ||**

**ಅನುವಾದ**

ನೀಲಾಕ್ಷನೆಂಬವನು ಪಾದರಸ ಉದುರಿಹೋಗಿದ್ದ ಕನ್ನಡಿಯಲ್ಲಿ ನಿನ್ನ ಮುಖ ಸ್ಪಷ್ಟವಾಗಿ ಕಾಣಲಿಲ್ಲವೆಂಬ ಕಾರಣದಿಂದಲೇ ಕೂಡಲೇ ಸತ್ತುಹೋದನು. ಪ್ರಭು ಬಸವೇಶ, ಅಷ್ಟರಲ್ಲಿ ಪುರಹರನೆನಿಸಿದ ಶಿವನು ಆ ಕನ್ನಡಿಯನ್ನೆತ್ತಿಹಿಡಿದನು. ಆಗ ಆ ಕನ್ನಡಿಯಲ್ಲಿ ನಿನ್ನ ಮುಖವನ್ನು ಕಂಡು ಅವನು ಮತ್ತೆ ಜೀವವುಳ್ಳವನಾಗುವಂತೆ ಮಾಡಿದನು. ಬಸವ, ನನಗೂ ನಿನ್ನಲ್ಲಿ ಅಂಥ ಪ್ರೇಮವನ್ನು ನೀಡು.

೪೬

### ಶಾರ್ದೂಲವಿಕ್ರೀಡಿತ ವೃತ್ತ

ತ್ವದ್‌ಭಕ್ತಃ ಕಲಿಖೇಲನೋತ್ಸುಕಮತಿರ್ಮಾರಃ ಕಪೇರ್ವಕ್ಷಸಿ
ಶ್ರೀಲಿಂಗಂ ನನು ಕೇಶಿರಾಜಕಥಿತಃ ಪ್ರಾದರ್ಶಯದ್ ರಾಗತಃ |
ವಾತ್ಸಲ್ಯಂ ಭವತಾ ಚ ತಸ್ಯ ಮರಣೇ ಸಂದರ್ಶಿತಂ ನಾಥ ಯದ್
ದೇಯಾ ಶ್ರೀಬಸವೇಶ ಮಯ್ಯಪಿ ಮಹಾಪಾಪೇ ದುರೀಹೇ ಕೃಪಾ ||

**ಅನುವಾದ**

ಕಲಹವಾಡಲು ಅಪೇಕ್ಷಿಸುತ್ತಿದ್ದ ನಿನ್ನ ಭಕ್ತ ಮಾರನು ಕೇಶಿರಾಜನು ಕೇಳಿದಾಗ ಕಪಿಯ ಎದೆಯ ಮೇಲೂ ಶ್ರೀ ಲಿಂಗವನ್ನು ತೋರಿಸಿದನು. ಬಸವೇಶ್ವರ, ಅವನ ಮರಣದ ವೇಳೆಯಲ್ಲಿ ನೀನು ವಾತ್ಸಲ್ಯವನ್ನು ತೋರಿಸಿದೆ. ಮಹಾಪಾಪಿಯೂ, ಕೆಟ್ಟ ಆಸೆಗಳನ್ನು ಇಟ್ಟುಕೊಂಡಿರುವವನೂ ಆದ ನನ್ನಲ್ಲೂ ಕೃಪೆಯನ್ನಿಡು.

**ವಿವರಣೆ**

ಇದು ಇಂದು ಪವಾಡದ ಘಟನೆ.

೪೭

### ಶಾರ್ದೂಲವಿಕ್ರೀಡಿತ ವೃತ್ತ

ವಿದ್ಧಸ್ತ್ವಂ ಬಸವೇಶ ನಿರ್ವಪುರಭೂರ್ಬಾಲೇನ ಲೀಲಾಜುಷಾ
ಶೂದ್ರಾಂಸೇ ಮೃತತರ್ಣಕಂ ಚರವಿಭೋರಂಸೇ ಸಜೀವಂ ಚ ತಮ್ |
ಕೂಷ್ಮಾಂಡೇ ಶಿವಲಿಂಗಮೀಶ್ವರಮಹೋ ಕಾಷ್ಠೇ ಸ್ಫುಟಂ ದರ್ಶಯನ್
ಸಾರೇ ಪಾದಜಲೇಽಪ್ಯಯೋಘನಪದಂ ಹೈಮಂ ವಿಧತ್ಸೇ ಸ್ಮ ಯತ್ ||

**ಅನುವಾದ**

ಬಸವೇಶ್ವರ, ಆಟವಾಡುತ್ತಿದ್ದ ಬಾಲಕ (ಕತ್ತಿಯಿಂದ) ಹೊಡೆದಾಗ ನೀನು ನಿರ್ದೇಹನಾದೆ. ಶೂದ್ರನ ಹೆಗಲಿನ ಮೇಲಿದ್ದ ಸತ್ತ ಕರು ನಿನ್ನ ಮಹಿಮೆಯಿಂದ ಜಂಗಮನ ಹೆಗಲ ಮೇಲೆ ಸಜೀವವಾಯಿತು. ಕುಂಬಳಕಾಯಲ್ಲಿ ಶಿವಲಿಂಗವನ್ನೂ, ಕಟ್ಟಿಗೆಯಲ್ಲಿ ಶಿವನನ್ನೂ ತೋರಿಸಿದ ನೀನು ಪುಣ್ಯಕರವಾದ ಪಾದೋದಕದಲ್ಲಿ ಕಬ್ಬಿಣದ ಗಟ್ಟಿಯನ್ನಿಟ್ಟು ಚಿನ್ನದ ಗಟ್ಟಿಯನ್ನಾಗಿ ಮಾಡಿ ತೋರಿಸಿಕೊಟ್ಟೆ.

**ವಿವರಣೆ**

ಇಲ್ಲಿ ಐದು ಪವಾಡಗಳನ್ನು ವರ್ಣಿಸಲಾಗಿದೆ. ಶಿವಶರಣ ಕಥಾರತ್ನಕೋಶದಲ್ಲಿ ಇವುಗಳ ವಿವರಗಳನ್ನು ನೋಡಬಹುದು.

೪೮

### ಶಾರ್ದೂಲವಿಕ್ರೀಡಿತ

**ಸ್ವಾಮಿನ್ ಶ್ರೀ ಬಸವೇಶ ಯತ್ತುವರಿಕಾ ರತ್ನಾನಿ, ಗಾವಂ ಯತೋ**
**ವ್ಯಾಘ್ರೀಂ, ಕಸ್ಯ ಘಟಂ ಪಯೋಘಟಮುಮಾಜಾನಿಂ ಚರಾಂಘ್ರೇರ್ನಖೇ|**
**ನಾರಂಗಂ ಶಿವಲಿಂಗಮತ್ರ ಸಹಸಾ ತನ್ವನ್ ಗತೋಽಸಿ ಪ್ರಥಾಂ**
**ವಾಚ್ಯಸ್ತೇ ಮಹಿಮಾ ಕಿಮೀಶ ಭಗವಂಸ್ತ್ರಾಯಸ್ವ ಮಾಂ ಪಾಪಿನಮ್ ||**

**ಅನುವಾದ**

ಸ್ವಾಮಿ ಬಸವೇಶ್ವರ, ತೊಗರಿಕಾಳುಗಳನ್ನು ರತ್ನಗಳನ್ನಾಗಿ, ಹುಲಿಯನ್ನು ಹಸುವನ್ನಾಗಿ, ನೀರಿನ ಮಡಕೆಯನ್ನು ಹಾಲು ತುಂಬಿದ ಕೊಡವನ್ನಾಗಿ ಮಾಡಿದೆ ನೀನು. ಜಂಗಮನ ಕಾಲುಗುರಿನಲ್ಲಿ ಶಿವನನ್ನು ತೋರಿಸಿದೆ. ಕಿತ್ತಳೆಹಣ್ಣನ್ನು ಶಿವಲಿಂಗವನ್ನಾಗಿ ಕ್ಷಣಮಾತ್ರದಲ್ಲಿ ಮಾಡಿ ನೀನು ಕೀರ್ತಿಯನ್ನು ಗಳಿಸಿರುವೆ. ನಿನ್ನ ಮಹಿಮೆಯನ್ನು ಬಣ್ಣಿಸಲು ನನಗೆ ಸಾಧ್ಯವೆ? ಪಾಪಿಯಾದ ನನ್ನನ್ನು ಕಾಪಾಡು.

**ವಿವರಣೆ**

ಶಿವಶರಣಕಥಾರತ್ನಕೋಶದಲ್ಲಿ "ಜಂಗಮನೊಬ್ಬ ಜೂಜಾಡಿ ಐಗಳ ರತ್ನವನ್ನು ಸೋಲಲು ಬಿಜ್ಜಳ ಅಣಕಿಸಿ ನಕ್ಕನು. ಬಸವಣ್ಣ ಕೆಂಪು ತೊಗರಿಯ ರಾಶಿಯನ್ನು ರತ್ನಗಳಾಗಿ ಮಾಡಿ ಜಂಗಮನಿಗೆ ನೀಡಲು ಬಿಜ್ಜಳ ನಾಚಿದ"- ಎಂದು ಹೇಳಿದೆ. ಹುಲಿಯನ್ನು ಹಸುವಾಗಿ ಮಾಡಿದ ಬಗೆಗೂ ಅದರಲ್ಲಿ- "ರಾಜನ ಆಸ್ಥಾನದಲ್ಲಿ ಬಸವಣ್ಣ ಕುಳಿತಿದ್ದಾಗ ಒಂದು ದಿನ ಒಬ್ಬ ಬೇಟೆಗಾರ ಹುಲಿಯೊಂದನ್ನು ಮರಿ ಸಹಿತ ಹಿಡಿದು ತಂದ. ಅರಸನು ಅದನ್ನು ಬಸವಣ್ಣನ ಕಪಿಲೆಯೆನ್ನಲು ಬಸವಣ್ಣ ಒಪ್ಪಿ ಅದರಿಂದ ಹಾಲು ಕರೆದು ಮೊಸರು ಮಾಡಿ ಬೆಣ್ಣೆಯಿಂದ ತುಪ್ಪ ಮಾಡಿ ತೋರಿಸಿದ" ಎಂದು ಹೇಳಿದೆ. ಹೀಗೆ ಇತರ ಪವಾಡಗಳನ್ನೂ ಅಲ್ಲಿ ನೋಡಿ ತಿಳಿದುಕೊಳ್ಳಬೇಕು.

೪೯

### ಶಾರ್ದೂಲವಿಕ್ರೀಡಿತ ವೃತ್ತ

**ಸ್ತೋತುಂ ತ್ವಚ್ಚರಿತಾಬ್ಧಿಶೀಕರಕಲಾಕೋಟ್ಯಂಶಗಾಂಶಾಂಶಕಂ**
**ಸುತ್ರಾಮಾದಿಸುರಾ ಮಹೋರಗವರಾ ಯಕ್ಷಾಶ್ಚ ವಿದ್ಯಾಧರಾಃ |**
**ನೋ ಶಕ್ತಾ ಭಗವಂಸ್ತ್ವದಾಶ್ರಯಮಹಾಹೃತ್ಪಂಕಜಶ್ಶಂಕರೋ**
**ಜಾನೀತೇ ಕಿಮು ವಾ ನ ವಾ ಬಸವ ಕಿಂ ಕ್ಷುದ್ರಾ ದುರೀಹಾ ವಯಮ್ ||**

**ಅನುವಾದ**

ಬಸವೇಶ್ವರ, ನಿನ್ನ ಚರಿತ್ರೆಯೆಂಬ ಸಮುದ್ರದ ಒಂದು ಹನಿಯ ಹದಿನಾರನೆಯ

ಒಂದಂಶದಲ್ಲಿ ಕೋಟ್ಯಂಶದ ಒಂದು ಸಣ್ಣ ಅಂಶವನ್ನು ಹೊಗಳುವುದಕ್ಕೂ ಇಂದ್ರನೇ ಮೊದಲಾದ ದೇವತೆಗಳಾಗಲಿ, ಮಹಾನಾಗಶ್ರೇಷ್ಠರಾಗಲಿ, ಯಕ್ಷ-ವಿದ್ಯಾಧರರಾಗಲಿ ಶಕ್ತರಲ್ಲ. ಭಗವನ್, ನಿನ್ನ ಹೃದಯಕಮಲದಲ್ಲಿ ಆಶ್ರಯ ಪಡೆದಿರುವ ಶಂಕರನೂ ನಿನ್ನ ಮಹಿಮೆಯನ್ನು ತಿಳಿದಿರುವನೋ ಇಲ್ಲವೋ ? ಹಾಗಿರುವಾಗ ಕ್ಷುದ್ರರೂ, ದುರಾಸೆಯುಳ್ಳವರೂ ಆದ ನಾವು ತಿಳಿಯಲು ಸಾಧ್ಯವೆ?

**ವಿವರಣೆ**

ಇಲ್ಲಿ ಅತಿಶಯೋಕ್ತಿಯಿಂದ ಬಸವೇಶ್ವರನ ಮಹಿಮೆಯನ್ನು ವರ್ಣಿಸಿದ್ದಾರೆ.

**೫೦**

**ಶಾರ್ದೂಲವಿಕ್ರೀಡಿತ**

**ಸನ್ಮಾನ್ಯೇಷು ಚರಂ, ಗುರುಂ ನತಿಪದೇ, ಧಾರ್ಯೇಷು ಭಸ್ಮಾಕ್ಷಕೇ**
**ಪೇಯೇ ಪಾದಜಲಂ, ಪ್ರಸಾದಮತುಲಂ ಭೋಜ್ಯೇಷು, ಸತ್ಯಂ ವಿಭೋ |**
**ಧ್ಯೇಯೇಷೂತ್ತಮಸಚ್ಚಿದದ್ವಯಗುರುಂ ಸ್ವಾಮಿನ್ ಭವಂತಂ ಪ್ರಭುಂ**
**ಜಪ್ಯೇ ಶ್ರೀಬಸವಾನ್ವಹಂ ಶಿವಮನುಂ ಸಾರಂ ಸಮಾಚಕ್ಷ್ಮಹೇ ||**

**ಅನುವಾದ**

ಪ್ರಭು ಬಸವ, ಮಾನ್ಯರಲ್ಲಿ ಜಂಗಮನನ್ನೂ, ನಮಸ್ಕಾರದಲ್ಲಿ ಗುರುವನ್ನೂ, ಧರಿಸಬೇಕಾದ ವಸ್ತುಗಳಲ್ಲಿ ಭಸ್ಮ-ರುದ್ರಾಕ್ಷಗಳನ್ನೂ, ಪಾನೀಯಗಳಲ್ಲಿ ಪಾದೋದಕವನ್ನೂ, ಭೋಜನಪದಾರ್ಥಗಳಲ್ಲಿ ಪ್ರಸಾದವನ್ನೂ, ಧ್ಯೇಯವಸ್ತುಗಳಲ್ಲಿ ಸಚ್ಚಿದದ್ವಯಗುರು ಮತ್ತು ಪ್ರಭುವಾದ ನಿನ್ನನ್ನೂ, ಜಪಾರ್ಹವಾದ ಮಂತ್ರಗಳಲ್ಲಿ ಪಂಚಾಕ್ಷರೀಮಂತ್ರವನ್ನೂ ಸಾರಭೂತವೆಂದು ನಿತ್ಯವೂ ಸತ್ಯವಾಗಿ ನುಡಿಯುತ್ತೇವೆ.

**ವಿವರಣೆ**

ಶಿವಭಕ್ತರು ಶಿವನಿಗಿಂತಲೂ ಹೆಚ್ಚು ಪೂಜ್ಯರು ಎಂದು ಇಲ್ಲಿ ತಾತ್ಪರ್ಯ.

**೫೧**

**ಶಾರ್ದೂಲವಿಕ್ರೀಡಿತ ಛಂದಸ್ಸು**

**ಸ್ವಾಮಿನ್ ಶ್ರೀಬಸವೇಶ ವೈದಿಕವಿಧಿವ್ಯತ್ಯಾಸವಿಶ್ವಾಸಿನಃ**
**ಕೇಚಿನ್ನಾಮ ವಿನಿಂದಕಾ ಮುರಹರಂ ನಿಂದಂತಿ ಮಂದಾಶಯಾಃ |**
**ಮಾನ್ಯೋಽಯಂ ಗುರುಲಿಂಗಜಂಗಮಮಹತ್ಪಾದೋದಭುಕ್ತೌದನ-**
**ಶ್ರೀಮನ್ಮಂತ್ರವಿಭೂತಿಪಾವನಮಹಾರುದ್ರಾಕ್ಷವಾನ್ ಕೇಶವಃ ||**

**ಅನುವಾದ**

ಸ್ವಾಮಿ, ಬಸವೇಶ್ವರ, ವೇದವಿಧಿವಾಕ್ಯಗಳ ವ್ಯತ್ಯಾಸದಲ್ಲಿ ನಂಬಿಕೆಯಿಟ್ಟಿರುವ

ಮಂದಬುದ್ಧಿಯ ಕೆಲವರು ನಿಂದಕರು ವಿಷ್ಣುವನ್ನು ಜರಿಯುತ್ತಾರೆ. ಆದರೆ ಗುರು, ಲಿಂಗ, ಜಂಗಮ, ಪಾದೋದಕ, ಭುಕ್ತೌದನ, ಪಂಚಾಕ್ಷರೀಮಂತ್ರ, ವಿಭೂತಿ ಮತ್ತು ಪಾವನ ರುದ್ರಾಕ್ಷಗಳನ್ನು ಸ್ವೀಕರಿಸುವ ಕೇಶವನು ಗೌರವಾರ್ಹನು.

**ವಿವರಣೆ**

ಕೇಶವನೂ ಶ್ರೇಷ್ಠ ಶಿವಭಕ್ತನಾದ್ದರಿಂದ ಯಾರೂ ಎಂದೂ ವಿಷ್ಣುನಿಂದೆಯನ್ನು ಮಾಡಬಾರದು ಎಂದು ಇದರ ತಾತ್ಪರ್ಯ. ಭುಕ್ತೌದನ ಎಂದರೆ ಶಿವಭಕ್ತರು ಊಟ ಮಾಡಿದ ಮೇಲೆ ಉಳಿದ ಅನ್ನ.

೫೩

**ಶಾರ್ದೂಲವಿಕ್ರೀಡಿತ ಛಂದಸ್ಸು**

**ಸದ್ರಾಗೇಣ ವೃಷೇಂದ್ರ ಏತು ಪುರತೋ ನಃಸ್ವಸ್ತಿದಾ ಇತ್ಯಲಂ**
**ಯತ್ತನ್ನೋSದ್ಯ ವೃಷಃ ಪ್ರಚೋದಯತು ವಾ ತಸ್ಮೈಶ್ಚಿತೀಚೇ ಪರಮ್ |**
**ಇತ್ಯುಕ್ತ್ವಾ ಪರಿಷೇವತೇ ಶ್ರುತಿರಿಯಂ ತ್ವಾಮಾದರಾತ್ ಸರ್ವದಾ**
**ಹಿತ್ವಾ ತ್ವಾಮಪರಂ ಭಜೇ ಬಸವ ಕಂ ಸರ್ವಾಮರಾಧೀಶ್ವರಮ್ ||**

**ಅನುವಾದ**

ಬಸವೇಶ್ವರ, ವೇದಗಳು ಕೂಡ ನಿನ್ನನ್ನು ಆದರದಿಂದ ಯಾವಾಗಲೂ ಹೊಗಳಿ ಸೇವೆ ಮಾಡುತ್ತಿವೆ. "ವೃಷೇಂದ್ರ ಏತು ಪುರತೋ ನಃ ಸ್ವಸ್ತಿದಾ" "ತನ್ನೊದ್ಯ ವೃಷಃ ಪ್ರಚೋದಯತು" ಮುಂತಾದ ವಾಕ್ಯಗಳು ಅಲ್ಲಿವೆ. ಆದ್ದರಿಂದ ಎಲ್ಲ ದೇವತೆಗಳಿಗೆ ಒಡೆಯನಾದ ನಿನ್ನನ್ನು ಬಿಟ್ಟು ಬೇರೆಯವರನ್ನು ನಾನು ಆಶ್ರಯಿಸುವುದಿಲ್ಲ.

**ವಿವರಣೆ**

ಬಸವೇಶ್ವರ ಎಂಬುದು ವೃಷಭೇಂದ್ರ ಎಂಬುದರ ಕನ್ನಡ ರೂಪಾಂತರ. ವೃಷೇಂದ್ರ ಎಂದರೂ ಅದೇ. ವೃಷ = ವೃಷಭ = ಬಸವ. ಬಸವೇಶ್ವರನನ್ನು ವೇದಗಳಲ್ಲಿ ಮಂಗಳಕರನೆಂದು ಸ್ತುತಿಸಲಾಗಿದೆ. "ಮಂಗಳವನ್ನುಂಟುಮಾಡುತ್ತಾ ಈ ವೃಷೇಂದ್ರನು ನಮ್ಮ ಮುಂದೆ ನಡೆಯಲಿ" "ನಮ್ಮನ್ನು ಈ ವೃಷಭನು ಶುಭಕಾರ್ಯಗಳಲ್ಲಿ ಪ್ರಚೋದಿಸಲಿ"- ಇತ್ಯಾದಿ ಅಭಿಪ್ರಾಯದ ವಾಕ್ಯಗಳು ವೇದಗಳಲ್ಲಿ ಕಂಡುಬರುವುದರಿಂದ ಬಸವೇಶ್ವರನು ಎಲ್ಲರಿಗೂ ಪೂಜ್ಯನೆಂಬುದು ಈ ಪದ್ಯದ ತಾತ್ಪರ್ಯ.

(ಮುಂದುವರೆಯುವುದು)

ಸೌಜನ್ಯ: ಬಸವಾನಂದ ಲಹರೀ

□

# ವಾರ್ತಾವಿಹಾರ

## ಚಾಮರಾಜನಗರ ವರ್ತಕರ ಸಂಘದ ಸುವರ್ಣ ಮಹೋತ್ಸವ ಸಮಾರಂಭ

ದಿನಾಂಕ 16.7.2017 ರಂದು ಚಾಮರಾಜನಗರದ ನಂದಿ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವರ್ತಕರ ಸಂಘದ ಸುವರ್ಣ ಮಹೋತ್ಸವ ಸಮಾರಂಭವು ನೆರವೇರಿತು.

ಪರಮಪೂಜ್ಯ ಜಗದ್ಗುರುಗಳವರು ವರ್ತಕರಲ್ಲಿ ಲಾಭ ಹಾಗೂ ಹಣಸಂಪಾದನೆ ಮಾಡುವುದರೊಂದಿಗೆ ದಾಸೋಹ ಗುಣವೂ ಇರಬೇಕು. ಕಾರ್ಪೊರೇಟ್ ಸಂಸ್ಥೆಗಳು ಸಮಾಜಸೇವೆ ಮಾಡಲು ಅವಕಾಶ ಕಲ್ಪಿಸಿಕೊಂಡಿವೆ. ಅದೇ ರೀತಿ  ವರ್ತಕರ ಸಂಘ ಹಾಗೂ ಸಂಸ್ಥೆಗಳೂ ಸಮಾಜಸೇವಾ ಕಾರ್ಯಗಳನ್ನು ಮಾಡಲು ಮುಂದಾಗಬೇಕು. ಚಾಮರಾಜನಗರದ ವರ್ತಕರ ಸಂಘವು ಸಮಾಜಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವುದನ್ನು ಕೇಳಿ ಸಂತೋಷವಾಗಿದೆ. ರೈತರ ಬೆಳೆಗಳಿಗೆ ಯೋಗ್ಯಬೆಲೆ ನಿಗದಿಪಡಿಸಿರುವುದು, ನಿಗದಿತ ತೆರಿಗೆ ಪಾವತಿಯಲ್ಲಿ ಪ್ರಾಮಾಣಿಕತೆ ಕಾಯ್ದುಕೊಂಡಿರುವುದು, ನಗರದ ಜಿಲ್ಲಾ ಆಸ್ಪತ್ರೆಗೆ  ಬಿಸಿನೀರಿನ ಘಟಕವನ್ನು ಕೊಡುಗೆಯಾಗಿ ನೀಡಿರುವುದು ಮೊದಲಾದ ಸೇವಾಕಾರ್ಯಗಳು ಮೆಚ್ಚತಕ್ಕ ಸಂಗತಿಗಳಾಗಿವೆ ಎಂದು ತಿಳಿಸಿ ಸಂಘಕ್ಕೆ ಶುಭ ಹಾರೈಸಿದರು.

ಸಂಸದರಾದ ಶ್ರೀ ಆರ್. ಧ್ರುವನಾರಾಯಣ್‌ರವರು "ಸಂಘವು ಕೇವಲ ಇಪ್ಪತ್ತು ಜನ ಸದಸ್ಯರಿಂದ ಆರಂಭಗೊಂಡಿದ್ದು ಇಂದು 400 ಜನ ಸದಸ್ಯರನ್ನು ಒಳಗೊಂಡಿದೆ. ವ್ಯಾಪಾರವಹಿವಾಟಿನ ಹೆಚ್ಚಳದ ಜೊತೆಗೆ ನಗರದ ಅಭಿವೃದ್ಧಿಗೂ ಸ್ಪಂದಿಸುವಂತಹ ಪದಾಧಿಕಾರಿಗಳಿಂದ ಸಂಘವು ಕೂಡಿರುವುದು ಅಭಿಮಾನದ ಸಂಗತಿ" ಎಂದು ತಿಳಿಸುತ್ತಾ, ಸುವರ್ಣ ಮಹೋತ್ಸವದ ಅಂಗವಾಗಿ 'ಹೊಂಬಿಸಿಲು' ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಕನಕಗಿರಿ ಕ್ಷೇತ್ರದ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳು ಸಮಾರಂಭದ ಸಮ್ಮುಖ ವಹಿಸಿದ್ದರು. ಶಾಸಕರಾದ ಶ್ರೀ ಪುಟ್ಟರಂಗಶೆಟ್ಟಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಎಂ. ರಾಮಚಂದ್ರ ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಧಾರ್ಮಿಕ ಮತ್ತು ಪರಮಾರ್ಥ ಸಾಧಕರಿಗೆ ಪುನಶ್ಚೇತನ ಕಾರ್ಯಾಗಾರ

ದಿನಾಂಕ 16.7.2017 ರಂದು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದಲ್ಲಿ ಧಾರ್ಮಿಕರು ಮತ್ತು ಪರಮಾರ್ಥ ಸಾಧಕರಿಗಾಗಿ ಮೂರು ದಿನಗಳ ಪುನಶ್ಚೇತನ ಕಾರ್ಯಾಗಾರವು ನಡೆಯಿತು.

ಉದ್ಘಾಟನೆ ನೆರವೇರಿಸಿದ ಪರಮಪೂಜ್ಯರು "ನಮ್ಮ ಸುತ್ತಣ ಸಮಾಜದ ಅನೇಕ ಕ್ಷೇತ್ರಗಳು ಒಂದಲ್ಲ ಒಂದು ರೀತಿಯ ಲೋಪದೋಷಗಳಿಂದ ಕೂಡಿವೆ. ಇವುಗಳನ್ನು ಸರಿಪಡಿಸಲು ಆಯಾ ಕ್ಷೇತ್ರಗಳಲ್ಲಿ ಸಮರ್ಥರು ಇರುವುದು ಅಪರೂಪ. ಹೀಗಾಗಿ ಸಮಾಜವು ಧಾರ್ಮಿಕ ಮುಖಂಡರತ್ತ ಮುಖಮಾಡುತ್ತದೆ. ಧಾರ್ಮಿಕ ನೇತಾರರಾದ ಗುರುಗಳು ಆ ಸಮಸ್ಯೆಗಳನ್ನು ಬಗೆಹರಿಸುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇದಕ್ಕಾಗಿ ಸ್ವಾಮೀಜಿಗಳಾದವರು ನಿರಂತರವಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಹಂಬಲ ಹೊಂದಿರಬೇಕು, ಜೊತೆಗೆ ಸದಾ ತೆರೆದ ಮನಸ್ಸನ್ನು ಹೊಂದಿರಬೇಕು" ಎಂದು ನುಡಿದರು.

ಚಿತ್ರದುರ್ಗ ಮುರುಘಾಮಠದ ಡಾ. ಶಿವಮೂರ್ತಿ ಮುರುಘಾ ಶರಣರು "ಪರಮಾರ್ಥ ಪ್ರವೇಶ" ಕುರಿತು ವಿಷಯ ಮಂಡನೆ ಮಾಡಿದರು. ಚಂದ್ರವನದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳು, ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮಿಗಳು, ಕನಕಪುರ ಮರಳೇಗವಿಮಠದ ಶ್ರೀಗಳು ಉಪಸ್ಥಿತರಿದ್ದರು.

## ಉಡುಪಿಯ ಶ್ರೀ ಪೇಜಾವರ ಮಠದ ಪರ್ಯಾಯ ಮಹೋತ್ಸವ ಮತ್ತು ಅಭಿನಂದನಾ ಸಮಾರಂಭ

ದಿನಾಂಕ 18.7.2017 ರಂದು ಉಡುಪಿಯ ಶ್ರೀಕೃಷ್ಣಮಠದ ರಾಜಾಂಗಣದಲ್ಲಿ ಶ್ರೀ ಪೇಜಾವರ ಮಠದ ಪರ್ಯಾಯ ಮಹೋತ್ಸವ ಮತ್ತು ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು.

ಸಮಾರಂಭದಲ್ಲಿ ಪರಮಪೂಜ್ಯರು ತಮ್ಮ ಆಶೀರ್ವಚನದಲ್ಲಿ "ಇಂದು ನಮ್ಮಲ್ಲಿ ಸ್ವಧರ್ಮನಿಷ್ಠೆ ಮತ್ತು ಪರಧರ್ಮಸಹಿಷ್ಣುತೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ. ಸ್ವಪ್ರತಿಷ್ಠೆಯಿಂದ ಹದಗೆಡುತ್ತಿರುವ ಸಮಾಜವು ನಮ್ಮ ಋಷಿಮುನಿಗಳು, ಶರಣರು, ದಾಸರು, ಸಂತರ ಸನ್ಮಾರ್ಗವನ್ನು ಅಳವಡಿಸಿ ಕೊಳ್ಳುವಂತಾಗಬೇಕು, ಹಾಗೆ ಅಳವಡಿಸಿಕೊಂಡು ಮುನ್ನಡೆದಲ್ಲಿ ಸಂಕುಚಿತ ಭಾವನೆಗಳು ದೂರವಾಗಿ ಉತ್ತಮ ಸಮಾಜ ರೂಪುಗೊಳ್ಳಲು ಸಾಧ್ಯವಾಗುತ್ತದೆ" ಎಂದು ತಿಳಿಸಿದರು.

ಪೇಜಾವರ ವಿಶ್ವೇಶತೀರ್ಥ ಶ್ರೀಪಾದರು ತಮ್ಮ ಆಶೀರ್ವಚನದಲ್ಲಿ ಪರಸ್ಪರ ಸೌಹಾರ್ದ, ಸಹಕಾರ ಹಾಗೂ ಸಹನೆಯ ತ್ರಿಸೂತ್ರವನ್ನು ಎಲ್ಲ ಧರ್ಮೀಯರು

ಪಾಲಿಸಿದರಷ್ಟೇ ದೇಶ ಕಟ್ಟುವುದು ಸಾಧ್ಯ. ಸುತ್ತೂರು ಮಠ ಹಾಗೂ ಸಿದ್ಧಗಂಗಾ ಮಠದ ಶೈಕ್ಷಣಿಕ ಕ್ರಾಂತಿ, ಸಾಮಾಜಿಕ ಸೇವೆ ತಮಗೆ ಸ್ಫೂರ್ತಿ ಎಂದು ನುಡಿದರು.

ಸಮಾರಂಭದಲ್ಲಿ ಪೇಜಾವರ ಮಠದ ಕಿರಿಯ ಯತಿಗಳಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹಾಗೂ ಇತರರು ಭಾಗವಹಿಸಿದ್ದರು.

## ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರ 150ನೇ ಜಯಂತಿ ಮಹೋತ್ಸವ

ದಿನಾಂಕ 20.7.2017 ರಂದು ಮೈಸೂರಿನ ಶ್ರೀ ಸುತ್ತೂರು ಮಠದ ಆವರಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಸಂಸ್ಥಾಪಕರಾದ ಶ್ರೀ ಹಾನಗಲ್ಲ ಕುಮಾರಸ್ವಾಮಿ ಗಳವರ 150ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಪೌರಾಡಳಿತ ಖಾತೆ ಸಚಿವರಾದ ಶ್ರೀ ಈಶ್ವರ ಖಂಡ್ರೆ ಉದ್ಘಾಟಿಸಿದರು. ವೀರಶೈವ ಮಠಗಳು ಪ್ರಾಚೀನಕಾಲದಿಂದಲೂ ಗುರುಕುಲ ಮಾದರಿಯ ಶಿಕ್ಷಣಕೇಂದ್ರಗಳಾಗಿ ಆಧ್ಯಾತ್ಮ ಜ್ಞಾನವನ್ನು ಒದಗಿಸುತ್ತ ಬಂದಿವೆ. ಇಂದು ಆಧುನಿಕ ಶಿಕ್ಷಣವನ್ನು ಒದಗಿಸುವಲ್ಲಿ ಸಹ ಮುಂದಾಗಿರುವ ನಮ್ಮ ಮಠಮಾನ್ಯಗಳು ನಾಡಿನ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ನೀಡುತ್ತ ಬಂದಿರುವ ಕೊಡುಗೆ ಅಪಾರವಾದುದು. ಯಾವುದೇ ಜಾತಿ, ಕುಲ, ಮತಗಳ ತಾರತಮ್ಯತೆಗಳಿಲ್ಲದೆ ಓದಬಯಸುವ ಎಲ್ಲ ವರ್ಗದ ಮಕ್ಕಳಿಗೆ ಆಶ್ರಯ ಕೊಟ್ಟು ಉಚಿತವಾಗಿ ಪ್ರಸಾದವನ್ನು ನೀಡುವ ಮೂಲಕ ಸಮಾಜದ ದೀನದಲಿತರ ಏಳ್ಗೆಗೆ ಅವಕಾಶ ನೀಡಿವೆ. ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವುದರ ಮೂಲಕ ಅವರ ಸ್ವಾವಲಂಬಿ ಬದುಕಿಗೆ ಹಾಗೂ ಬೆಳವಣಿಗೆಗೆ ಕಾರಣವಾಗಿವೆ. ಈ ವಿಶಾಲ ದೃಷ್ಟಿಕೋನದ ಧರ್ಮೀಯರನ್ನು ಸಂಘಟಿಸುವುದಕ್ಕಾಗಿ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು ನೂರು ವರ್ಷಗಳ ಹಿಂದೆ ವೀರಶೈವ ಮಹಾಸಭೆ, ಶಿವಯೋಗ ಮಂದಿರದಂತಹ ಸಂಸ್ಥೆಗಳನ್ನು ಸ್ಥಾಪಿಸಿದರು. ಇಂತಹ ಪೂಜ್ಯರಿಗೆ ಸಮಾಜ ಯಾವತ್ತೂ ಋಣಿಯಾಗಿರಬೇಕಾಗಿದೆ ಎಂದು ನುಡಿದರು.

ಸಮಾರಂಭದಲ್ಲಿ ಹೊಸಮಠ, ಮಲ್ಲನಮೂಲೆ, ಹುಕ್ಕೇರಿ ಹಾಗೂ ಅಕ್ಕಿಆಲೂರು ಮಠದ ಶ್ರೀಗಳು ಮತ್ತು ಅಖಿಲಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಎಂ.ಎಸ್. ಗುರುಪಾದಸ್ವಾಮಿಯವರ 95ನೆಯ ಜನ್ಮದಿನೋತ್ಸವ

ದಿನಾಂಕ 7.8.2017 ರಂದು ಚಾಮರಾಜನಗರದ ನಂದಿಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಾಡಿನ ಹಿರಿಯ ರಾಜಕೀಯ ಮುತ್ಸದ್ದಿ ದಿವಂಗತ ಶ್ರೀ ಎಂ.ಎಸ್. ಗುರುಪಾದಸ್ವಾಮಿಯವರ 95ನೆಯ ಜನ್ಮದಿನೋತ್ಸವವನ್ನು

ಆಚರಿಸಲಾಯಿತು.

ಮಾಜಿ ಸಚಿವ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ತಮ್ಮ ಹಾಗೂ ಶ್ರೀ ಗುರುಪಾದಸ್ವಾಮಿಯವರ ಒಡನಾಟವನ್ನು ಸ್ಮರಿಸಿಕೊಳ್ಳುತ್ತಾ ಅವರು ಸರಳ ಸಜ್ಜನಿಕೆಯ, ನೇರನುಡಿಯ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ನಿಸ್ವಾರ್ಥ ಮನೋಧರ್ಮವನ್ನು ಹೊಂದಿದ್ದ ಅವರಲ್ಲಿ ಯುವಸಮುದಾಯವು ಪ್ರಾಮಾಣಿಕವಾಗಿ ರಾಜಕಾರಣದಲ್ಲಿ ತೊಡಗುವಂತೆ ಮಾಡಬೇಕೆಂಬ ಹಂಬಲವಿತ್ತು. ಅತ್ಯಂತ ಹಿರಿಯರಾಗಿದ್ದರೂ ಕಿರಿಯರೊಂದಿಗೆ ಆತ್ಮೀಯತೆಯಿಂದ ಮಾತನಾಡುವ ಸೌಜನ್ಯದ ಗುಣಗಳು ಅವರಲ್ಲಿ ಮೇಳೈಸಿದ್ದವು. ಅವರೊಬ್ಬ ಜಾತಿಭೇದವೆಣಿಸದೆ, ಎಲ್ಲರನ್ನೂ ಸರಿಸಮಾನವಾಗಿ ಕಂಡ ಮುತ್ಸದ್ದಿಗಳು ಎಂದರು.

ಮಾಜಿ ಸಚಿವ ಶ್ರೀ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುತ್ತ "ಭಾರತ ಕಂಡ ಅಪರೂಪದ ರಾಜಕಾರಣಿ, ಶ್ರೇಷ್ಠ ಸಮಾಜಚಿಂತಕ, ಜನಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿದ್ದ ಶ್ರೀ ಗುರುಪಾದಸ್ವಾಮಿಯವರು ನನ್ನ ರಾಜಕೀಯ ಬೆಳವಣಿಗೆಗೂ ಸಹ ಕಾರಣರಾಗಿದ್ದಾರೆ" ಎಂದು ಭಾವುಕವಾಗಿ ನುಡಿದರು.

ಸಮಾರಂಭದಲ್ಲಿ ಮಾಜಿ ಸಚಿವರಾದ ಶ್ರೀ ಬಿ. ಸೋಮಶೇಖರ್, ಮಾಜಿ ಶಾಸಕರುಗಳಾದ ಶ್ರೀ ಚಂದ್ರಕಾಂತ ಬೆಲ್ಲದ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷ ಶ್ರೀ ಕೆಯ್ಯಂಬಳ್ಳಿ ನಟರಾಜು ಮೊದಲಾದವರು ಭಾಗವಹಿಸಿದ್ದರು

**ಉಚಿತ ಸಾಮೂಹಿಕ ವಿವಾಹ ಮಹೋತ್ಸವ**

ದಿನಾಂಕ 10.8.2017 ರಂದು ನಂಜನಗೂಡಿನಲ್ಲಿ ಕ್ರಾಂತಿಕಾರಿ ವೀರಶೈವ ಬಳಗದವರಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವು ನೆರವೇರಿತು.

ಪರಮಪೂಜ್ಯ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ "ಸಾಂಸ್ಕೃತಿಕ ಪಾವಿತ್ರ್ಯಕ್ಕೆ ಆದ್ಯತೆ ನೀಡಿರುವ ಭಾರತದಲ್ಲಿ ಕೌಟುಂಬಿಕ ಜೀವನವು ಅತ್ಯಂತ ಮಹತ್ವದ್ದಾಗಿದೆ. ಈ ಕೌಟುಂಬಿಕ ಜೀವನದ ಪ್ರಮುಖ ಘಟ್ಟವಾದ ವಿವಾಹ ಸಂಸ್ಕಾರವು ವಧು-ವರರ ತಂದೆ-ತಾಯಿಗಳಿಗೆ ಆರ್ಥಿಕ ಹೊರೆ ಹೊರಿಸುವಂತಿರಬಾರದು. ಆಡಂಬರ ಮತ್ತು ಅದ್ದೂರಿತನಗಳ ಬದಲಿಗೆ ಸರಳ ಮತ್ತು ಸಾಮೂಹಿಕ ಮದುವೆ ಸಮಾರಂಭಗಳು ನೆರವೇರಿದಲ್ಲಿ ಜನರ ಬದುಕು ಸುಧಾರಣೆಗೊಂಡು ಉದಾತ್ತ ಜೀವನಶೈಲಿ ರೂಢಿಸಿಕೊಳ್ಳಲು ಸಹಾಯಕವಾಗಲಿದೆ" ಎಂದು ನುಡಿದು ನೂತನ ವಧೂವರರನ್ನು

ಆಶೀರ್ವದಿಸಿದರು.

ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ದೇವನೂರು, ಮಲ್ಲನಮೂಲೆ, ಮೈಸೂರಿನ ಆದಿಚುಂಚನಗಿರಿ ಶಾಖಾಮಠ, ಕನಕಗುರು ಪೀಠದ ಶ್ರೀಗಳು, ಮಾಜಿ ಸಚಿವ ಶ್ರೀ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಶ್ರೀ ಕಳಲೆ ಎನ್. ಕೇಶವಮೂರ್ತಿ ಮುಂತಾದವರು ಭಾಗವಹಿಸಿದ್ದರು.

## ವಿಶ್ವ ಛಾಯಾಗ್ರಹಣ ದಿನಾಚರಣೆ

ದಿನಾಂಕ 10.8.2017 ರಂದು ಮೈಸೂರಿನ ಕಲಾಮಂದಿರದ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ವಿಶ್ವ ಛಾಯಾಗ್ರಹಣ ದಿನಾಚರಣೆಯ ಅಂಗವಾಗಿ ಛಾಯಾಚಿತ್ರ ಪ್ರದರ್ಶನವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಸಮಾರಂಭವನ್ನು ಉದ್ಘಾಟಿಸಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ನವರು ಗ್ಯಾಲರಿಯಲ್ಲಿನ ಛಾಯಾಚಿತ್ರಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. "ಇಲ್ಲಿನ ಮನ ಮಿಡಿಯುವ ಅಪರೂಪದ ಚಿತ್ರಗಳ ಹಿಂದೆ ಒಂದೊಂದು ಸಂದೇಶ, ಸಂದರ್ಭಗಳ ವೈವಿಧ್ಯಗಳು ಕಂಡುಬರುತ್ತಿವೆ" ಎಂದು ನುಡಿದು, ಪತ್ರಿಕಾ ಛಾಯಾಗ್ರಾಹಕರಾದ ಶ್ರೀ ನೇತ್ರರಾಜು ಹಾಗೂ ಶ್ರೀ ಕೆ.ಎಚ್. ಚಂದ್ರುರವರುಗಳನ್ನು ಸನ್ಮಾನಿಸಿದರು.

ಸಚಿವರುಗಳಾದ ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಯು.ಟಿ. ಖಾದರ್, ಮುಡಾ ಅಧ್ಯಕ್ಷರಾದ ಶ್ರೀ ಡಿ. ಧ್ರುವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಸಿದ್ಧರಾಜು, ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷರಾದ ಶ್ರೀ ಎಚ್.ಎ. ವೆಂಕಟೇಶ್ ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಚಿದಾನಂದ ನಂಜುಂಡ ಶಿಯೋಗೀಂದ್ರರ 59ನೇ ವರ್ಷದ ಆರಾಧನಾ ಮಹೋತ್ಸವ

ದಿನಾಂಕ 19.8.2017 ರಂದು ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಬಳಿ ಇರುವ ಕಂತೆ ಮಹದೇಶ್ವರ ಬೆಟ್ಟದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಶ್ರೀ ಚಿದಾನಂದ ನಂಜುಂಡ ಶಿಯೋಗೀಂದ್ರ ಶಿವಯೋಗಿಗಳ 59ನೇ ವರ್ಷದ ಆರಾಧನಾ ಮಹೋತ್ಸವವು ನೆರವೇರಿತು.

ಸಮಾರಂಭದಲ್ಲಿ ಬೆಟ್ಟದ ಅಭಿವೃದ್ಧಿಯ ಕಾಮಗಾರಿಗೆ ಚಾಲನೆ ನೀಡಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪನವರು, ಸಾವಿರಾರು ಭಕ್ತರು ಆಗಮಿಸುವ ಇಂತಹ ಧಾರ್ಮಿಕ ಕ್ಷೇತ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಈ ಕ್ಷೇತ್ರಗಳಲ್ಲಿ

ರಾಜಕೀಯಕ್ಕಿಂತ ಸೇವಾ ಮನೋಭಾವನೆ ಮುಖ್ಯವಾಗಿರಬೇಕು ಎಂದು ನುಡಿದರು.

ಸಮಾರಂಭದಲ್ಲಿ ವಿಶ್ವಕರ್ಮ ನಿಗಮದ ಅಧ್ಯಕ್ಷರಾದ ಶ್ರೀ ನಂದಕುಮಾರ್, ಬಣ್ಣ ಮತ್ತು ಅರಗು ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಎಚ್.ಎ. ವೆಂಕಟೇಶ್, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಎಚ್.ವಿ. ಬಸವರಾಜ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ಶ್ರೀ ಬಿ.ಎಸ್. ಮಹದೇವಪ್ಪ ಮೊದಲಾದವರು ಉಪಸ್ಥಿತರಿದ್ದರು.

## ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೇ ಜಯಂತಿ ಮಹೋತ್ಸವ ಹಾಗೂ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆಯ ಶಿಲಾನ್ಯಾಸ ಕಾರ್ಯಕ್ರಮ

ದಿನಾಂಕ 29.8.2017 ರಂದು ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳ 102ನೇ ಜಯಂತಿ ಮಹೋತ್ಸವ ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆಯ ಶಿಲಾನ್ಯಾಸ ಕಾರ್ಯ ಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು.

ಶಿಲಾನ್ಯಾಸ ಕಾರ್ಯಕ್ರಮ ಹಾಗೂ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಾವಕಾಶಗಳು ಎಲ್ಲರಿಗೂ ಸಮಾನವಾಗಿ ಸಿಗಬೇಕೆಂಬುದನ್ನು ಮನಗಂಡಿದ್ದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಅದಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟ ವರು. ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲೇ ಅವರು ಎಲ್ಲರಿಗೂ ವಿದ್ಯೆ ದೊರೆಯು ವಂತಾದಾಗ ಮಾತ್ರ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುತ್ತದೆ ಎಂದು ಅರಿತಿದ್ದರು. ಸರಿಯಾದ ರಸ್ತೆಗಳಿಲ್ಲದ, ಪ್ರಯಾಣ ಸೌಕರ್ಯಗಳಿಲ್ಲದ ದಿನಮಾನಗಳಲ್ಲಿ ಹಳ್ಳಿಹಳ್ಳಿಗಳಿಗೆ, ಮನೆಮನೆಗಳಿಗೆ ತೆರಳಿ ಭಿಕ್ಷೆ ತಂದು ಓದುವ ಮಕ್ಕಳ ಹಸಿವು ನೀಗಿಸಿ, ಅವರ ಶಿಕ್ಷಣಕ್ಕೆ ಬೇಕಾದ ಶಾಲಾ ಕಾಲೇಜುಗಳನ್ನು ಶ್ರೀಗಳು ಆರಂಭಿಸಿರುವುದು ಇಡೀ ನಾಡಿಗೆ ಹೆಮ್ಮೆಯ ವಿಚಾರ. ಅಂದು ಶ್ರೀಗಳು ವಿವಿಧ ಮಾದರಿಯ ಜ್ಞಾನಪ್ರಸಾರದ ಕಾರ್ಯಯೋಜನೆಗಾಗಿ ಬಿತ್ತಿದ್ದ ಬೀಜಗಳು ಇಂದು ಬೃಹತ್ ಸಂಸ್ಥೆಗಳ ರೂಪದಲ್ಲಿ ಬೆಳೆದಿವೆ. ಮಾತೃಹೃದಯ ಹೊಂದಿದ್ದ ಶ್ರೀಗಳವರ ಜನಮುಖಿ ಆಲೋಚನೆಗಳು ಇಂದು ನಮಗೂ ಮಾರ್ಗದರ್ಶಿಯಾಗಿವೆ. ಇಂತಹ ಅಪರೂಪದ ದಾರ್ಶನಿಕರ ಪುತ್ಥಳಿಯನ್ನು ನಿರ್ಮಿಸುತ್ತಿರುವುದು ನಮಗೆ ಪ್ರೀತಿ, ಗೌರವ ಮತ್ತು ಅಭಿಮಾನದ ಸಂಗತಿಯಾಗಿದೆ ಎಂದು ನುಡಿದರು. ಇದೇ ಸಂದರ್ಭದಲ್ಲಿ

ರಾಜೇಂದ್ರ ಶ್ರೀಗಳ ಪರಿಷ್ಕೃತ ಚಿತ್ರಸಂಪುಟವನ್ನು ಬಿಡುಗಡೆ ಮಾಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು ಮಾತನಾಡುತ್ತ ವಿಶ್ವದಲ್ಲಿ ತಮ್ಮ ಮೈಮೇಲೆ ಯುದ್ಧಗಳನ್ನು ಎಳೆದುಕೊಳ್ಳುತ್ತಿರುವ ಆಘಾತಕಾರಿ ಸನ್ನಿವೇಶಗಳು ನಿರ್ಮಾಣ ವಾಗುತ್ತಿರುವ ಸಂದರ್ಭದಲ್ಲಿ ಶಾಂತಿಸಂದೇಶ ಸಾರುವ ರಾಜೇಂದ್ರ ಶ್ರೀಗಳವರ ಅಮೃತವಾಣಿಗಳನ್ನು ಎಲ್ಲರೂ ಅರ್ಥಮಾಡಿಕೊಂಡು ಸೌಹಾರ್ದಯುತ ರೀತಿಯಲ್ಲಿ ಬಾಳಬೇಕಿದೆ. ಪೂಜ್ಯರ ಅಂತಃಕರಣದ ನಡೆನುಡಿಗಳಿಂದಾಗಿ ಶ್ರೀಮಠ ಮಾನವೀಯತೆಯ ಕೇಂದ್ರವಾಗಿದೆ, ಜನಮನ್ನಣೆ ಪಡೆದಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಮಾತನಾಡುತ್ತ ಶ್ರೀ ಸುತ್ತೂರು ಮಠವು ಇಂದು ನಮ್ಮ ನಡುವೆ ನಂಬಿಕೆ, ವಿಶ್ವಾಸಗಳನ್ನು ಉಳಿಸಿಕೊಂಡಿರುವ ಮಠಗಳಲ್ಲಿ ಒಂದಾಗಿದೆ. ತನ್ನ ಕಠಿಣ ಪರಿಶ್ರಮ, ನಿಷ್ಠುರ ನಿಲುವು ಹಾಗೂ ಅವಿರತ ದುಡಿಮೆಯಿಂದ ಈ ಮಠವು ದೇಶವಿದೇಶಗಳಲ್ಲಿಯೂ ಖ್ಯಾತಿ ಪಡೆದಿದೆ ಎಂದು ಅಭಿಪ್ರಾಯಪಟ್ಟರು.

ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ಶಾಸಕರುಗಳಾದ ಶ್ರೀಮತಿ ಗೀತಾ ಮಹದೇವ ಪ್ರಸಾದ್, ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಕೆ. ವೆಂಕಟೇಶ್, ಶ್ರೀ ಆರ್. ಧರ್ಮಸೇನಾ, ಶ್ರೀ ಕಳಲೆ ಎನ್. ಕೇಶವಮೂರ್ತಿ, ಶ್ರೀ ಎಸ್. ಜಯಣ್ಣ, ಶ್ರೀ ಪುಟ್ಟರಂಗಶೆಟ್ಟಿ, ಶ್ರೀ ಆರ್. ನರೇಂದ್ರ, ಶ್ರೀ ಎಚ್.ಎಂ. ರೇವಣ್ಣ, ನಿಗಮ-ಮಂಡಳಿಗಳ ಅಧ್ಯಕ್ಷರಾದ ಶ್ರೀ ಸಿದ್ಧರಾಜು, ಶ್ರೀಮತಿ ಮಲ್ಲಿಗೆ ವೀರೇಶ್, ಶ್ರೀ ಎಚ್.ಎ. ವೆಂಕಟೇಶ್, ಮಹಾಪೌರರಾದ ಶ್ರೀ ಎಂ.ಜೆ. ರವಿಕುಮಾರ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ನಯೀಮಾ ಸುಲ್ತಾನ್ ಮುಂತಾದವರು ಭಾಗವಹಿಸಿದ್ದರು.

### 'ರ್‍ಯಾಲಿ ಫಾರ್ ರಿವರ್' ಉದ್ಘಾಟನಾ ಕಾರ್ಯಕ್ರಮ

ದಿನಾಂಕ 8.9.2017 ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಈಶಾ ಅಂತಾರಾಷ್ಟ್ರೀಯ ಫೌಂಡೇಷನ್ ಏರ್ಪಡಿಸಿದ್ದ 'ರ್‍ಯಾಲಿ ಫಾರ್ ರಿವರ್' ಉದ್ಘಾಟನಾ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

"ನೀರು ಅತ್ಯಮೂಲ್ಯ. ಈ ಜೀವಜಲದ ಸಂರಕ್ಷಣೆಗೆ ಇಂದು ಜಗತ್ತಿನ ಎಲ್ಲ ದೇಶಗಳು ಆದ್ಯತೆ ನೀಡಲೇಬೇಕಾದ ಸಂದರ್ಭ ಬಂದಿದೆ. ಭಾರತವಂತೂ ನೀರಿನ ಕೊರತೆಯನ್ನು ಎದುರಿಸುತ್ತಿರುವ ರಾಷ್ಟ್ರಗಳಲ್ಲಿ ಒಂದೆಂಬ ಭಾವ ದಿನೇದಿನೇ ಬೆಳೆಯುತ್ತಿರುವಂತೆ ತೋರುತ್ತಿದೆ. ನಮ್ಮಲ್ಲಿ ಸಾಕಷ್ಟು ನೀರಿನ ಸಂಪನ್ಮೂಲಗಳಿದ್ದರೂ ಅದರ ಸದ್ಬಳಕೆಯಿಲ್ಲದೆ ನೀರು ಪೋಲಾಗುತ್ತಿದೆ. ಇದರಿಂದಾಗಿ ಕೃಷಿಕ್ಷೇತ್ರ ಮತ್ತು

ವಿವಿಧ ಉದ್ಯಮಗಳೂ ಸಹ ಆತಂಕಕ್ಕೆ ಸಿಲುಕಿವೆ. ನಾವು ಇಂದು ಕುಡಿಯುವ ನೀರನ್ನೂ ಖರೀದಿಸುವಂತಹ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಈಶಾ ಫೌಂಡೇಷನ್ ಹಮ್ಮಿಕೊಂಡಿರುವ 'ರ್‍ಯಾಲಿ ಫಾರ್ ರಿವರ್' ಕಾರ್ಯಕ್ರಮಕ್ಕೆ ಇಡೀ ದೇಶವೇ ಕೈಜೋಡಿಸಬೇಕಿದೆ. ನೀರಿಲ್ಲದೆ ಯಾವುದೇ ಜೀವಜಾಲಗಳು ಉಳಿಯಲಾರವು, ಜಲಸಂರಕ್ಷಣೆಗಾಗಿ ನದಿಗಳ ಜೋಡಣೆಯಂತಹ ಬೃಹತ್ ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಯೋಜಿಸಿ ನೀರಿನ ಸದ್ಬಳಕೆಗೆ ಆದ್ಯತೆ ನೀಡಬೇಕಿದೆ" ಎಂದು ಪರಮಪೂಜ್ಯರು ತಿಳಿಸಿದರು.

ಈಶಾ ಫೌಂಡೇಷನ್‌ನ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರು ಈ ದೇಶದಲ್ಲಿ ನದಿಯ ನೀರನ್ನು ಉಳಿಸುವ ಯೋಜನೆಯನ್ನು ಸರ್ಕಾರಗಳು ಹಮ್ಮಿಕೊಳ್ಳು ವಂತೆ ನಾವಿಂದು ಮಾಡಲೇಬೇಕು, ಹಾಗೆ ಮಾಡದೇ ಹೋದಲ್ಲಿ ಇನ್ನು ಇಪ್ಪತ್ತು ವರ್ಷಗಳಲ್ಲಿ ನಮ್ಮ ಜಲಸಂಪನ್ಮೂಲಗಳು ಸಂಪೂರ್ಣ ಬರಿದಾಗಿ ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಕೃಷಿಕರ ಅನುಕೂಲಕ್ಕಾಗಿ ಕೈಗಾರಿಕೋದ್ಯಮಿಗಳ ಸಹಯೋಗದಲ್ಲಿ ಜಮೀನುಗಳಿಗೆ ನೀರೊದಗಿಸುವ ಯೋಜನೆ, ನದಿಗಳ ಪುನಶ್ಚೇತನಕ್ಕೆ ಸಂಬಂಧಿಸಿದ ಕರಡು ಯೋಜನೆಯನ್ನು ಸಿದ್ಧಪಡಿಸಿ ಕೇಂದ್ರಸರ್ಕಾರಕ್ಕೆ ಸಲ್ಲಿಸಿ ಕಾರ್ಯರೂಪಕ್ಕೆ ತರುವಂತೆ ಒತ್ತಾಯಿಸುವುದು ನಮ್ಮ ರ್‍ಯಾಲಿಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಸಂಸದರಾದ ಶ್ರೀ ಪ್ರತಾಪಸಿಂಹ, ಶಾಸಕರಾದ ಎಂ.ಕೆ. ಸೋಮಶೇಖರ್, ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಚಲನಚಿತ್ರ ನಟ ಗಣೇಶ್ ಮುಂತಾದವರು ಭಾಗವಹಿಸಿದ್ದರು.

**ಕೆರೆಗಳಿಗೆ ಬಾಗಿನ ಸಮರ್ಪಣೆ**

ದಿನಾಂಕ 9.9.2017 ರಂದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಸುರಗಿತೋಪು ಏತ ನೀರಾವರಿ ಮತ್ತು ಮುಡುಕುತೊರೆ ಎರಡನೇ ಹಂತದ ಏತ ನೀರಾವರಿ ಯೋಜನೆಯಲ್ಲಿ ನೀರು ತುಂಬಿಸಿದ ಸರಗೂರು, ಕೊಡಗಹಳ್ಳಿ ಹಾಗೂ ಬಿಜಿಪುರ ಕೆರೆಗಳಿಗೆ ಬಾಗಿನ ಸಮರ್ಪಿಸುವ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಪರಮಪೂಜ್ಯರು ಇಂದು ಎಲ್ಲ ಕಡೆಯೂ ಪ್ರಕೃತಿಗೆ ವಿರುದ್ಧವಾದ ನಡೆಗಳು ಎದ್ದುಕಾಣುತ್ತಿವೆ. ಅರಣ್ಯ ಇರಬೇಕಾದ ಜಾಗದಲ್ಲಿ ರೆಸಾರ್ಟ್‌ಗಳು ಹುಟ್ಟಿಕೊಂಡು ಅಭಿವೃದ್ಧಿಯ ಹೆಸರಿನಲ್ಲಿ ಹಸಿರು ಮರೆಯಾಗುತ್ತಿದೆ. ನಿಸರ್ಗದ ಮೇಲೆ ದೌರ್ಜನ್ಯ ಹೆಚ್ಚಿ ಚಂಡಮಾರುತ, ಸುನಾಮಿ ಮುಂತಾದ ಪ್ರಾಕೃತಿಕ ವಿಕೋಪಗಳು ಪದೇ ಪದೇ

ತಲೆದೋರುತ್ತಿವೆ. ಈ ಎಚ್ಚರಿಕೆಗಳನ್ನು ನಾವು ಇಂದಾದರೂ ಅರ್ಥಮಾಡಿಕೊಂಡು ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಕ್ಷಣಿಕಸುಖಕ್ಕೆ ಬಲಿಯಾಗಿ ಜಮೀನುಗಳನ್ನು ಮಾರಿಕೊಂಡು ವಲಸೆ ಹೋಗುತ್ತಿರುವ ರೈತರು ನಾನಾ ರೀತಿಯ ಸಂಕಷ್ಟಗಳಿಗೆ ಸಿಲುಕುತ್ತಿದ್ದಾರೆ. ವಾಸ್ತವದಲ್ಲಿ ಕೃಷಿ ಸಂಕಷ್ಟದ ಉದ್ಯಮವಲ್ಲ, ಅದು ಸಂತೃಪ್ತಿ ನೀಡುವ ಉದ್ಯಮ. ಈ ಕೃಷಿಯನ್ನು ಅವಲಂಬಿಸಿರುವ ಅನ್ನದಾತರು ಇಂದು ಆಹಾರ ಬೆಳೆಗಳು ಮತ್ತು ವಾಣಿಜ್ಯ ಬೆಳೆಗಳು ಎರಡನ್ನೂ ಒಳಗೊಂಡ ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸಬೇಕಿದೆ. ಜೊತೆಗೆ ಸರ್ಕಾರ ಇಂದು ಹಮ್ಮಿಕೊಂಡಿರುವ ಕೆರೆ ತುಂಬಿಸುವ ಯೋಜನೆಗಳ ಸದುಪಯೋಗ ಪಡೆಯುವ ಮೂಲಕ ಕೆರೆಗಳ ಸಂರಕ್ಷಣೆಗೂ ಆದ್ಯತೆ ನೀಡಬೇಕಿದೆ ಎಂದು ನುಡಿದರು.

ಸಮಾರಂಭದಲ್ಲಿ ಬಿಜಿಪುರ ಹೊಸಮಠದ ಸಂಜಯರಾಜೇ ಅರಸ್, ಹೊರಮಠ, ಶ್ರೀಗಳು, ವಿವಿಧ ಮಠಾಧೀಶರು, ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ಶ್ರೀ ಆರ್.ಎನ್. ವಿಶ್ವಾಸ್ ಮುಂತಾದವರು ಉಪಸ್ಥಿತರಿದ್ದರು.

## ಸಿದ್ಧಗಂಗಾ ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆಯ ಉದ್ಘಾಟನಾ ಸಮಾರಂಭ

ದಿನಾಂಕ 10.9.2017 ರಂದು ತುಮಕೂರಿನಲ್ಲಿ ಸಿದ್ಧಗಂಗಾ ಮಠದ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಹಾಗೂ ಸುತ್ತೂರು ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಿದ್ಧಗಂಗಾ ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆಯ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜ್ಯಪಾಲರಾದ ಶ್ರೀ ವಜೂಭಾಯಿ ವಾಲಾರವರು ಮಾತನಾಡುತ್ತಾ ಆರೋಗ್ಯ, ಶಿಕ್ಷಣ, ಔದ್ಯೋಗಿಕ ಪ್ರಗತಿ, ಕೃಷಿಕ್ಷೇತ್ರದ ಮುನ್ನಡೆ ಇವೆಲ್ಲವೂ ಸರ್ಕಾರದ ಜವಾಬ್ದಾರಿಗಳಾಗಿವೆ. ಜೊತೆಗೆ ಇವೆಲ್ಲವುಗಳ ಮೂಲಶಕ್ತಿಯಾದ ಮಾನವಸಂಪನ್ಮೂಲವನ್ನು ಸನ್ಮಾರ್ಗದತ್ತ ತರುವಂತೆ ಮಾಡುವ, ಅಂದರೆ ಮಾನವರೆಲ್ಲರೂ ತಮ್ಮತಮ್ಮ ಜೀವನವನ್ನು ಸರಿದಾರಿಯಲ್ಲಿ ನಡೆಯಿಸುವಂತೆ ಮಾಡುವುದು ಧರ್ಮಗುರುಗಳ ಜವಾಬ್ದಾರಿಯಾಗಿದೆ ಎಂದರು. ದಕ್ಷಿಣ ಭಾರತದ ಮಠಾಧೀಶರ ಪರಂಪರೆ ನಾನು ಕಂಡಂತೆ ಧರ್ಮ, ಸಂಸ್ಕೃತಿ, ಆಚಾರ, ವಿಚಾರಗಳ ಉಪದೇಶ ಮತ್ತು ಅನುಷ್ಠಾನಗಳಿಗಷ್ಟೇ ಸೀಮಿತವಾಗಿರದೆ ಮಠಗಳು ಮನುಷ್ಯಸಮುದಾಯದ ಒಳಿತಿಗೆ ಬೇಕಾದ ಶಿಕ್ಷಣ, ಆರೋಗ್ಯ ಅದರಲ್ಲೂ ಉನ್ನತ ಶಿಕ್ಷಣ, ಸಾಮಾಜಿಕ ಸೇವೆಗಳಲ್ಲಿಯೂ ಸಹ ತೊಡಗಿಕೊಂಡಿರುವುದು ಅತ್ಯಂತ ಅಭಿಮಾನದ ಸಂಗತಿ ಎಂದರು.

ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ, ಜಲಸಂಪನ್ಮೂಲ ಸಚಿವ ಶ್ರೀ ಎಂ.ಬಿ. ಪಾಟೀಲ್, ಮಾಜಿ ಸಂಸದ ಶ್ರೀ ಜಿ.ಎಸ್. ಬಸವರಾಜು, ಶಾಸಕರಾದ ಡಾ. ರಫೀಕ್ ಅಹಮದ್ ಮುಂತಾದವರು ಭಾಗವಹಿಸಿದ್ದರು.

**ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಸಮಾರಂಭ**

ದಿನಾಂಕ 11.9.2017 ರಂದು ನಗರದ ರಾಜೇಂದ್ರಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ 2015 ಹಾಗೂ 2016ನೇ ಸಾಲಿನ 'ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ' ಸಮಾರಂಭ ನೆರವೇರಿತು.

ಸಮಾರಂಭದಲ್ಲಿ 2015ರ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪಡೆದ ಡಾ. ನಾ. ಮೊಗಸಾಲೆಯವರ 'ಅರಿವಿನೊಡನೆ ಅನುಸಂಧಾನ' ಹಾಗೂ 2016ರ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪಡೆದ ಡಾ. ಪ್ರದೀಪಕುಮಾರ ಹೆಬ್ರಿಯವರ 'ಉಡುತಡಿಯ ಕಿಡಿ' ಪ್ರಶಸ್ತಿ ಪುರಸ್ಕೃತರ ಕೃತಿಗಳನ್ನು ಪರಿಚಯ ಮಾಡಿಕೊಡುತ್ತ ಮಾತನಾಡಿದ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ನಿರಂಜನ ವಾನಳ್ಳಿಯವರು, ಇಂದು ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ನಕಾರಾತ್ಮಕ ಚಿಂತನೆಗಳು ಬೆಳೆಯುವಂತಹ ವಾತಾವರಣ ದಿನೇದಿನೇ ಹೆಚ್ಚುತ್ತಿದೆ. ಇದರಿಂದ ಅನೇಕ ಸಂದರ್ಭಗಳಲ್ಲಿ ನಾಗರಿಕ ಸಮಾಜವು ತಲೆ ತಗ್ಗಿಸುವಂತಾಗುತ್ತದೆ. ಇಂತಹ ಸ್ಥಿತಿಯ ನಿರ್ಮೂಲನೆಗೆ ಅಲ್ಲಮಪ್ರಭು, ಬಸವಣ್ಣ ಹಾಗೂ ಅಕ್ಕಮಹಾದೇವಿ ಮೊದಲಾದ ದಾರ್ಶನಿಕರ ವಿಚಾರಗಳನ್ನು ಸಮಾಜದಲ್ಲಿ ಪ್ರಸಾರ ಮಾಡುವುದರ ಮೂಲಕ ಸುಸಂಸ್ಕೃತ ನಾಗರಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಿದೆ ಓದುಗರಿಗೆ ವಿಶೇಷ ಅನುಭವ ಮತ್ತು ಅರಿವು ನೀಡುವ ಕೃತಿಗಳಿಗೆ ಇಂದು ಗೌರವ ದೊರಕಿರುವುದು ಸಂತಸದ ವಿಚಾರ ಎಂದು ನುಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾಹಿತಿ ಡಾ. ನಾ. ಮೊಗಸಾಲೆಯವರು ನಮ್ಮಲ್ಲಿನ ಅಸಹಿಷ್ಣುತೆಯ ನಿವಾರಣೆಗೆ ಶರಣ ಸಂಸ್ಕೃತಿಯು ಉತ್ತರವಾಗಬೇಕಾಗಿದೆ. ಎನಗಿಂತ ಕಿರಿಯರಿಲ್ಲ ಎಂದಾಗ ಮಾತ್ರ ನಾವು ಸಮಾನತೆಯನ್ನು ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು. ಮತ್ತೊಬ್ಬ ಸಾಹಿತಿ ಡಾ. ಪ್ರದೀಪಕುಮಾರ ಹೆಬ್ರಿಯವರು ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತ ಶರಣ ಸಂಸ್ಕೃತಿ ಎಂಬುದು ಅಕ್ಷಯನಿಧಿಯಿದ್ದಂತೆ. ಅದನ್ನು ಅಧ್ಯಯನಕ್ಕೆ, ಆ ಮೂಲಕ ಆತ್ಮವಿಮರ್ಶೆಗೆ ಬಳಸಿಕೊಂಡಷ್ಟೂ ಸಾಹಿತ್ಯ ಬೆಳೆಯುವುದರ ಜೊತೆಗೆ ನಮ್ಮನ್ನೂ ಬೆಳೆಸುತ್ತದೆ ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ಎನ್.ಆರ್. ವಿಶುಕುಮಾರ್ ವಹಿಸಿದ್ದರು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಬಸವಣ್ಣನವರ ವಚನಗಳು- ಒಂದು ವಿಶ್ಲೇಷಣೆ**
ಎಲ್.ಎಸ್. ಕಾಡದೇವರಮಠ
ಪ್ರಕಾಶನ: ಶ್ರೀಮತಿ ಅನ್ನಪೂರ್ಣ ಎಂ. ಮೆಣಸಗಿ (ವಿದ್ಯಾನಿಧಿ ಪ್ರಕಾಶನ, ಪರವಾಗಿ), ಗದಗ. ಪು. 326, ಬೆಲೆ: 160/-

**ಇಷ್ಟಲಿಂಗ ನಿಷ್ಠ ಸರ್ವಜ್ಞ**
ಪ್ರೊ. ಶಂಕರಗೌಡ್ರು ಮ. ಬಿರಾದಾರ
ಪ್ರಕಾಶನ: ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
ಪು. 104, ಬೆಲೆ : 50/-

**ಬಸವಾದಿ ಶರಣರ ಆಯ್ದ ಸೂಳ್ನುಡಿಗಳು ಹಾಗೂ ನುಡಿಪರುಷ**
ಶ್ರೀ ಪಂಚಾಕ್ಷರಯ್ಯ ಹಿರೇಮಠ
ಪ್ರಕಾಶನ: ಶ್ರೀ ಪಂಚಾಕ್ಷರಯ್ಯ ಹಿರೇಮಠ, ಲಿಂಗಸೂರು ತಾ., ರಾಯಚೂರು ಜಿಲ್ಲೆ.
ಬೆಲೆ : ಉಚಿತ

**LIFF: Auto biography of Dr. Abhinava Kumara Channabasava Mahaswamiji**
ಪರಿಶೀಲನೆ : ಡಾ. ಸರ್ವಮಂಗಳಾ ಖಾನಪುರಿ ಮತ್ತು ಜಿ.ಕೆ. ನರಸಿರೆಡ್ಡಿ
ಪ್ರಕಾಶನ: **Bliss mindaspps publications, Bengaluru & Sri Kumareshwara Grantha Male, Olemath, Jamkhandi.**
ಪು. 140, ಬೆಲೆ : 125/-

**ಜಮಖಂಡಿ ಓಲೆಮಠ ಶ್ರೀಗಳ ಸಾಹಿತ್ಯಾವಲೋಕನ**
ಸಂ. ಡಾ. ಅಶೋಕ ನರೋಡೆ
ಪ್ರಕಾಶನ: ಶ್ರೀ ಕುಮಾರೇಶ್ವರ ಗ್ರಂಥಮಾಲೆ, ಓಲೆಮಠ, ಜಮಖಂಡಿ.
ಪು. 220, ಬೆಲೆ : 200/-

**ಬಸವಣ್ಣನವರ (108) ವಚನ ಪರುಷ ವಿವರಣೆ**
ಶ್ರೀ ಪಂಚಾಕ್ಷರಯ್ಯ ಹಿರೇಮಠ
ಪ್ರಕಾಶನ: ಶ್ರೀ ಪಂಚಾಕ್ಷರಯ್ಯ ಹಿರೇಮಠ, ಲಿಂಗಸೂರು, ರಾಯಚೂರು ಜಿಲ್ಲೆ.
ಉಚಿತ ಪ್ರತಿ

**ವಚನ ಸಂಸ್ಕೃತಿ**
ಶ್ರೀ ಮಹಾಂತದೇವರು
ಶ್ರೀ ಪ್ರಕಾಶ ಗಿರಿಮಲ್ಲನವರ
ಪ್ರಕಾಶನ: ಮಹಾಂತೇಶ್ವರ ಪ್ರಕಾಶನ ಮಹಾಂತೇಶ್ವರ ಮಠ, ಬೆಲ್ಲದ ಬಾಗೇವಾಡಿ, ಬೆಳಗಾವಿ ಜಿಲ್ಲೆ.
ಪು. 316, ಬೆಲೆ : 200/-

**ನಿರ್ವಾಣಜ್ಜಯ್ಯ**
ಶ್ರೀಮತಿ ವಿಜಯಸ್ವಾಮಿ
ಪ್ರಕಾಶನ: ಎನ್. ಮಹೇಶ್ ಮತ್ತು ಎನ್.ಎಂ. ಅಜಯ್, ಶ್ರೀ ನಿರ್ವಾಣಸ್ವಾಮಿ ಮಠ, ಕೈಮರ, ಚಿತ್ರದುರ್ಗ ಜಿಲ್ಲೆ.
ಪು. 72, ಬೆಲೆ : 50/-

**ಬಿಂಬಯಾನ**
ಎಸ್. ರಾಮಪ್ರಸಾದ್
ಪ್ರಕಾಶನ: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು. ಪು. 694, ಬೆಲೆ : 650/-

**ಕನ್ನಡದ ಮಹಾಮಾರ್ಗ ಡಾ. ಎಂ.ಎಂ. ಕಲಬುರ್ಗಿ**
ಡಾ. ರಾಮಕೃಷ್ಣ ಮರಾಠೆ
ಪ್ರಕಾಶನ: ಲಿಂಗಾಯತ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ- ಗದಗ.
ಪು. 242, ಬೆಲೆ : 100/-

**ಲಿಂಗಾಯತ ಅಧ್ಯಯನ ಸಂಸ್ಥೆ ಮತ್ತು ಮರಾಠಿ ಕಲಬುರ್ಗಿ**
ಪ್ರಕಾಶ ಗಿರಿಮಲ್ಲನವರ
ಪ್ರಕಾಶನ: ಲಿಂಗಾಯತ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ

ಸಂಸ್ಥಾನ ಮಠ, ಡಂಬಳ- ಗದಗ
ಪು. 132, ಬೆಲೆ : 60/-

**ಮರಾಠಿ ಕಲಬುರ್ಗಿ (ಡಾ. ಎಂ.ಎಂ. ಕಲಬುರ್ಗಿಯವರ ಕುರಿತು ಮರಾಠಿ ಲೇಖನಗಳ ಕನ್ನಡ ಅನುವಾದ)**
ಡಾ. ಸರಜೂ ಕಾಟ್ಕರ್
ಪ್ರಕಾಶನ: ಲಿಂಗಾಯತ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ- ಗದಗ.
ಪು. 112, ಬೆಲೆ : 80/-

**ಅನಾವರಣ (ಶಿವಾನಂದ ಸ್ವಾಮಿಗಳ ಸಮಗ್ರ ಸಾಹಿತ್ಯ ಸಂಪುಟ)**
ಡಾ. ಅಶೋಕ ನರೋಡೆ
ಪ್ರಕಾಶನ: Sri Siddeshwara Prakashana, Handigund Tq Belgavi Dist.
ಪು. 344, ಬೆಲೆ : 300/-

**ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ**
ಪ್ರೊ. ಜಿ. ಅಬ್ದುಲ್ ಬಷೀರ್
ಪ್ರಕಾಶನ: ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು
ಪು. 212, ಬೆಲೆ : 15/-

**The Quartarly Journal of the Mythic Society**
ಡಾ. ಎಂ.ಜೆ. ನಾಗರಾಜ್
ಪ್ರಕಾಶನ: ವಿ. ನಾಗರಾಜ್
ಬೆಂಗಳೂರು. ಪು. 179

**ಆರೂಢ ಸಂಗಮನಾಥ (ಭಕ್ತಿಪ್ರದಾನ ಕಿರು ನಾಟಕ)**
ಸಂಗಣ್ಣ ಹೋತಪೇಟ
ಪ್ರಕಾಶನ: ಸಂಗಮೇಶ ಪ್ರಕಾಶನ ಶಹಾಪೂರ ಪೇಟ, ಯಾದಗಿರಿ.
ಪು. 32, ಬೆಲೆ : 30/-

**ಸಮಗ್ರ ಸಂಶೋಧನೆಯ ಸಮೃದ್ಧ ವ್ಯಕ್ತಿತ್ವ ಡಾ. ಎಂ.ಎಂ. ಕಲಬುರ್ಗಿ**
ಪ್ರಕಾಶ ಗಿರಿಮಲ್ಲನವರ
ಪ್ರಕಾಶನ: ಆದಿತ್ಯ ಪಬ್ಲಿಕೇಶನ್, ಮಹಾಂತೇಶ ನಗರ, ಬೆಂಗಳೂರು.
ಪು. 128, ಬೆಲೆ : 120/-

**ಲಿಂಗಾಯತ ಅಧ್ಯಯನ ಸಂಸ್ಥೆ ಮತ್ತು ಡಾ. ಎಂ.ಎಂ. ಕಲಬುರ್ಗಿ**
ಪ್ರಕಾಶ ಗಿರಿಮಲ್ಲನವರ
ಪ್ರಕಾಶನ: ಲಿಂಗಾಯತ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ- ಗದಗ.
ಪು. 132, ಬೆಲೆ : 60/-

**ಡಾ. ಎಸ್.ಆರ್. ಗುಂಜಾಳ : ದಿನಚರಿಗಳಲ್ಲಿ ಕಂಡಂತೆ**
ಪ್ರಕಾಶ ಗಿರಿಮಲ್ಲನವರ
ಪ್ರಕಾಶನ: ಬೆಳದಿಂಗಳ ಪ್ರಕಾಶನ, ಬಸವ ಕಾಲೋನಿ, ಬೆಂಗಳೂರು.
ಪು. 168, ಬೆಲೆ : 80/-

**ನವೋತ್ಥಾನದ ಅಧ್ವರ್ಯುಗಳು**
ಎಸ್.ಆರ್. ರಾಮಸ್ವಾಮಿ
ಪ್ರಕಾಶನ: ರಾಷ್ಟ್ರೋತ್ಥಾನ ಸಾಹಿತ್ಯ ಕೆಂಪೇಗೌಡನಗರ, ಬೆಂಗಳೂರು.
ಪು. 284, ಬೆಲೆ : 200/-

**ಉದ್ಯೋಗ ಪರ್ವ (ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ ಅಭಿನಂದನ ಗ್ರಂಥ)**
ಸಂ. ಡಾ. ಎಸ್.ಟಿ. ಮೇರವಾಡೆ
ಡಾ. ಆರ್.ವಿ. ಪಾಟೀಲ
ಪ್ರಕಾಶನ: ಸೌಮ್ಯ ಪ್ರಕಾಶನ
ವಿಜಯಪುರ. ಪು. 622



ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102 ನೆಯ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಪರಿಷ್ಕೃತ ಚಿತ್ರಸಂಪುಟವನ್ನು ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಆಸಕ್ತಿಯಿಂದ ವೀಕ್ಷಿಸುತ್ತಿರುವ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು (29.8.2017)




ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೆಯ ಜಯಂತಿ ಕಾರ್ಯಕ್ರಮದ ಅಂಗವಾಗಿ ನಡೆದ ಪ್ರತಿಭಾಪುರಸ್ಕಾರ ಕಾರ್ಯಕ್ರಮ, ಪರಮಪೂಜ್ಯರ ಸಾನ್ನಿಧ್ಯದಲ್ಲಿ ಡಾ. ಸಿ.ಜಿ. ಬೆಟಸೂರಮಠ ಇವರಿಂದ ಪುರಸ್ಕಾರ ಸ್ವೀಕರಿಸುತ್ತಿರುವ ವಿದ್ಯಾರ್ಥಿಗಳು (29.8.2017)




ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೆಯ ಜಯಂತಿ ಮಹೋತ್ಸವದ ಅಂಗವಾಗಿ ನಡೆದ ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀಗಳವರ ಜೊತೆ ಜೆಎಸ್ಎಸ್ ಸಂಸ್ಥೆಗಳ ನಿವೃತ್ತ ಬಂಧುಗಳು (29.8.2017)




ಬೆಂಗಳೂರಿನ ಡಾ. ಸಿ. ಸೋಮಶೇಖರ ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನದ ವತಿಯಿಂದ ಜೀವಮಾನ ಸಾಧನೆಗಾಗಿ 'ಸಂಸ್ಕೃತಿ ಸಂಗಮ 2017' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ. ಡಾ. ಗುರುಲಿಂಗ ಕಾಪಸೆ, ಡಾ. ಬಿ.ಎ. ವಿವೇಕ ರೈ, ಶ್ರೀಮತಿ ಎಂ.ಎಸ್. ಶೀಲಾ ಅವರುಗಳಿಗೆ ಅಭಿನಂದಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಜರಗನಹಳ್ಳಿ ಶಿವಶಂಕರ್, ಡಾ. ಚಂದ್ರಶೇಖರ ಕಂಬಾರ, ಶ್ರೀ ಬಸವರಾಜ ಬೊಮ್ಮಾಯಿ, ಡಾ. ಸಿ. ಸೋಮಶೇಖರ್, ಶ್ರೀ ಬಿ.ಎಸ್. ಯಡಿಯೂರಪ್ಪ, ಪರಮಪೂಜ್ಯ ಶ್ರೀಗಳು, ಶ್ರೀಮತಿ ಎನ್. ಸರ್ವಮಂಗಳ, ಶ್ರೀ ನಾಗರಾಜಮೂರ್ತಿ ಮತ್ತಿತರರು (2.9.2017)




ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಡೆದ 2015 ಹಾಗೂ 2016ನೇ ಸಾಲಿನ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಪ್ರದಾನ ಸಮಾರಂಭ'. ಚಿತ್ರದಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀಮತಿ ಪ್ರೇಮ ಮೊಗಸಾಲೆ, ಡಾ. ನಿರಂಜನ ವಾನಳ್ಳಿ, ಶ್ರೀ ಎನ್.ಆರ್. ವಿಶುಕುಮಾರ್ ಹಾಗೂ ಶ್ರೀಮತಿ ರಾಜಲಕ್ಷ್ಮಿ ಹೆಬ್ರಿ, ಕುಳಿತಿರುವವರು ಡಾ. ನಾ.ಮೊಗಸಾಲೆ ಹಾಗೂ ಡಾ. ಪ್ರದೀಪ ಕುಮಾರ ಹೆಬ್ರಿ (11.9.2017)

Registered with the Registrar of Newspapers in India Under No. 50622/86
'Prasada' Bi-Monthly, Vol. 32 Issue No. 5, September-October 2017



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜರುಗಿದ ಬೆಳದಿಂಗಳ ಸಂಗೀತ 192ರ ಕಾರ್ಯಕ್ರಮದಲ್ಲಿ ವಿದುಷಿ ಮಹಾಲಕ್ಷ್ಮಿ ಶೆಣೈ ಅವರಿಂದ ಗಾಯನ. ಪಕ್ಕವಾದ್ಯ ಸಹಕಾರದಲ್ಲಿ ಪಂ. ಭೀಮಾಶಂಕರ್ ಬಿದನೂರು (ತಬಲ) ಮತ್ತು ಪಂ. ಸತೀಶ್ ಕೊಳ್ಳಿ (ಹಾರ್ಮೋನಿಯಂ). (5.10.2017)

ಸದಸ್ಯತ್ವದ ವಿವರ

ದಶವಾರ್ಷಿಕ: 500 ರೂ. * ವಾರ್ಷಿಕ: 100 ರೂ. * ಬಿಡಿ ರೂ.: 10 ರೂ.

e-mail: jsspublications@gmail.com * www.jssonline.org